"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

13ನೇ ಸೆಪ್ಟೆಂಬರ್ 2021
ಸೋಮವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ**

**ಮಾಜಿ ಸಚಿವರು, ಮಾಜಿ ಸಂಸದರು, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಮಾಜಿ ಸದಸ್ಯರುಗಳು, ಕನ್ನಡದ ಹಿರಿಯ ಸಾಹಿತಿಗಳು/ಕವಿಗಳು/ ನಟ,ನಟಿಯರು/ಕಲಾವಿದರು/ಹಿರಿಯ ತಜ್ಞ ವೈದ್ಯರು, ಹಾಗೂ ಶಿಕ್ಷಣ ತಜ್ಞರು ಸೇರಿದಂತೆ ಕೋವಿಡ್-19ರ 2ನೇ ಅಲೆಯ ಭೀಕರ ಕಾಯಿಲೆಗೆ ತುತ್ತಾದ ಕೊರೋನಾ ವಾರಿಯರ್ಸ್ ಗಳು, ಸಹಸ್ರಾರು ನಾಗರೀಕರು ನಿಧನರಾಗಿರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
- ಶ್ರೀ ಸಿ.ಎಂ.ಇಬ್ರಾಹಿಂ

**2. ನೂತನ ಸಚಿವರ ಪರಿಚಯ**

**3. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ.**

**ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು.**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**4. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**191- ಕನ್ನಡ ಭಾಷೆ ಸಂಸ್ಕೃತಿ ಕುರಿತು.**

- ಡಾ.ತೇಜಸ್ವಿನಿ ಗೌಡ
- ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**113- ಕೌಶಲ್ಯಾಭಿವೃದ್ಧಿ ಯೋಜನೆಯಡಿ ಕೈಗೊಳಲಾದ ಯೋಜನೆಗಳ ಕುರಿತು.**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಯು.ಬಿ.ವೆಂಕಟೇಶ್
- ಡಾ.ಸಿ.ಎನ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ, ಐ.ಟಿ./ಬಿ.ಟಿ. ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರು)

**237 – ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದ ಬಗ್ಗೆ.**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ)

**173- ಹೊಸ ಉದ್ಯೋಗ ಸೃಷ್ಟಿಸುವ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ.ಸಿ.ಎನ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ, ಐ.ಟಿ./ಬಿ.ಟಿ. ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರು)

**098- ಜೋಯಿಡಾ ತಾಲ್ಲೂಕಿನಲ್ಲಿ ಅನೇಕ ಶಾಲಾ ಕಟ್ಟಡಗಳು ಬೀಳುವ ಪರಿಸ್ಥಿತಿಯಲ್ಲಿರುವುದರ ಬಗ್ಗೆ**

- ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**289 – ನವೀಕರಿಸಬಹುದಾದ ಇಂಧನ ಉತ್ಪಾದನೆಗಳ ಉತ್ತೇಜನ ನೀಡುವ ಬಗ್ಗೆ**

- ಶ್ರೀ ಬಿ.ಎಂ.ಫಾರೂಖ್
- ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**177- ರಾಜ್ಯದಲ್ಲಿ ಸೌರಶಕ್ತಿ ವಿದ್ಯುತ್ ಮೇಲ್ಛಾವಣಿಯ ಉತ್ಪಾದನೆಯ ಬಗ್ಗೆ**

- ಶ್ರೀ ಎಂ.ನಾರಾಯಣಸ್ವಾಮಿ
- ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**138- ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಕುರಿತು**

- ಶ್ರೀ ಹೆಚ್.ಎಸ್.ರಮೇಶ್ ಗೌಡ
- ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರಾಜ್ಯದ ಸರ್ಕಾರಿ ಐ.ಟಿ.ಐ. ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಳೆದ 4 ತಿಂಗಳಿಂದ ವೇತನ ಬಿಡುಗಡೆ ಆಗದಿರುವ ಕುರಿತು.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)

**ಆ) ಬೆಂಗಳೂರು ನಗರ ಬಸವನಗುಡಿಯಲ್ಲಿರುವ ಕೆಂಪೇಗೌಡ ಜಿಂಕೆ ಪಾರ್ಕ್ ಸಮರ್ಪಕವಾಗಿ ನಿರ್ವಹಣೆ ಇಲ್ಲದೇ ಪುಂಡುಪೋಕರಿಗಳ ಆವಾಸಸ್ಥಾನವಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)

**ಇ) ಅರಣ್ಯ ಜಮೀನು ಸಾಗುವಳಿದಾರರಿಗೆ ಪಹಣಿ ನೀಡುವ ಕುರಿತು 1972ರ ಆದೇಶ ತಡೆಯಾಗಿರುವ ಬಗ್ಗೆ.**

- ಶ್ರೀ ಘೋಟ್ನೇಕರ ಶ್ರೀಕಾಂತ್ ಲಕ್ಷ್ಮಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)

**ಈ) ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ರೈತರು ಬೆಳೆದಿರುವ ಈರುಳ್ಳಿ ಬೆಳೆಗೆ ಕೊಳೆ ರೋಗ ಬಂದು ಬೆಳೆ ನಷ್ಟವಾಗಿರುವುದಕ್ಕೆ ಪರಿಹಾರ ಕೋರಿರುವ ಬಗ್ಗೆ.**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)

**6. ಕಾರ್ಯದರ್ಶಿಯವರ ವರದಿ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ಸಂತಾಪ ಸೂಚನೆಗಳು**

**ಮಾಜಿ ಕೇಂದ್ರ ಸಚಿವರು, ಮಾಜಿ ಲೋಕಸಭೆಯ ಸದಸ್ಯರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರಾಗಿದ್ದ ಸನ್ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಮತ್ತು ರಾಷ್ಟ್ರ ಚಲನಚಿತ್ರ ಪ್ರಶಸ್ತಿ ವಿಜೇತರಾದ ನಟ ಶ್ರೀಯುತ ವಿಜಯ್ (ಸಂಚಾರಿ ವಿಜಯ್)ರವರುಗಳು ನಿಧನದ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)
- ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)

**<><><>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(627) 13.9.2021 11.00 (1) ಪಿಕೆ:ಜಿಆರ್ -

(628) 13.9.2021 11.10 ಡಿಎಸ್:ಜಿಆರ್ - (629) 11.20 ಬಿಕೆಪಿ:ಎಂಡಿ

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ 13ನೇ ಸೆಪ್ಟೆಂಬರ್ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ**

**ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 2 ನಿಮಿಷಕ್ಕೆ**

**ಸಮಾವೇಶಗೊಂಡಿತು.**

**ಸಭಾಪತಿ ( ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**
**ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭಗೊಂಡಿತು.**

## 1. ಸಂತಾಪ ಸೂಚನೆ

**ವಿಷಯ: ಮಾಜಿ ಸಚಿವರು, ಮಾಜಿ ಸಂಸದರು, ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಕಮಲಾರ ಭೀಮಶಾ ಶಾಣಪ್ಪ, ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಮುಮ್ತಾಜ್ ಅಲಿ ಖಾನ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಕವಿಗಳಾಗಿದ್ದ ಡಾ:ಸಿದ್ದಲಿಂಗಯ್ಯ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಎಸ್.ಎಂ. ಆನಂದ್, ಮಾಜಿ ಸಚಿವರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ, ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು, ಮಾಜಿ ಸಚಿವರು ಹಾಗೂ ಮಾಜಿ ಸಂಸದರಾಗಿದ್ದ ಕೃಷ್ಣ, ಮಾಜಿ ಸಂಸದರು, ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ:ಜಿ. ಮಾದೇಗೌಡ, ಮಾಜಿ ಸಂಸದರಾಗಿದ್ದ ಷಣ್ಮುಖಪ್ಪ ಬಸಪ್ಪ ಸಿದ್ನಾಳ, ಮಾಜಿ ಸಂಸದರಾಗಿದ್ದ ಎಂ. ರಾಜಗೋಪಾಲ, ಕೇಂದ್ರದ ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಬಾಬಾಗೌಡ ರುದ್ರಗೌಡ ಪಾಟೀಲ್, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಎ.ಕೆ. ಅಬ್ದುಲ್ ಸಮದ್, ಕನ್ನಡ ನಿಘಂಟು ತಜ್ಞರಾದ ಪ್ರೊ. ಜಿ. ವೆಂಕಟಸುಬ್ಬಯ್ಯ, ಹಿರಿಯ ಕವಿ ಜರಗನಹಳ್ಳಿ ಶಿವಶಂಕರ್, ಶಿಲ್ಪಕಲಾವಿದ ಷಣ್ಮುಖಪ್ಪ ಕಾಶಪ್ಪ ಯರಕರ, ಚಲನಚಿತ್ರ ನಟ ಅರವಿಂದ್, ಹಿರಿಯ ಶಿಲ್ಪ ಕಲಾವಿದೆ ಕನಕ ಮೂರ್ತಿ, ಹಿರಿಯ ವಿದ್ವಾಂಸ ಡಾ:ಲಕ್ಷ್ಮಿತಾತಾಚಾರ್, ನೃತ್ಯ ಕಲಾವಿದೆ ಬಿ. ಭಾನುಮತಿ, ಹಿರಿಯ ತಜ್ಞ ವೈದ್ಯ ಡಾ:ಅಶೋಕ ರಾಮಣ್ಣ ಸೊನ್ನದ, ಸ್ವಾತಂತ್ರ್ಯ ಹೋರಾಟಗಾರ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ, ಹಿರಿಯ ಸಾಹಿತಿ ಪ್ರೊ. ವಸಂತ ಕುಷ್ಟಗಿ, ಹಿರಿಯ ಶಿಕ್ಷಣ ತಜ್ಞ ಪ್ರೊ. ಎಂ.ಐ. ಸವದತ್ತಿ, ಹಿರಿಯ ಚಲನಚಿತ್ರ ನಟಿ ಜಯಂತಿ, ಖ್ಯಾತ ವೈದ್ಯೆ ಹಾಗೂ ಲೇಖಕಿ ಡಾ:ಹೆಚ್. ಗಿರಿಜಮ್ಮ ಅವರುಗಳು ನಿಧನರಾದುದರ ಬಗ್ಗೆ.**

\- - - -

**ಸಭಾಪತಿಯವರು:-** ಮಾಜಿ ಸಚಿವರು, ಮಾಜಿ ಸಂಸದರು, ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಕಮಲಾಬಾಯಿ ಭೀಮಶಾ ಶಾಣಪ್ಪ, ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಮುಮ್ತಾಜ್ ಅಲಿ ಖಾನ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಕವಿಗಳಾಗಿದ್ದ ಡಾ:ಸಿದ್ದಲಿಂಗಯ್ಯ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಎಸ್.ಎಂ. ಆನಂದ್, ಮಾಜಿ ಸಚಿವರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ, ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು, ಮಾಜಿ ಸಚಿವರು ಹಾಗೂ ಮಾಜಿ ಸಂಸದರಾಗಿದ್ದ ಕೃಷ್ಣ, ಮಾಜಿ ಸಂಸದರು, ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ:ಜಿ. ಮಾದೇಗೌಡ, ಮಾಜಿ ಸಂಸದರಾಗಿದ್ದ ಷಣ್ಮುಖಪ್ಪ ಬಸಪ್ಪ ಸಿದ್ನಾಳ, ಮಾಜಿ ಸಂಸದರಾಗಿದ್ದ ಎಂ. ರಾಜಗೋಪಾಲ, ಕೇಂದ್ರದ ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಬಾಬಾಗೌಡ ರುದ್ರಗೌಡ ಪಾಟೀಲ್, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಎ.ಕೆ. ಅಬ್ದುಲ್ ಸಮದ್, ಕನ್ನಡ ನಿಘಂಟು ತಜ್ಞರಾದ ಪ್ರೊ. ಜಿ. ವೆಂಕಟಸುಬ್ಬಯ್ಯ, ಹಿರಿಯ ಕವಿ ಜರಗನಹಳ್ಳಿ ಶಿವಶಂಕರ್, ಶಿಲ್ಪಕಲಾವಿದ ಷಣ್ಮುಖಪ್ಪ ಕಾಶಪ್ಪ ಯರಕರ, ಚಲನಚಿತ್ರ ನಟ ಅರವಿಂದ್, ಹಿರಿಯ ಶಿಲ್ಪ ಕಲಾವಿದೆ ಕನಕ ಮೂರ್ತಿ, ಹಿರಿಯ ವಿದ್ವಾಂಸ ಡಾ:ಲಕ್ಷ್ಮಿತಾತಾಚಾರ್, ನೃತ್ಯ ಕಲಾವಿದೆ ಬಿ. ಭಾನುಮತಿ, ಹಿರಿಯ ತಜ್ಞ ವೈದ್ಯ ಡಾ:ಅಶೋಕ ರಾಮಣ್ಣ ಸೊನ್ನದ, ಸ್ವಾತಂತ್ರ್ಯ ಹೋರಾಟಗಾರ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ, ಹಿರಿಯ ಸಾಹಿತಿ ಪ್ರೊ. ವಸಂತ ಕುಷ್ಟಗಿ, ಹಿರಿಯ ಶಿಕ್ಷಣ ತಜ್ಞ ಪ್ರೊ. ಎಂ.ಐ. ಸವದತ್ತಿ, ಹಿರಿಯ ಚಲನಚಿತ್ರ ನಟಿ ಜಯಂತಿ, ಖ್ಯಾತ ವೈದ್ಯೆ ಹಾಗೂ ಲೇಖಕಿ ಡಾ:ಹೆಚ್. ಗಿರಿಜಮ್ಮ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಜಿ ಸಚಿವರು, ಮಾಜಿ ಸಂಸದರು, ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಕಮಲಾರ ಭೀಮಶಾ ಶಾಣಪ್ಪ ಅವರು ದಿನಾಂಕ:09.05.2021ರಂದು ನಿಧನ ಹೊಂದಿರುತ್ತಾರೆ.

1938ರ ಮೇ, 16ರಂದು ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ರಾವೂರ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಪದವೀಧರರಾಗಿದ್ದರು. ಎಸಿಸಿಯಲ್ಲಿ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ಶ್ರೀಯುತರು ಎಬಿಎಲ್ ಕಂಪನಿಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಕಲ್ಯಾಣ ಕರ್ನಾಟಕ ಭಾಗದ ಪ್ರಭಾವಿ ದಲಿತ ಮುಖಂಡರಾಗಿದ್ದ ಶ್ರೀಯುತರು ಎಸಿಸಿ ಸಿಮೆಂಟ್ ಕಾರ್ಖಾನೆಯಲ್ಲಿ ಕಾರ್ಮಿಕ ಮುಖಂಡರಾಗಿ ಅನೇಕ ಹೋರಾಟಗಳನ್ನು ರೂಪಿಸಿ ಕಾರ್ಮಿಕ ನಾಯಕರಾಗಿ ಗುರುತಿಸಿಕೊಂಡಿದ್ದರು. 7 ಮತ್ತು 8ನೇ ವಿಧಾನ ಸಭೆಯ ಸದಸ್ಯರಾಗಿ, 1996 ರಿಂದ 2002 ರವರೆಗೆ ಮತ್ತು 2012 ರಿಂದ 2018 ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ, 2006 ರಿಂದ 2012 ರವರೆಗೆ ರಾಜ್ಯ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಜೆ.ಹೆಚ್. ಪಟೇಲ್‌ರವರ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಅಪರೂಪದ ವಾಗ್ಮಿ ಹಾಗೂ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಮುಮ್ತಾಜ್ ಅಲಿಖಾನ್ ಅವರು ದಿನಾಂಕ: 07.06.2021ರಂದು ನಿಧನ ಹೊಂದಿರುತ್ತಾರೆ.

1927ರ ಮೇ, 28ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಡಿ. ಪಾಳ್ಯದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಬಿ.ಎಲ್., ಪಿಹೆಚ್‌ಡಿ ಪದವೀಧರರಾಗಿದ್ದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಮಾಜ ಶಾಸ್ತ್ರ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಕೊಡುಗೆ ನೀಡಿದ್ದರು. ಮೂರು ದಶಕಗಳಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಯನ್ನು ನಡೆಸುತ್ತಿದ್ದ ಶ್ರೀಯುತರು ತಮ್ಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮಕ್ಕಳಿಗೆ ತಮಗೆ ಬರುತ್ತಿದ್ದ ಪಿಂಚಣಿ ಮತ್ತು ಇತರೆ ಸ್ವಂತ ಮೂಲಗಳಿಂದ ಉಚಿತ ಶಿಕ್ಷಣ, ಮಧ್ಯಾಹ್ನದ ಬಿಸಿಯೂಟ ಸಹಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸುತ್ತಿದ್ದರು. ಕನ್ನಡದ ಪತ್ರಿಕೆಗಳ ಸಂಪಾದಕರ ಪತ್ರ ವಿಭಾಗಕ್ಕೆ ಬರೆಯುವ ಖಾಯಂ ಬರಹಗಾರರಾಗಿದ್ದರು. ಶ್ರೀಯುತರಿಗೆ ಅತ್ಯುತ್ತಮ ಲೇಖಕರ ಪ್ರಶಸ್ತಿ ಹಾಗೂ ಸಮಾಜ ಸೇವೆಗೆ ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 2008 ರಿಂದ 2013ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮನಿರ್ದೇಶನ ಹೊಂದಿದ ಶ್ರೀಯುತರು ಅಲ್ಪಸಂಖ್ಯಾತರ ಕಲ್ಯಾಣ, ಹಜ್, ವಕ್ಫ್ ಖಾತೆ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನ ರಾಜಕಾರಣಿ ಹಾಗೂ ಸಮಾಜ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಕವಿಗಳಾಗಿದ್ದ ಡಾ:ಸಿದ್ದಲಿಂಗಯ್ಯ ಅವರು ದಿನಾಂಕ: 11.06.2021ರಂದು ನಿಧನ ಹೊಂದಿರುತ್ತಾರೆ.

1954ರ ಫೆಬ್ರುವರಿ, 3ರಂದು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಜನಿಸಿದ್ದ ಶ್ರೀಯುತರು 1976ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ವರ್ಣ ಪದಕದೊಂದಿಗೆ ಕನ್ನಡದಲ್ಲಿ ಎಂ.ಎ. ಪದವಿ ಪಡೆದಿದ್ದರು. ಪ್ರೊ. ಜಿ.ಎಸ್. ಶಿವರುದ್ರಪ್ಪ ಅವರ ಮಾರ್ಗದರ್ಶನದಲ್ಲಿ 'ಗ್ರಾಮದೇವತೆಗಳು' ಎಂಬ ಪೌಢ ಪ್ರಬಂಧದ ಮೇಲೆ 1989ರಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಡಾ: ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು, 1988 ರಿಂದ 1994 ರವರೆಗೆ ಹಾಗೂ 1995 ರಿಂದ 2001 ರವರೆಗೆ ಎರಡು ಬಾರಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಶ್ರೀಯುತರು ಸೇವೆ ಸಲ್ಲಿಸಿರುತ್ತಾರೆ.

ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು, ಮೆರವಣಿಗೆ, ನನ್ನ ಜನಗಳು, ಅಲ್ಲೇ ಕುಂತವರು ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದರು. ಶ್ರೀಯುತರ ರಚನೆಯ 'ಹೊಲೆ ಮಾದಿಗರ ಹಾಡು' ಕವನ ಸಂಕಲನವು ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಶ್ರೇಷ್ಠ ಕೃತಿಯಾಗಿರುತ್ತದೆ. ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನಾಡೋಜ ಸಂದೇಶ ಪ್ರಶಸ್ತಿ, ಡಾ: ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಶ್ರೀಯುತರು ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಹಿರಿಯ ಕವಿಗಳು ಹಾಗೂ ಸಾಹಿತ್ಯ ಲೋಕದ ಮೇರು ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಎಸ್.ಎಂ. ಆನಂದ್ ಅವರು ದಿನಾಂಕ: 01.08.2021ರಂದು ನಿಧನ ಹೊಂದಿರುತ್ತಾರೆ.

1949ರ ಡಿಸೆಂಬರ್, 14ರಂದು ಹಾಸನ ತಾಲ್ಲೂಕಿನ ಶಂಕರನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಎಲ್.ಎಲ್.ಬಿ., ಪದವಿಯನ್ನು ಹೊಂದಿದ್ದು ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು 2004 ರಿಂದ 2010ರವರೆಗೆ ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ, ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷರಾಗಿ ಹಾಗೂ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ನಿರಂತರವಾಗಿ ಒಂಭತ್ತು ವರ್ಷಗಳ ಕಾಲ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಶ್ರೀಯುತರು ದಾಖಲೆ ಅವಧಿಯ ಸೇವೆ ಸಲ್ಲಿಸಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ವಕೀಲರು ಹಾಗೂ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾಜಿ ಸಚಿವರು ಹಾಗೂ ಹಾಲಿ ವಿಧಾನಸಭೆಯ ಸದಸ್ಯರಾಗಿದ್ದÀ ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ ಅವರು ದಿನಾಂಕ: 08.06.2021ರಂದು ನಿಧನ ಹೊಂದಿರುತ್ತಾರೆ.

1937ರ ಫೆಬ್ರುವರಿ, 2 ರಂದು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ರೈತರ ಬಗ್ಗೆ ನಿರಂತರ ಕಳಕಳಿ ಹೊಂದಿದ್ದ ಶ್ರೀಯುತರು ಬೆಳೆ ವಿಮೆ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದರ ಪರಿಣಾಮವಾಗಿ ರೈತರಿಗೆ ಬೆಳೆವಿಮೆ ವಿಧಾನಗಳ ಬಗ್ಗೆ ಜಾಗೃತಿ ಮೂಡಿಸಿ ಹಾವೇರಿ ಜಿಲ್ಲೆಯ ರೈತರಿಗೆ ಅತಿ ಹೆಚ್ಚು ಬೆಳೆ ವಿಮೆ ಹಣವನ್ನು ಕೊಡಿಸಲು ಕಾರಣೀಭೂತರಾಗಿದ್ದರು. ಅಪರಿಮಿತ ಜ್ಞಾನಿಯಾಗಿ ಬಹುಭಾಷಾ ಪ್ರವೀಣರಾಗಿ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಿದ್ದರು. 1974ರಲ್ಲಿ ಪುರಸಭೆ ಅಧ್ಯಕ್ಷರಾಗಿ ರಾಜಕೀಯ ಪ್ರವೇಶಿಸಿದ ಶ್ರೀಯುತರು 7, 8, 10, 12, 13 ಮತ್ತು 15ನೇ ವಿಧಾನಸಭೆಗೆ ಹಾನಗಲ್ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಒಟ್ಟು ಆರು ಭಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿ, ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಸಾರಿಗೆ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಅರಣ್ಯ ಇಲಾಖೆ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು, ಮಾಜಿ ಸಚಿವರು ಹಾಗೂ ಮಾಜಿ ಸಂಸದರಾಗಿದ್ದ ಕೃಷ್ಣ ಅವರು ದಿನಾಂಕ: 21.05.2021ರಂದು ನಿಧನ ಹೊಂದಿರುತ್ತಾರೆ.

1941ರ ಜುಲೈ 01 ರಂದು ಮಂಡ್ಯ ಜಿಲ್ಲೆಯ ಕೊತ್ತಮಾರನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಹಾಗೂ ಬಿ.ಎಲ್., ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಜನಪರ ಕಾಳಜಿಯಿಂದ ರೈತರ ಹೋರಾಟದಲ್ಲಿ ಭಾಗಿಯಾಗುತ್ತಿದ್ದರಲ್ಲದೆ ಭ್ರಷ್ಟಾಚಾರ ವಿರೋಧಿ ಸಂಘದ ಸಂಸ್ಥಾಪಕ ಹಾಗೂ ಸಂಚಾಲಕರಾಗಿದ್ದರು. 1978-83 ರವರೆಗೆ ಕೆ.ಆರ್.ಪೇಟೆ ತಾಲ್ಲೂಕು ಬೋರ್ಡ್ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ ಶ್ರೀಯುತರು 8, 10 ಮತ್ತು 12ನೇ ವಿಧಾನ ಸಭೆಯ ಸದಸ್ಯರಾಗಿದ್ದÀರಲ್ಲದೆ, 1996-98 ರವರೆಗೆ ಲೋಕಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. 2004ರಲ್ಲಿ ವಿಧಾನ ಸಭೆಯ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಪ್ರಗತಿಪರ ನಿಲುವುಗಳನ್ನು ಮೈಗೂಡಿಸಿಕೊಂಡು ಪ್ರಾಮಾಣಿಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದ ಕಾರಣದಿಂದಾಗಿ ಮಂಡ್ಯದ ಗಾಂಧಿ ಎಂದೇ ಹೆಸರುವಾಸಿಯಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ರೈತ ಪರ ಹೋರಾಟಗಾರ ಹಾಗೂ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಜಿ ಸಂಸದರು, ಮಾಜಿ ಸಚಿವರು, ವಿಧಾನಸಭೆಯ ಮಾಜಿ ಸದಸ್ಯರು, ಮಂಡ್ಯ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಕಾವೇರಿ ಹೋರಾಟದ ರೂವಾರಿ ಡಾ: ಜಿ. ಮಾದೇಗೌಡ ಅವರು ದಿನಾಂಕ: 17.07.2021ರಂದು ನಿಧನ ಹೊಂದಿರುತ್ತಾರೆ.

1928ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಗುರುದೇವರ ಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಬಿ.ಎಲ್., ಪದವೀಧರರಾಗಿದ್ದರು. ಶಾಲಾ ಬಾಲಕರಾಗಿದ್ದಾಗಲೇ 1938ರಲ್ಲಿ ಶಿವಪುರ ಧ್ವಜ ಸತ್ಯಾಗ್ರಹ ಸೌಧದಲ್ಲಿ ನಡೆದ ಸತ್ಯಾಗ್ರಹ ಸಭೆಯಲ್ಲಿ ಭಾಗವಹಿಸಿ ನೀರು ಕೊಡುವ ಕಾಯಕ ಮಾಡಿದ್ದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಕರಪತ್ರ ವಿತರಿಸಿದ್ದ ಶ್ರೀಯುತರು 1962 ರಿಂದ 1989 ರವರೆಗೆ 3ನೇ ವಿಧಾನಸಭೆಯಿಂದ 8ನೇ ವಿಧಾನಸಭೆವರೆಗೆ ಸತತವಾಗಿ ಆರು ಬಾರಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದಿಂದ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಗುಂಡೂರಾವ್ ಅವರ ಸಂಪುಟದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾಗಿ, ಮಂಡ್ಯ ಲೋಕಸಭಾ ಕ್ಷೇತ್ರದಿಂದ 9ನೇ ಮತ್ತು 10ನೇ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಕೃಷ್ಣ ಮತ್ತು ಕಾವೇರಿ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಕಾವೇರಿ ಮಧ್ಯಂತರ ತೀರ್ಪನ್ನು ಪಾಲಿಸಲು ಸಾಧ್ಯವಿಲ್ಲವೆಂದು ಶಾಸನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲು ಶ್ರೀಯುತರು ಕಾರಣೀಭೂತರಾಗಿದ್ದರು. 1996ರಲ್ಲಿ ಕಾವೇರಿ ಹೋರಾಟ ತೀವ್ರಗೊಂಡಿದ್ದ ಸಂದರ್ಭದಲ್ಲಿ ತಮ್ಮ ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ರೈತರ ಪರವಾಗಿ ಕಾವೇರಿ ಹೋರಾಟದಲ್ಲಿ ಪಾಲ್ಗೊಂಡು ಕಾವೇರಿ ಚಳುವಳಿಯ ಮುಂದಾಳತ್ವ ವಹಿಸಿಕೊಂಡು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯನ್ನು ಸ್ಥಾಪಿಸಿ ಅಧ್ಯಕ್ಷರಾಗಿ ಹೋರಾಟ ಮಾಡಿದ್ದರು. ಮಂಡ್ಯ ಜಿಲ್ಲೆಯಲ್ಲಿ ನಡೆದ 63ನೇ ಸಾಹಿತ್ಯ ಸಮ್ಮೇಳನಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರಿಗೆ ಮೈಸೂರು ವಿಶ್ವವಿದ್ಯಾಲಯವು 2012ರಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತ್ತು. ಶ್ರೀಯುತರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವುದಲ್ಲದೆ, ಕೃಷಿ ಕ್ಷೇತ್ರದಲ್ಲಿಯೂ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು, ರೈತ ಪರ ಹೋರಾಟಗಾರರು ಆಗಿದ್ದಂತಹ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾಜಿ ಸಂಸದರಾದ ಷಣ್ಮುಖಪ್ಪ ಬಸಪ್ಪ ಸಿದ್ನಾಳ ಅವರು ದಿನಾಂಕ:27.04.2021ರಂದು ನಿಧನ ಹೊಂದಿರುತ್ತಾರೆ.

1936ರ ಏಪ್ರಿಲ್, 6ರಂದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಪಗಾವಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರು ಮತ್ತು ವಕೀಲರಾಗಿದ್ದರು. ಬೆಳಗಾವಿ ವಕೀಲರ ಸಂಘದ ಅಧ್ಯಕ್ಷರಾಗಿ, ಬೆಳಗಾವಿ ಜಿಲ್ಲೆಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ, ಡಿಸಿಸಿ ಬ್ಯಾಂಕಿನ ಪ್ರಧಾನ ಕಾರ್ಯದರ್ಶಿಯಾಗಿ, ಗ್ರಾಮೀಣ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 7, 8, 9 ಮತ್ತು 10ನೇ ಲೋಕಸಭೆಗೆ ಸಂಸದರಾಗಿ

ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಸತತವಾಗಿ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದು, ಬೆಳಗಾವಿ ಜಿಲ್ಲೆಯ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ನೀಡಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾಜಿ ಸಂಸದರಾದ ಎಂ. ರಾಜಗೋಪಾಲ ಅವರು ದಿನಾಂಕ:23.05.2021ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು 1982-88ರವರೆಗೆ ರಾಜ್ಯಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ

ಕೇಂದ್ರದ ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಬಾಬಾಗೌಡ ರುದ್ರಗೌಡ ಪಾಟೀಲ್ ಅವರು ದಿನಾಂಕ: 21.05.2021ರಂದು ನಿಧನ ಹೊಂದಿರುತ್ತಾರೆ.

06ನೇ ಜನವರಿ, 1945ರಂದು ಬೆಳಗಾವಿ ಜಿಲ್ಲೆಯ ಚಿಕ್ಕಬಾಗೇವಾಡಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಪದವೀಧರರಾಗಿ, ವೃತ್ತಿಯಲ್ಲಿ ಕೃಷಿಕರಾಗಿದ್ದರು. ರಾಜ್ಯದ ಉದ್ದಗಲಕ್ಕೂ ಸಂಚರಿಸಿ ರೈತ ಸಂಘ ಕಟ್ಟಿ ಬೆಳೆಸಿದ್ದರು. 1989ರಲ್ಲಿ ಏಕಕಾಲಕ್ಕೆ ಬೆಳಗಾವಿಯ ಕಿತ್ತೂರು ಹಾಗೂ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೇ ಬಾರಿಗೆ ಚುನಾಯಿತರಾಗುವ ಮೂಲಕ ದಾಖಲೆ ನಿರ್ಮಿಸಿದ್ದ ಶ್ರೀಯುತರು ಜನಾನುರಾಗಿ ಹೋರಾಟವನ್ನು ಮೈಗೂಡಿಸಿಕೊಂಡಿದ್ದರು. ವಾಜಪೇಯಿ ಅವರ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಗ್ರಾಮೀಣ ಪ್ರದೇಶದ ತೋಟದ ರಸ್ತೆಗಳ ಹಾಗೂ ಹಳ್ಳಿಗಳ ರಸ್ತೆಗಳ ಸುಧಾರಣೆಗಾಗಿ ಸಾವಿರಾರು ಕೋಟಿ ರೂ. ಅನುದಾನ ನೀಡಿ 'ಗ್ರಾಮ ಸಡಕ್' ಯೋಜನೆಯನ್ನು ಜಾರಿಗೊಳಿಸಿದ ಕೀರ್ತಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ರಾಜಕೀಯ ಮುತ್ಸದ್ದಿ ರೈತ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಎ.ಕೆ. ಅಬ್ದುಲ್ ಸಮದ್ ಅವರು ದಿನಾಂಕ:07.09.2021ರಂದು ನಿಧನ ಹೊಂದಿರುತ್ತಾರೆ.

ರಾಮನಗರದಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ. ಮತ್ತು ಬಿ.ಎಲ್. ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದ ಶ್ರೀಯುತರು ಕೇಂದ್ರ ಮುಸ್ಲಿಂ ಅಸೋಸಿಯೇಷನ್ ಅಧ್ಯಕ್ಷರಾಗಿ, ಅಮಾನತ್ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ, 1978ರಲ್ಲಿ ರಾಮನಗರ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀಯುತರು ಆರ್. ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಕನ್ನಡ ನಿಘಂಟು ಲೋಕವನ್ನು ಶ್ರೀಮಂತಗೊಳಿಸಿದ ಪದ ಬ್ರಹ್ಮ, ಶತಾಯುಷಿ, ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ದಿನಾಂಕ:18.04.2021ರಂದು ನಿಧನ ಹೊಂದಿರುತ್ತಾರೆ.

1913ರ ಆಗಸ್ಟ 23ರಂದು ಮಂಡ್ಯ ಜಿಲ್ಲೆಯ ಕೈಗೋನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಮೈಸೂರು ಮಹಾರಾಜ ಕಾಲೇಜಿನಿಂದ ಎಂ.ಎ., ಮತ್ತು ಬಿ.ಟಿ., ಪದವೀಧರರಾಗಿದ್ದರು. ಕನ್ನಡ ಸಾರಸ್ವತ ಲೋಕದಲ್ಲಿ 'ಜಿ.ವಿ' ಎಂದೇ ಹೆಸರಾಗಿದ್ದ ಇವರು ಮಂಡ್ಯದ ಪುರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿ, ನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಉಪ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸಿ 1973ರಲ್ಲಿ ನಿವೃತ್ತಿಯನ್ನು ಹೊಂದಿದ್ದರು. ಶ್ರೀಯುತರು ಭಾಷಾ ತಜ್ಞರಾಗಿ, ವ್ಯಾಕರಣ ತಜ್ಞರಾಗಿ, ಸಂಶೋಧಕರಾಗಿ, ಪ್ರಾಧ್ಯಾಪಕರಾಗಿ, ಎಲ್ಲಕ್ಕಿಂತ ಹೆಚ್ಚಾಗಿ ನಿಘಂಟು ರಚನೆಯ ಕಾರ್ಯದಲ್ಲಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡ ಕಾಯಕ ಜೀವಿಯಾಗಿದ್ದರು. "ಇಗೋ ಕನ್ನಡ" ಎಂದು ಜಗತ್ತಿನ ಮುಂದೆ ಕನ್ನಡದ ಶಬ್ದ ಸಂಪತ್ತನ್ನು ತೆರೆದಿಟ್ಟ ಶತಮಾನದ ಪುಣ್ಯ ಜೀವಿಯಾಗಿದ್ದರು. ದೇಶ ಕಂಡ ಶ್ರೇಷ್ಠ ನಿಘಂಟು ತಜ್ಞರೆಂಬ ಖ್ಯಾತಿಯನ್ನು ಹೊಂದಿದ್ದ ಶ್ರೀಯುತರು 8 ಸಂಪುಟಗಳ 9000 ಪುಟಗಳ ಬೃಹತ್ ಕನ್ನಡ-ಕನ್ನಡ ನಿಘಂಟಿನ ಶಬ್ದ ಭಂಡಾರವನ್ನು ಕಟ್ಟಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅತಿ ಕಿರಿಯ ವಯಸ್ಸಿನ (51ನೇ ವಯಸ್ಸಿನಲ್ಲಿ) ಅಧ್ಯಕ್ಷರಾಗಿ 2011ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ 77ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅತಿ ಹಿರಿಯ ವಯಸ್ಸಿನ ಅಧ್ಯಕ್ಷರಾಗಿ (99ನೇ ವಯಸ್ಸಿನಲ್ಲಿ) ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ತಮ್ಮ ಅಪೂರ್ವ ಸಾಧನೆಗೆ ಪದ್ಮಶ್ರೀ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದರಲ್ಲದೆ, ಭಾಷಾ ಸಮ್ಮಾನ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಆರ್ಯಭಟ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ಕನ್ನಡ ಸಾರಸ್ವತ ಲೋಕದ ಧ್ರುವತಾರೆಯೊಂದು ಕಣ್ಮರೆಯಾದಂತಾಗಿದೆ.

ಹಿರಿಯ ಕವಿ ಜರಗನಹಳ್ಳಿ ಶಿವಶಂಕರ್ ಅವರು ದಿನಾಂಕ: 05.05.2021 ರಂದು ನಿಧನ ಹೊಂದಿರುತ್ತಾರೆ.

1949ರಲ್ಲಿ ಬೆಂಗಳೂರಿನ ಜರಗನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಪದವೀಧರರಾಗಿದ್ದರು. ಶ್ರೀಯುತರ ಹನಿಗವಿತೆಗಳು, ಕವಿತೆಗಳು ಹಾಗೂ ಲೇಖನಗಳು 40 ವರ್ಷಗಳಿಂದ ಕನ್ನಡದ ಪ್ರಮುಖ ನಿಯತಕಾಲಿಕೆಗಳಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. 'ಮಳೆ', 'ಆಲಿಕಲ್ಲು', ಹಾಗೂ 'ದೇವರ ನೆರಳು' ಮೊದಲಾದ ಕವನ ಸಂಕಲನಗಳು ಅವರ ಸಾಹಿತ್ಯ ಕೃಷಿಯ ಮಜಲುಗಳಾಗಿರುತ್ತವೆ. ಶ್ರೀಯುತರ ಹನಿಗವನಗಳ ಸಂಕಲನಝರಿ, ಉರ್ದು, ಇಂಗ್ಲೀಷ್, ಹಿಂದಿ, ತಮಿಳು, ತೆಲುಗು, ಗುಜರಾತಿ ಭಾಷೆಗಳಿಗೆ ಅನುವಾದಗೊಂಡಿವೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು ರಚಿಸಿರುವ ಹನಿಗವನಗಳು ತುಮಕೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪಠ್ಯವಾಗಿರುತ್ತದೆ. ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವ ಕಾರ್ಯದರ್ಶಿಗಳಾಗಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರಿಗೆ ದಿನಕರ ದೇಸಾಯಿ ಸಾಹಿತ್ಯ ಪ್ರಶಸ್ತಿ, ಸುವರ್ಣ ಕರ್ನಾಟಕ ಭೂಷಣ ಪ್ರಶಸ್ತಿ, ಚುಟುಕು ರತ್ನ ಪ್ರಶಸ್ತಿ ಸೇರಿದಂತೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಕವಿ ಹಾಗೂ ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ಶಿಲ್ಪಕಲಾವಿದ ಷಣ್ಮುಖಪ್ಪ ಕಾಶಪ್ಪ ಯರಕರ ಅವರು ದಿನಾಂಕ: 06.05.2021ರಂದು ನಿಧನ ಹೊಂದಿರುತ್ತಾರೆ.

ಚಾಲುಕ್ಯ ಶಿಲ್ಪಕಲಾ ಕೇಂದ್ರದ ಸಂಚಾಲಕರಾದ ಶ್ರೀಯುತರು ಕಲ್ಲನ್ನು ನೋಡುವ ಮಾತ್ರದಿಂದಲೇ ಅದರ ಗುಣಮಟ್ಟವನ್ನು ಹೇಳುತ್ತಿದ್ದರು. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು ಮುಂತಾದ ಐತಿಹಾಸಿಕ ಸ್ಥಳಗಳಲ್ಲಿ ವಿರೂಪಗೊಂಡ ಮೂರ್ತಿಗಳನ್ನು ಸರಿಪಡಿಸಿದ್ದರು. ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಜಕಣಾಚಾರಿ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಹಾಗೂ ರಾಷ್ಟ್ರ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಶಿಲ್ಪಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

ಚಲನಚಿತ್ರ ನಟ ಅರವಿಂದ್ ಅವರು ದಿನಾಂಕ: 07.05.2021ರಂದು ನಿಧನ ಹೊಂದಿರುತ್ತಾರೆ.

1950ರಲ್ಲಿ ಜನಿಸಿದ್ದ ಶ್ರೀಯುತರು ಶಂಖನಾದ ಚಿತ್ರದ ಮೂಲಕ ಬಣ್ಣದ ಲೋಕದಲ್ಲಿ ಮುಂಚೂಣಿಗೆ ಬಂದಿದ್ದರು. ಬೆಟ್ಟದ ಹೂವು ಸೇರಿದಂತೆ 250ಕ್ಕೂ ಹೆಚ್ಚು ಚಲನ ಚಿತ್ರಗಳಲ್ಲಿ, ಕಿರುತೆರೆ ಧಾರವಾಹಿಗಳಲ್ಲಿ ಅಭಿನಯಿಸಿ ವೃತ್ತಿ ರಂಗಭೂಮಿಯಲ್ಲೂ ಸಹ ಸೇವೆ ಸಲ್ಲಿಸಿ ಅರವಿಂದ ಕಲಾವೃಂದ ಎಂಬ ಸಂಸ್ಥೆಯ ಮೂಲಕ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಶಂಖನಾದ ಚಿತ್ರದಲ್ಲಿ ನಟಿಸುವ ಮೂಲಕ ಶಂಖನಾದ ಅರವಿಂದ್ ಎಂದೇ ಪ್ರಖ್ಯಾತರಾಗಿದ್ದ ಶ್ರೀಯುತರು ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

ಹಿರಿಯ ಶಿಲ್ಪ ಕಲಾವಿದೆ ಕನಕ ಮೂರ್ತಿ ಅವರು ದಿನಾಂಕ: 13.05.2021ರಂದು ನಿಧನ ಹೊಂದಿರುತ್ತಾರೆ.

1942ರಲ್ಲಿ ಮೈಸೂರು ಜಿಲ್ಲೆಯ ಟಿ. ನರಸೀಪುರದಲ್ಲಿ ಜನಿಸಿದ್ದ ಶ್ರೀಯುತರು ಬಾಲ್ಯದಲ್ಲಿಯೇ ಶಿಲ್ಪಕಲೆಯ ಬಗ್ಗೆ ಆಸಕ್ತರಾಗಿ ಗುರು ವಾದಿರಾಜ್ ಅವರ ಬಳಿ ಶಿಲ್ಪಕಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲಿತು ನಾಡಿನ ಪ್ರಮುಖ ಶಿಲ್ಪಿ ಎನಿಸಿಕೊಂಡಿದ್ದರು. ಲಾಲ್‌ಬಾಗ್ ಬಳಿಯ ಕುವೆಂಪು ಪ್ರತಿಮೆ, ವಿಶ್ವೇಶ್ವರಯ್ಯ ಮ್ಯೂಸಿಯಂನ ರೈಟ್ ಸಹೋದರರ ಪ್ರತಿಮೆ, ಗಂಗೂಬಾಯಿ ಹಾನಗಲ್ ಪ್ರತಿಮೆ, ಭೀಮಸೇನ ಜೋಶಿ ಪ್ರತಿಮೆ, ಕೆ.ಎಂ. ಮುನ್ಶಿ ಪ್ರತಿಮೆ ಹಾಗೂ ಬಾಣಸವಾಡಿಯ 11 ಅಡಿ ಆಂಜನೇಯ ಸ್ವಾಮಿ ಪ್ರತಿಮೆಗಳನ್ನು ನಿರ್ಮಿಸಿದ್ದರು. ಕರ್ನಾಟಕದ ಮೊದಲ ಮಹಿಳಾ ಶಿಲ್ಪಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಶ್ರೀಯುತರಿಗೆ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಸುವರ್ಣ ಕರ್ನಾಟಕ ಪ್ರಶಸ್ತಿ ಸೇರಿದಂತೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಶಿಲ್ಪ ಕಲಾವಿದೆಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಹಿರಿಯ ವಿದ್ವಾಂಸ ಡಾ: ಲಕ್ಷ್ಮೀತಾತಾಚಾರ್ ಅವರು ದಿನಾಂಕ: 15.05.2021ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು ಹಲವು ಭಾಷೆಗಳ ವಿದ್ವಾಂಸರಾಗಿ. ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ, 2 ಲಕ್ಷ ಪುರಾತನ ತಾಳೆಗರಿಗಳನ್ನು ತಂದು ಅದರಲ್ಲಿರುವ ಮಾಹಿತಿಗಳನ್ನು ಡಿಜಿಟಲೀಕರಿಸಿದ್ದರು. ಮಣ್ಣಿನಿಂದ ಮುಚ್ಚಿ ಹೋಗಿದ್ದ ವಿಜಯನಗರ ಕಾಲದ ಭವ್ಯ ಸ್ಮಾರಕ ರಾಯ ಗೋಪುರವನ್ನು 30 ವರ್ಷಗಳ ಹಿಂದೆಯೇ ಉತ್ಖನನ ಮಾಡಿ ಸಂರಕ್ಷಣೆ ಮಾಡಿದ್ದರು. ಭಾರತೀಯ ಸಂಸ್ಕೃತಿ ಮಹತ್ವ ಸಾರುವ 100ಕ್ಕೂ ಹೆಚ್ಚು ಗ್ರಂಥ ಪ್ರಕಟಿಸಿದ್ದಾರೆ. ಸಂಸ್ಕೃತ ಕ್ಷೇತ್ರಕ್ಕೆ ಸಲ್ಲಿಸಿದ ಗಣನೀಯ ಸೇವೆಗಾಗಿ ರಾಷ್ಟ್ರಪತಿಗಳ ಪದಕ ಪುರಸ್ಕಾರಕ್ಕೆ ಶ್ರೀಯುತರು ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ವಿದ್ವಾಂಸರೊಬ್ಬರನ್ನು ಕಳೆದುಕೊಂಡಂತಾಗಿದೆ.

ನೃತ್ಯ ಕಲಾವಿದೆ ಬಿ. ಭಾನುಮತಿ ಅವರು ದಿನಾಂಕ: 24.05.2021ರಂದು ನಿಧನ ಹೊಂದಿರುತ್ತಾರೆ.

ಕಲಾವಿದರ ಕುಟುಂಬದಿಂದ ಬಂದಿದ್ದ ಶ್ರೀಯುತರು ನೃತ್ಯ ಪ್ರಕಾರದಲ್ಲಿ ಹೆಸರು ಮಾಡಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ಶಾಸ್ತ್ರೀಯ ನೃತ್ಯ ಸೌಂದರ್ಯವನ್ನು ಪಸರಿಸಿದ್ದರು. ಅವರು ಸ್ಥಾಪಿಸಿದ್ದ 'ನೃತ್ಯ ಕಲಾ ಮಂದಿರಂ' ಶಾಲೆಯ ಮೂಲಕ ನೂರಾರು ನೃತ್ಯ ಕಲಾವಿದರನ್ನು ಕಲಾ ರಂಗಕ್ಕೆ ಪರಿಚಯಿಸಿರುತ್ತಾರೆ. ಶ್ರೀಯುತರ ಸಂಯೋಜನೆಯ 'ಭರತಾಂಜಲಿ' ನೃತ್ಯ ರೂಪಕ ಅಮೆರಿಕ, ಬ್ರಿಟನ್ ಮುಂತಾದ ದೇಶಗಳಲ್ಲಿ ಪ್ರದರ್ಶಿತವಾಗಿ ಜನಪ್ರಿಯವಾಗಿರುತ್ತದೆ. ಕರ್ನಾಟಕ ಕಲಾಶ್ರೀ ಪ್ರಶಸ್ತಿ, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಶಾಂತಲಾ ನಾಟ್ಯಶ್ರೀ ಪ್ರಶಸ್ತಿ ಸೇರಿದಂತೆ ರಾಜ್ಯೋತ್ಸವ ಪ್ರಶಸ್ತಿಗೆ ಶ್ರೀಯುತರು ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಅಪ್ರತಿಮ ನೃತ್ಯ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿರಿಯ ತಜ್ಞ ವೈದ್ಯ ಡಾ: ಅಶೋಕ ರಾಮಣ್ಣ ಸೊನ್ನದ ಅವರು ದಿನಾಂಕ: 25.05.2021ರಂದು ನಿಧನ ಹೊಂದಿರುತ್ತಾರೆ.

ಶಿಕ್ಷಣ ಪ್ರೇಮ ಹಾಗೂ ಕೃಷಿ ಕುಟುಂಬದಲ್ಲಿ ಬೆಳೆದ ಶ್ರೀಯುತರು ತಾವು ನೀಡಿದ ಚಿಕಿತ್ಸೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಹಣ ಸಂದಾಯ ಮಾಡುವಂತೆ ಕ್ಲಿನಿಕ್‌ನ ದ್ವಾರದಲ್ಲಿ ಹುಂಡಿ ಇಡುವ ಮೂಲಕ ಸ್ವಹಿತೀಯವಾಗಿ ಹುಂಡಿ ಕಾಣಿಕೆ ವೈದ್ಯರೆಂದೇ ಜನಜನಿತರಾಗಿದ್ದರು. ಅಮೆರಿಕದ ಮಿಚಿಗನ್ ರಾಜ್ಯದ ಸಮುದಾಯ ಆರೋಗ್ಯ ಕೇಂದ್ರದಲ್ಲಿ 38 ವರ್ಷಗಳ ಕಾಲ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸಿ ನಂತರ ವೈಭೋಗದ ಜೀವನ, ವೈಯಕ್ತಿಕ ಕುಟುಂಬವನ್ನು ತೊರೆದು ಸಾರ್ವಜನಿಕ ಸೇವಾ ಸಂಘ ಆರಂಭಿಸಿ ಉಚಿತ ಚಿಕಿತ್ಸೆ, ಆರ್ಥಿಕ ತೊಂದರೆಯಲ್ಲಿರುವ ಜನರಿಗೆ ಉಚಿತ ಔಷಧವನ್ನೂ ನೀಡುವ ಮೂಲಕ ಬಡವರ ವೈದ್ಯರೆಂದೇ ಖ್ಯಾತರಾಗಿದ್ದರು. ಶ್ರೀಯುತರ ಸೇವೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ವೈದ್ಯ ಹಾಗೂ ಸಮಾಜ ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ

ಸ್ವಾತಂತ್ರ್ಯ ಹೋರಾಟಗಾರರು, ಪತ್ರಕರ್ತರು ಹಾಗೂ ಶತಾಯುಷಿಗಳಾದ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ ಅವರು ದಿನಾಂಕ: 26.05.2021ರಂದು ನಿಧನ ಹೊಂದಿರುತ್ತಾರೆ.

1918ರ ಏಪ್ರಿಲ್, 10ರಂದು ಬೆಂಗಳೂರಿನ ಹೊರವಲಯದ ಹಾರೋಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಪದವೀಧರರಾಗಿದ್ದರು. ಶಾಲಾ ದಿನಗಳಲ್ಲಿ ಗಾಂಧೀಜಿಯವರ ಪುಸ್ತಕವನ್ನು ಓದುವುದರ ಮೂಲಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡಿದ್ದರು. ಶ್ರೀಯುತರು ಕಾಲೇಜು ದಿನಗಳಲ್ಲಿ ಪ್ರಾರಂಭವಾಗಿದ್ದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. 'ಪೌರವಾಣಿ' ಎಂಬ ಪತ್ರಿಕೆಯ ಹೊಣೆಯನ್ನು ನಿಭಾಯಿಸುತ್ತಿದ್ದ ಶ್ರೀಯುತರು ಸ್ವಾತಂತ್ರ್ಯ ಘೋಷಣೆಗೆ ಅಡ್ಡಿಯಾದ ಬಗ್ಗೆ ಸರಣಿ ಲೇಖನಗಳನ್ನು ಬರೆದಿದ್ದರು. 'ಪೌರವೀರ', 'ಪೌರಮಾರ್ತಾಂಡ', 'ಪೌರದೂತ' ಹಾಗೂ 'ಪೌರ ಭಾಸ್ಕರ' ಪತ್ರಿಕೆಯ ಸಂಪಾದಕರಾಗಿಯು ಸೇವೆ ಸಲ್ಲಿಸಿದ್ದರು. ನಾಡಿನ ನೆಲ-ಜಲ, ನೈಸರ್ಗಿಕ ಸಂಪತ್ತಿನ ರಕ್ಷಣೆ, ಬಡವರ, ಧ್ವನಿ ಇಲ್ಲದವರ ಮಾನವಹಕ್ಕುಗಳ ವಿಚಾರವಾಗಿ ಕಾನೂನು ಹೋರಾಟ ನಡೆಸುತ್ತಿದ್ದರು. ಗಾಂಧಿ ಸೇವಾ ಪುರಸ್ಕಾರ, ಬಸವ ಪುರಸ್ಕಾರ, ರಾಮನಾಥ ಗೋಯೆಂಕಾ ಪತ್ರಿಕೋದ್ಯಮ ಪುರಸ್ಕಾರ ಸೇರಿದಂತೆ ಹಲವು ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಪತ್ರಕರ್ತರು ಹಾಗೂ ಸಮಾಜ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ನಾಡಿನ ಹಿರಿಯ ಸಾಹಿತಿಗಳು, ಕವಿಗಳು ಹಾಗೂ ವಿದ್ವಾಂಸರಾದ ವಸಂತ ಕುಷ್ಟಗಿ ಅವರು ದಿನಾಂಕ: 04.06.2021ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1936ರ ಅಕ್ಟೋಬರ್, 10ರಂದು ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಜನಿಸಿದ್ದ ಶ್ರೀಯುತರು ಶಹಾಬಾದಿನ ಎಸ್‌ಎಸ್‌ಎಂ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ, ಕನ್ನಡ ಪ್ರಾಧ್ಯಾಪಕರಾಗಿ, ನಗರದ ಎನ್‌ವಿ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಸುಮಾರು 60ರ ದಶಕದಲ್ಲಿ ಆಗಿನ ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯನ್ನು ಬೆಳೆಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅನೇಕ ಸ್ಮರಣೀಯ ಮಹನೀಯರಲ್ಲಿ ಶ್ರೀಯುತರು ಪ್ರಮುಖರಾಗಿದ್ದರು. ಕಥೆ, ಕವನ, ನಾಟಕ, ಬಿಡಿ ಲೇಖನ, ಅನುವಾದ ಸೇರಿದಂತೆ ಕನ್ನಡ ಸಾಹಿತ್ಯ ಲೋಕದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿದ್ದ ಶ್ರೀಯುತರು ವಿಶೇಷವಾಗಿ ಕಲ್ಯಾಣ ಕರ್ನಾಟಕದ ಇತಿಹಾಸ ರಚನೆ, ದಾಸ ಸಾಹಿತ್ಯ ಅಧ್ಯಯನ ಹಾಗೂ ಸಂಶೋಧನೆಯಲ್ಲಿ ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೈದ್ರಾಬಾದ್ ಕರ್ನಾಟಕ ವಿಮೋಚನಾ ಹೋರಾಟ, ಇತಿಹಾಸ, ಸಾಹಿತ್ಯ ಚರಿತ್ರೆಯ ಬಗ್ಗೆ ಆಳವಾಗಿ ಅಧ್ಯಯನ ಮಾಡಿ 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಶ್ರೀಯುತರು ಕಲಬುರ್ಗಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನೊಳಗೊಂಡಂತೆ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಖ್ಯಾತ ಕವಿಗಳು, ವಾಗ್ಮಿಗಳು ಹಾಗೂ ಹಿರಿಯ ವಿದ್ವಾಂಸರೊಬ್ಬರನ್ನು ಕಳೆದುಕೊಂಡಂತಾಗಿದೆ.

ಹಿರಿಯ ಶಿಕ್ಷಣ ತಜ್ಞ ಪ್ರೊ. ಎಂ.ಐ. ಸವದತ್ತಿ ಅವರು ದಿನಾಂಕ: 09.06.2021ರಂದು ನಿಧನ ಹೊಂದಿರುತ್ತಾರೆ.

1932ರ ಜನವರಿ, 8ರಂದು ಧಾರವಾಡ ತಾಲ್ಲೂಕಿನ ಅಮಿನ್‌ಭಾವಿಯಲ್ಲಿ ಜನಿಸಿದ್ದ ಶ್ರೀಯುತರು ಸ್ನಾತಕೋತ್ತರ ಪದವೀಧರರಾಗಿದ್ದರು. ಭೌತಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ ತದನಂತರ ವಿಜ್ಞಾನ ವಿಭಾಗದ ಡೀನ್ ಆಗಿ, ಸಿಂಡಿಕೇಟ್ ಸದಸ್ಯರಾಗಿ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಯಾಗಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಮಿತಿಯ ಸಂಸ್ಥಾಪಕ ಉಪಾಧ್ಯಕ್ಷರಾಗಿ ಹಾಗೂ ಯು.ಜಿ.ಸಿ. ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಸರ್ ಎಂ. ವಿಶ್ವೇಶ್ವರಯ್ಯ ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಖ್ಯಾತ ಶಿಕ್ಷಣ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ

ಹಿರಿಯ ಚಲನಚಿತ್ರ ನಟಿ, ಪಂಚ ಭಾಷಾ ತಾರೆ ಜಯಂತಿ ಅವರು ದಿನಾಂಕ:26.07.2021ರಂದು ನಿಧನ ಹೊಂದಿರುತ್ತಾರೆ.

1945ರ ಜನವರಿ, 6ರಂದು ಬಳ್ಳಾರಿಯಲ್ಲಿ ಜನಿಸಿದ್ದ ಶ್ರೀಯುತರು ಜೇನುಗೂಡು ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ 500ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಅಭಿನಯ ಶಾರದೆ ಎಂದೇ ಹೆಸರುವಾಸಿಯಾಗಿದ್ದರು. ಚಿತ್ರದುರ್ಗದ ವೀರ ವನಿತೆ ಒನಕೆ ಓಬವ್ವನ ಪಾತ್ರದ ಅಭಿನಯ ಪ್ರೇಕ್ಷಕರ ಹೃದಯದಲ್ಲಿ ಎಂದಿಗೂ ಚಿರಸ್ಥಾಯಿಯಾಗಿ ಉಳಿದಿರುತ್ತದೆ. ಅಭಿಜಾತ ಪ್ರತಿಭೆಯ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ದಶಕಗಳ ಕಾಲ ಚಿತ್ರರಂಗಕ್ಕೆ ಸೇವೆ ಸಲ್ಲಿಸಿದ್ದ ಶ್ರೀಯುತರು 6 ಬಾರಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿರುವುದಲ್ಲದೆ ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿ, ಡಾ: ರಾಜ್‌ಕುಮಾರ್ ಜೀವಮಾನದ ಸಾಧನೆ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಅಪ್ರತಿಮ ಅಸಾಧಾರಣ ಕಲಾವಿದೆಯೊಬ್ಬರನ್ನು ಕಳೆದುಕೊಂಡಂತಾಗಿದೆ

ಖ್ಯಾತ ವೈದ್ಯೆ ಹಾಗೂ ಲೇಖಕಿ ಡಾ: ಹೆಚ್. ಗಿರಿಜಮ್ಮ ಅವರು ದಿನಾಂಕ: 17.08.2021ರಂದು ನಿಧನ ಹೊಂದಿರುತ್ತಾರೆ.

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಜನಿಸಿದ್ದ ಶ್ರೀಯುತರು ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ಶಿಕ್ಷಣ ಪಡೆದ ನಂತರ ಹರಿಹರದಲ್ಲಿ ವೈದ್ಯಕೀಯ ವೃತ್ತಿ ಆರಂಭಿಸಿದ್ದರು. ಖ್ಯಾತ ಸ್ತ್ರೀರೋಗ ತಜ್ಞೆಯಾಗಿ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ, ದಾವಣಗೆರೆಯ ಎಸ್.ಎಸ್. ಹೈಟೆಕ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಸೇವೆ ಸಲ್ಲಿಸಿದ್ದರು. ಆರೋಗ್ಯ ಕ್ಷೇತ್ರದ ಜೊತೆ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಅಪರೂಪದ ಸಾಧನೆ ಮಾಡಿದ್ದ ಶ್ರೀಯುತರು ವೃತ್ತಿಯಲ್ಲಿ ವೈದ್ಯರಾಗಿದ್ದು, ಪ್ರವೃತ್ತಿಯಲ್ಲಿ ಹೆಸರಾಂತ ಸಾಹಿತಿಯಾಗಿದ್ದರು. ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 17 ಕೃತಿಗಳು, 16 ಕಾದಂಬರಿಗಳು, 09 ಕಥಾ ಸಂಕಲನ, 26 ವೈದ್ಯಕೀಯ ಲೇಖನಗಳು, ಏಡ್ಸ್ ನಿವಾರಣೆ ಆಂದೋಲನಕ್ಕೆ ಸಂಬಂಧಿಸಿದ 13 ಕಿರು ನಾಟಕಗಳು ಹಾಗೂ 15 ನಾಟಕ ಕೃತಿಗಳನ್ನು ರಚಿಸಿದ್ದರು. ಸಾಕ್ಷ್ಯಚಿತ್ರಗಳನ್ನು ರೂಪಿಸಿ ಚಲನಚಿತ್ರವನ್ನೂ ನಿರ್ದೇಶಿಸಿದ್ದ ಶ್ರೀಯುತರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ, ವನಿತಾ ಸಮಾಜದ ಸಾಹಿತ್ಯಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಇತರೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಲೇಖಕಿ ಹಾಗೂ ಖ್ಯಾತ ವೈದ್ಯರೊಬ್ಬರನ್ನು ಕಳೆದುಕೊಂಡಂತಾಗಿದೆ.

ಕೋವಿಡ್-19, 2ನೇ ಅಲೆಯ ಭೀಕರ ಖಾಯಿಲೆಗೆ ತುತ್ತಾಗಿ ರಾಜ್ಯದ ಹಾಗೂ ರಾಷ್ಟ್ರದ, ರಾಜಕೀಯ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ವಿಜ್ಞಾನ ಕ್ಷೇತ್ರ, ಕಲೆ ಮತ್ತು ಸಮಾಜ ಸೇವೆಯಲ್ಲಿ ತೊಡಗಿದ್ದ ಹಲವಾರು ಖ್ಯಾತನಾಮರು ಮೃತಪಟ್ಟಿರುವುದು ಹಾಗೂ ಕೋವಿಡ್ ವಾರಿಯರ್ಸ್‌ಗಳು ಸೇರಿದಂತೆ ವಿಶೇಷವಾಗಿ ತಮ್ಮ ಜೀವನದ ಹಂಗನ್ನು ತೊರೆದು ಹಗಲಿರುಳು ರೋಗಿಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ವೈದ್ಯರು ಹಾಗೂ ನರ್ಸ್‌ಗಳ ನಿಸ್ವಾರ್ಥ ಸೇವೆಯನ್ನು ಬಹಳ ಗೌರವದಿಂದ ಈ ಸದನವು ಸ್ಮರಿಸುತ್ತದೆ. ಸಹಸ್ರಾರು ನಾಗರೀಕರು ಸಾವನ್ನಪ್ಪಿರುವುದು ಅತ್ಯಂತ ದು:ಖಕರ ಸಂಗತಿಯಾಗಿದೆ.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(630) 13.09.2021 11.30 ಎಸ್‌ವಿ-ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 24 ಮಂದಿ ಗಣ್ಯರ ಅಗಲುವಿಕೆಯ ಸಂತಾಪ ಸೂಚನೆ ಪ್ರಸ್ತಾಪವನ್ನು ತಾವು ಮಂಡಿಸಿದ್ದೀರಿ. ಶ್ರೀ ಕೆ.ಬಿ.ಶಾಣಪ್ಪ, ಶ್ರೀ ಸಿ.ಎಂ.ಉದಾಸಿ, ಶ್ರೀ ಮುಮ್ತಾಜ್ ಅಲಿ ಖಾನ್ ಸಹಿತ ಇಪ್ಪತ್ನಾಲ್ಕು ಮಂದಿ ಗಣ್ಯರು ನಮ್ಮನ್ನು ಅಗಲಿದ್ದಾರೆ. ತಾವು ಮಂಡಿಸಿರುವ ಸುದೀರ್ಘವಾದ ಪಟ್ಟಿಯಲ್ಲಿ ಒಂದೆರಡು ಹೆಸರುಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ನಮ್ಮ ಮಧ್ಯೆಯೇ ಇದ್ದು ಇಲ್ಲಿ ನಡೆಯುವ ಚರ್ಚೆಗಳಲ್ಲಿ ಭಾಗವಹಿಸಿ, ನಮಗೆ ಮಾರ್ಗದರ್ಶನ ಮಾಡಿದಂತಹ ಶ್ರೀ ಕೆ.ಬಿ.ಶಾಣಪ್ಪನವರು ನಮಗೆ ಬೆಚ್ಚನೆಯ ನೆನಪಾಗಿದ್ದಾರೆ. ಈ ಸದನದಲ್ಲಿ ಅವರು ಮಾಡುತ್ತಿದ್ದಂತಹ ಭಾಷಣಗಳು, ಅವರು ಕೊಡುತ್ತಿದ್ದಂತಹ ಮಾರ್ಗದರ್ಶನ, ವಿಧಾನ ಸಭೆಯ ವಿರೋಧ ಪಕ್ಷದ ಉಪ ನಾಯಕರಾಗಿ ಅವರು ವಿಚಾರಗಳನ್ನು ಮಂಡನೆ ಮಾಡುತ್ತಿದ್ದ ರೀತಿಯು ನಮಗೆ ಅನುಕರಣೀಯ. ತಮಗೆ ನ್ಯಾಯ ದೊರೆಯುವುದು ತಡವಾಗುತ್ತಿದೆ ಎಂದರೆ, ಹೊರಬಂದು ಎಲ್ಲರನ್ನೂ ಒಟ್ಟುಗೂಡಿಸಿ ಗಟ್ಟಿ ಧ್ವನಿಯಲ್ಲಿ ನ್ಯಾಯ ಕೇಳುವ ಪರಿಪಾಠವನ್ನು ಅವರು ಇಟ್ಟುಕೊಂಡಿದ್ದರು. ಸಮಾಜದ ಕಟ್ಟಕಡೆಯ ಮನುಷ್ಯರಿಗೂ ಸಹ ವಿಶ್ವಾಸ ಮೂಡುವಂತಹ ಅವರ ನಡವಳಿಕೆ ಎಲ್ಲರೂ ನೆನಪಿಟ್ಟುಕೊಳ್ಳಬೇಕು. ಅವರ ಅವಧಿ ಮುಕ್ತಾಯಗೊಂಡ ಸಂದರ್ಭದಲ್ಲಿ ಅವರು ಈ ಸದನದಲ್ಲಿ ಮಾಡಿದ ಕೊನೆಯ ಭಾಷಣ ನಮ್ಮ ನೆನಪಿನಲ್ಲಿ ಶಾಶ್ವತವಾಗಿರುತ್ತದೆ. ಅವರು ಕಮ್ಯುನಿಸ್ಟ್ ವಿಚಾರಧಾರೆಯನ್ನು ಅಧ್ಯಯನ ಮಾಡಿ ಸಮಾಜವಾದಿಯಾಗಿ ರೂಪುಗೊಂಡು ತಮ್ಮದೇ ಆದ ಒಂದು ವಿಶಿಷ್ಟವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು. ಭಾರತೀಯ ಜನತಾ ಪಕ್ಷಕ್ಕೆ ಬಂದ ನಂತರ ನಮ್ಮ ವಿಚಾರಗಳನ್ನು ತಿಳಿದುಕೊಂಡು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ನಂತರ ತಮ್ಮದೇ ಆದ ಭಾವನೆಗಳಿಗೆ ಒಳಪಟ್ಟು ನಮ್ಮಿಂದ ದೂರವಾದರು. ಇವೆಲ್ಲವೂ ಇನ್ನೂ ನಮ್ಮ ಮನಸ್ಸಿನಲ್ಲಿ ಹಸಿರಾಗಿರುವಾಗಲೇ ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರು ವ್ಯಂಗ್ಯ, ಹಾಸ್ಯ ಮತ್ತು ಕಠೋರವಾದ ಸತ್ಯಗಳ ಸಮ್ಮಿಲನವಾಗಿದ್ದರು. ನನ್ನೊಡನೆ ಒಮ್ಮೆ ಮಾತನಾಡುವಾಗ ಹೇಳಿದ್ದರು. ಅವರು ಅಬಕಾರಿ ಮಂತ್ರಿಗಳಾಗಿದ್ದಾಗ ಕೆಳಮನೆಯಲ್ಲಿ ಮದ್ಯದ ಕುರಿತು ಗಂಭೀರವಾದ ಚರ್ಚೆ ನಡೆದಿತ್ತು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಾತಾವರಣವನ್ನು ತಿಳಿಗೊಳಿಸುವ ಸಲುವಾಗಿ ಸಭಾಧ್ಯಕ್ಷರು "ಯಾರೆಲ್ಲಾ ಕುಡಿಯುತ್ತೀರಿ" ಎಂದು ಕೇಳಿದ್ದರಂತೆ. ಆಗ ಮಾನ್ಯ ಶಾಣಪ್ಪನವರು ಕೈ ಎತ್ತಿಬಿಟ್ಟರಂತೆ. ಹಾಗೆ ಕೈ ಎತ್ತಿದವರು ಸುಮ್ಮನೆ ಕುಳಿತುಕೊಳ್ಳಲಿಲ್ಲವಂತೆ. ಪಕ್ಕದಲ್ಲಿ ಇದ್ದಂತಹ ಜೆ.ಹೆಚ್.ಪಟೇಲರಿಗೆ 'ನಾವು ನೀವು ಒಟ್ಟಿಗೆ ಕುಳಿತು ಮದ್ಯವನ್ನು ಸೇವಿಸುತ್ತೇವೆ. ನೀವೇಕೆ ಕೈ ಎತ್ತಲಿಲ್ಲ' ಎಂದು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಿಬಿಟ್ಟರಂತೆ. ಆಗ ಜೆ.ಹೆಚ್.ಪಟೇಲರು ಇವರಿಗೆ ಸುಮ್ಮನಿರುವಂತೆ ಸೂಚಿಸಿದರಂತೆ. ಈ ರೀತಿಯಾಗಿ ಅವರ ಅನುಭವಗಳನ್ನು ಬಹಳ ಕಲಾತ್ಮಕವಾಗಿ ಹೇಳುತ್ತಿದ್ದುದನ್ನು ನಾವೆಲ್ಲಾ ಕೇಳಿದ್ದೇವೆ. ಅವರ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಅಂತಹ ಹಿರಿಯರೊಬ್ಬರನ್ನು ಕಳೆದುಕೊಂಡಿರುವುದು ನಮಗೆ ನೋವುಂಟು ಮಾಡಿದೆ. ಇಂತಹ ಒಬ್ಬ ಶ್ರೇಷ್ಠ ರಾಜಕಾರಣಿಯೊಬ್ಬರ ಅಗಲುವಿಕೆಗೆ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಡಾ: ಮುಮ್ತಾಜ್ ಅಲಿ ಖಾನ್‌ರವರು ಹಿಂದಿನ ನಮ್ಮ ಸರ್ಕಾರದಲ್ಲಿ ಅಲ್ಪಸಂಖ್ಯಾತ ಮತ್ತು ವಕ್ಫ್ ಮಂತ್ರಿಗಳಾಗಿ ಬಹಳ ಸುದೀರ್ಘವಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದರು. ತುಂಬಾ ಸಜ್ಜನ ರಾಜಕಾರಣಿಯಾಗಿದ್ದರು.

ಡಾ: ಸಿದ್ದಲಿಂಗಯ್ಯನವರ ಅಗಲುವಿಕೆಯ ಬಗ್ಗೆ ತಾವು ಸಂತಾಪ ಸೂಚನಾ ಪ್ರಸ್ತಾವವನ್ನು ಮಂಡಿಸಿದ್ದೀರಿ. ಹಲವು ಶ್ರೇಷ್ಠ ಕಾದಂಬರಿಗಳನ್ನು ಬರೆದಿದ್ದ ಅವರು ಎರಡು ಬಾರಿ ಈ ಸದನದಲ್ಲಿ ಸದಸ್ಯರಾಗಿ ಸಮಾಜದ ಕಟ್ಟಕಡೆಯ ಮನುಷ್ಯರಿಗೆ ದನಿಯಾಗಿದ್ದರು. ವಿಶೇಷವಾಗಿ ಎಂಜಲುಬದ್ಧತೆಯನ್ನು, ಅಸ್ಪೃಶ್ಯತೆಯನ್ನು ವಿರೋಧಿಸಿ, ತಮ್ಮ ವೈಚಾರಿಕ ಭಾಷಣಗಳ ಮೂಲಕ ರಾಜ್ಯದ ಜನತೆ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದರು. ಅವರ ನಿಧನದಿಂದ ಒಬ್ಬ ಶ್ರೇಷ್ಠ ಕವಿ, ಲೇಖಕ, ಚಿಂತಕ, ವಿಚಾರವಾದಿ ಎಲ್ಲಕ್ಕಿಂತ ಮಿಗಿಲಾಗಿ ಉತ್ತಮ ಸಂಸದೀಯಪಟುವನ್ನು ಕಳೆದುಕೊಂಡಂತಹ ನೋವು ನಮಗೆಲ್ಲರಿಗೂ ಆಗುತ್ತದೆ. ಅವರ ಅಗಲುವಿಕೆಯ ಸಂತಾಪ ಸೂಚನೆಗೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಸ್.ಎಂ.ಆನಂದ್‌ರವರ ನಿಧನಕ್ಕೆ ತಾವು ಸಂತಾಪವನ್ನು ಸೂಚಿಸಿರುತ್ತೀರಿ. ಶ್ರೀ ಸಿ.ಎಂ.ಉದಾಸಿಯವರು ಆರು ಬಾರಿ ಶಾಸಕರಾಗಿ ನಮ್ಮ ಸರ್ಕಾರದಲ್ಲಿ ಹಲವು ಬಾರಿ ಮಂತ್ರಿಯಾಗಿದ್ದರು. ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಿಂದ ನಿರಂತರವಾಗಿ ಗೆಲುವನ್ನು ಪ್ರತಿಪಾದಿಸಿರುತ್ತಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಪುರಸಭೆಯ ಅಧ್ಯಕ್ಷರಾಗಿ ರಾಜಕಾರಣವನ್ನು ಪ್ರಾರಂಭ ಮಾಡಿ ಮಂತ್ರಿಗಿರಿಯವರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿ ಕೆಲಸಗಳಲ್ಲಿ ನಮಗೆಲ್ಲ ಮಾರ್ಗದರ್ಶನ ಮಾಡಿದಂತಹ ಒಬ್ಬ ಶ್ರೇಷ್ಠ ರಾಜಕಾರಣಿಯಾಗಿದ್ದ ಶ್ರೀ ಸಿ.ಎಂ.ಉದಾಸಿಯವರನ್ನು ನಾನು ಭಾವುಕತೆಯಿಂದ ನೆನಪು ಮಾಡಿಕೊಳ್ಳುತ್ತೇನೆ.

ವಿಧಾನಸಭೆಯ ಮಾಜಿ ಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರ ಬಗ್ಗೆ ತಾವು ಪ್ರಸ್ತಾಪ ಮಾಡಿರುತ್ತೀರಿ. ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಸಚಿವರಾಗಿ, ಸಭಾಧ್ಯಕ್ಷರಾಗಿ ಭ್ರಷ್ಟಾಚಾರದ ವಿರುದ್ಧ ಒಂದು ಸಂಘಟನೆಯನ್ನು ಮಾಡಿಕೊಂಡು ಜೀವನದುದ್ದಕ್ಕೂ ಅವರು ಹೋರಾಟ ಮಾಡಿದ ನೆನಪುಗಳು ರಾಜ್ಯದ ಜನರ ಮನಸಿನಲ್ಲಿ ಶಾಶ್ವತವಾಗಿರುತ್ತವೆ. ಅವರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಾಜಕಾರಣಿಯನ್ನು ಹಾಗೂ ರೈತಪರ ಹೋರಾಟಗಾರರನ್ನು ಕಳೆದುಕೊಂಡಂತಹ ನೋವನ್ನು ಅನುಭವಿಸುತ್ತಿದೆ.

ಡಾ:ಜಿ.ಮಾದೇಗೌಡರು ಮಾಜಿ ಸಚಿವರು, ಮಾಜಿ ಸಂಸದರು ಆಗಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಕಾವೇರಿ ನೆಲ-ಜಲ ಎನ್ನುವ ಪ್ರಶ್ನೆ ಬಂದಾಗ ಮಾದೇಗೌಡರು ನಮಗೆ ನೆನಪಾಗುತ್ತಾರೆ. ಕಾವೇರಿಗಾಗಿ ಪಾರ್ಲಿಮೆಂಟ್ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಂತಹ ರೀತಿ, ಮಂಡ್ಯದಲ್ಲಿ ಹೋರಾಟಕ್ಕಾಗಿ ಕಟ್ಟಿಕೊಳ್ಳಲಾದ ವ್ಯವಸ್ಥೆಗಳು, ಕಾವೇರಿ ನೀರಿಗಾಗಿ ತಮ್ಮ ಬದುಕನ್ನು ಸಮರ್ಪಿಸಿಕೊಂಡಂತಹ ರೀತಿ, ಅದರ ಜೊತೆಯಲ್ಲಿ ಒಬ್ಬ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿ ಮೂಡಿ ಬಂದಿರುವುದನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ.

ಮಾಜಿ ಸಂಸದರಾದ ಶ್ರೀ ಷಣ್ಮುಖಪ್ಪ ಬಸಪ್ಪ ಸಿದ್ನಾಳ ಅವರ ಅಗಲುವಿಕೆಗೆ ತಾವು ಸಂತಾಪವನ್ನು ಸೂಚಿಸಿರುತ್ತೀರಿ. 7, 8, 9 ಮತ್ತು 10ನೇ ಲೋಕಸಭೆಗೆ ಸಂಸದರಾಗಿ ಆಯ್ಕೆಯಾಗಿದ್ದಂತಹ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಿರುವ ಅನುಭವ ನಮಗಾಗಿದೆ. ಮಾಜಿ ಸಂಸದರಾಗಿದ್ದ ಶ್ರೀ ಎಂ.ರಾಜಗೋಪಾಲ್ ಅವರು ನಿಧನರಾಗಿರುವ ಬಗ್ಗೆ ತಾವು ಉಲ್ಲೇಖವನ್ನು ಮಾಡಿರುತ್ತೀರಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ ಇವರು ಗ್ರಾಮೀಣ ಬದುಕಿನ ಸೊಗಡನ್ನು ರೂಢಿಸಿಕೊಂಡು ರೈತರ ಪರವಾದ ಹೋರಾಟಗಳನ್ನು ಮಾಡಿ 1989ರಲ್ಲಿ ಏಕಕಾಲಕ್ಕೆ ಬೆಳಗಾವಿಯ ಕಿತ್ತೂರು ಹಾಗೂ ಧಾರವಾಡ ಗ್ರಾಮೀಣ ವಿಧಾನ ಸಭಾಕ್ಷೇತ್ರಗಳಲ್ಲಿ ಗೆದ್ದಂತಹ ಒಬ್ಬ ಶ್ರೇಷ್ಠ ರಾಜಕಾರಣಿ ಹಾಗೂ ಜನಪರ ಹೋರಾಟಗಾರರನ್ನು ಕಳೆದುಕೊಂಡಂತಹ ನಷ್ಟವನ್ನು ರಾಜ್ಯ ಅನುಭವಿಸಿದೆ.

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಕೆ.ಅಬ್ದುಲ್ ಸಮದ್ ಅವರ ನಿಧನಕ್ಕೆ ತಾವು ಸಂತಾಪ ಸೂಚಿಸಿರುತ್ತೀರಿ. ಇದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಕನ್ನಡ ನಿಘಂಟು ಲೋಕವನ್ನು ಶ್ರೀಮಂತಗೊಳಿಸಿದ, ಪದಬ್ರಹ್ಮ ಎನ್ನುವ ಗೌರವಕ್ಕೆ ಪಾತ್ರರಾದಂತಹ ಶತಾಯುಷಿ ಪ್ರೊ|| ಜಿ.ವೆಂಕಟಸುಬ್ಬಯ್ಯನವರ ನಿಧನದಿಂದ ಕನ್ನಡ ಸಾರಸ್ವತ ಲೋಕವು ಒಂದು ಧ್ರುವ ತಾರೆಯನ್ನು ಕಳೆದುಕೊಂಡಂತಾಗಿದೆ ಎನ್ನುವ ತಮ್ಮ ಮಾತಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಜರಗನಹಳ್ಳಿ ಶಿವಶಂಕರ್‌ರವರು ಹಲವಾರು ಹನಿಗವಿತೆಗಳನ್ನು, ಕವಿತೆಗಳನ್ನು, ಲೇಖನಗಳನ್ನು ಬರೆದಿದ್ದರು. ಇಂತಹ ಒಬ್ಬ ಹಿರಿಯ ಕವಿಯನ್ನು ಕಳೆದುಕೊಂಡಂತಹ ಅನುಭವ ರಾಜ್ಯಕ್ಕೆ ಆಗಿದೆ.

ಅತ್ಯಂತ ಶ್ರೇಷ್ಠ ಶಿಲ್ಪಕಲಾವಿದರಾದ ಶ್ರೀ ಷಣ್ಮುಖಪ್ಪ ಕಾಶಪ್ಪ ಯರಕರ ಅವರ ನಿಧನಕ್ಕೆ ತಾವು ಸಂತಾಪ ಸೂಚಿಸಿದ್ದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

'ಶಂಖನಾದ' ಚಲನಚಿತ್ರದಲ್ಲಿ ನಟಿಸುವ ಮೂಲಕ 'ಶಂಖನಾದ ಅರವಿಂದ್' ಎನ್ನುವ ಖ್ಯಾತಿಗೆ ಪಾತ್ರರಾಗಿದ್ದಂತಹ ಪ್ರಬುದ್ಧ ನಟ ಅರವಿಂದ್ ಅವರ ನಿಧನಕ್ಕೆ ತಾವು ಸೂಚಿಸಿರುವ ಸಂತಾಪ ಸೂಚನಾ ಪ್ರಸ್ತಾವಕ್ಕೆ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ.

ಹಿರಿಯ ಶಿಲ್ಪ ಕಲಾವಿದೆಯಾಗಿದ್ದ ಶ್ರೀಮತಿ ಕನಕ ಮೂರ್ತಿ ಅವರನ್ನು ಕಳೆದುಕೊಂಡಂತಹ ನೋವನ್ನು ರಾಜ್ಯ ಅನುಭವಿಸಿದೆ. ಹಿರಿಯ ವಿದ್ವಾಂಸರಾದ ಡಾ: ಲಕ್ಷ್ಮಿ ತಾತಾಚಾರ್ಯ ಅವರು ತಾಳೆಗರಿಗಳನ್ನು ತಂದು ಅದರಲ್ಲಿದ್ದ ಮಾಹಿತಿಗಳನ್ನು ಅಧ್ಯಯನ ಮಾಡಿ ಡಿಜಿಟಲೀಕರಣಗೊಳಿಸಿದ್ದರು. ಮಣ್ಣಿನಿಂದ ಮುಚ್ಚಿ ಹೋಗಿದ್ದ ಅನೇಕ ಸ್ಮಾರಕಗಳನ್ನು ಹೊರ ತೆಗೆದು ಪ್ರಪಂಚಕ್ಕೆ ತೋರಿಸುವಲ್ಲಿ ಅವರ ಪಾತ್ರ ಮಹತ್ತರವಾದುದು. ಇವರ ನಿಧನಕ್ಕೆ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ.

ಶ್ರೇಷ್ಠ ನೃತ್ಯ ಕಲಾವಿದೆ ಭಾನುಮತಿಯವರು ನಮ್ಮನ್ನು ಅಗಲಿದ್ದಾರೆ. ಹಿರಿಯ ತಜ್ಞ ವೈದ್ಯ ಡಾ: ಅಶೋಕ ರಾಮಣ್ಣ ಸೊನ್ನದ ಅವರ ನಿಧನವು ಈ ರಾಜ್ಯಕ್ಕೆ ನೋವುಂಟು ಮಾಡಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ – ಇವರ ಪೂರ್ಣ ಹೆಸರನ್ನು ನಾವು ನೆನಪು ಮಾಡುವುದು ಕಡಿಮೆ. 'ದೊರೆಸ್ವಾಮಿ' ಎಂದು ಆ ಹಿರಿಯರನ್ನು ನಾವು ನೆನಪು ಮಾಡಿಕೊಳ್ಳುತ್ತೇವೆ.

(...ಮುಂದು)

(631) 13-09-2021, 11.40 KG RN

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು.,):-**

ವೈಚಾರಿಕ ವಿಚಾರದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಭೇದಗಳು ಅನೇಕರಲ್ಲಿ ಇರಬಹುದು. ಆದರೆ, ಅವರ ಹಿರಿತನ ಮತ್ತು ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡತಹ ರೀತಿ ಮತ್ತು ಬದುಕಿನೂದ್ದಕ್ಕೂ ಜನಪರವಾದ ಹೋರಾಟದ ನಿಲುವು ಈ ನಾಡಿನ ನೆಲ ಮತ್ತು ಜಲಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಬಂದಾಗ ಅವರ ಗಟ್ಟಿಯಾದ ಧ್ವನಿ ಇವೆಲ್ಲವನ್ನು ನೆನಪು ಮಾಡಿಕೊಳ್ಳುವುದು ಈ ರಾಜ್ಯದ ಜನತೆಗೆ ಯಾವಾಗಲೂ ಸಹ ಬೆಚ್ಚಗಿನ ಅನುಭವವಾಗುತ್ತದೆ. ಇಂತಹ ಹಿರಿಯರಾದಂತಹ ಶ್ರೀ ದೊರೆಸ್ವಾಮಿಯವರ ನಿಧನದಿಂದಾಗಿ ರಾಜ್ಯದ ಜನತೆಗೆ ನೋವುಂಟು ಮಾಡಿದೆ ಎನ್ನುವುದನ್ನು ಉಲ್ಲೇಖ ಮಾಡುತ್ತೇನೆ.

ಪ್ರೊ.ವಸಂತ ಕುಷ್ಟಗಿಯವರು ಈ ನಾಡಿನ ಹಿರಿಯ ಸಾಹಿತಿಗಳು, ಕವಿಗಳು ಹಾಗೂ ವಿದ್ವಾಂಸರಾಗಿದ್ದರು. ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಸುಮಾರು 60ರ ದಶಕದಲ್ಲಿ ಆಗಿನ ಹೈದ್ರಾಬಾದ್-ಕರ್ನಾಟಕದಲ್ಲಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯನ್ನು ಬೆಳೆಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅನೇಕ ಸ್ಮರಣೀಯ ಮಹನೀಯರಲ್ಲಿ ಶ್ರೀಯುತರು ಪ್ರಮುಖರಾಗಿದ್ದರು. ತಾವು ಶ್ರೀಯುತ ನಿಧನವನ್ನು ಉಲ್ಲೇಖ ಮಾಡಿದ್ದೀರಿ. ಆ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಖ್ಯಾತ ಕವಿಗಳು, ವಾಗ್ಮಿಗಳು ಹಾಗೂ ಹಿರಿಯ ವಿದ್ವಾಂಸರನ್ನು ಕಳೆದುಕೊಂಡಂತಾಗಿದೆ.

ಪ್ರೊ.ಎಂ.ಐ.ಸವದತ್ತಿರವರು ಹಿರಿಯ ಶಿಕ್ಷಣ ತಜ್ಞರಾಗಿದ್ದರು. ಶ್ರೀಯುತರು ಭೌತಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಧ್ಯಾಪಕರಾಗಿ ಸೇವೆ ಆರಂಭಿಸಿ ತದನಂತರ ವಿಜ್ಞಾನ ವಿಭಾಗದ ಡೀನ್ ಆಗಿ, ಸಿಂಡಿಕೇಟ್ ಸದಸ್ಯರಾಗಿ ಹಾಗೂ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಸರ್.ಎಂ.ವಿಶ್ವೇಶ್ವರಯ್ಯ ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ನಿಧನದಿಂದಾಗಿ ಈ ರಾಜ್ಯದ ಜನತೆಗೆ ನೋವುಂಟು ಮಾಡಿದೆ ಎನ್ನುವುದನ್ನು ಉಲ್ಲೇಖಿಸ ಬಯಸುತ್ತೇನೆ.

ಶ್ರೀಮತಿ ಜಯಂತಿರವರು ಕನ್ನಡ ಚಿತ್ರರಂಗದಲ್ಲಿ ತನ್ನದೇ ಆದಂತಹ ಛಾಪನ್ನು ಮೂಡಿಸಿರುವಂತಹ ಅತ್ಯಂತ ಶ್ರೇಷ್ಠ ನಟಿ. ಶ್ರೀಯುತರು ಕನ್ನಡ, ತೆಲಗು, ತಮಿಳು ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ ಸುಮಾರು 500 ಹೆಚ್ಚು ಚಿತ್ರಗಳಲ್ಲಿ ನಟಿಸಿ ಅಭಿನಯ ಶಾರದೆ ಎಂದೇ ಹೆಸರುವಾಸಿಯಾಗಿದ್ದರು. ಶ್ರೀಯುತರು ಚಿತ್ರದುರ್ಗದ ವೀರ ವನಿತೆ ಒನಕೆ ಓಬವ್ವನ ಪಾತ್ರದ ಅಭಿನಯದಲ್ಲಿ ಪೇಕ್ಷಕರ ಹೃದಯದಲ್ಲಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿರುತ್ತದೆ. ಶ್ರೀಯುತರ ನಿಧನದಿಂದಾಗಿ ಅಪ್ರತಿಮ ಅಸಾಧಾರಣ ಒಬ್ಬ ಶ್ರೇಷ್ಠ ನಟಿಯನ್ನು ಕಳೆದುಕೊಂಡಂತಹ ಅನುಭವ ಈ ರಾಜ್ಯದ ಜನತೆ ಆಗಿದೆ ಎನ್ನುವುದನ್ನು ಉಲ್ಲೇಖ ಮಾಡಲು ಬಯಸುತ್ತೇನೆ.

ಡಾ:ಹೆಚ್.ಗಿರಿಜಮ್ಮರವರು ಖ್ಯಾತ ಸ್ತ್ರೀರೋಗ ವೈದ್ಯೆ ಹಾಗೂ ಲೇಖಕಿಯಾಗಿದ್ದರು. ಆರೋಗ್ಯ ಕ್ಷೇತ್ರದ ಜೊತೆ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಅಪರೂಪದ ಸಾಧನೆ ಮಾಡಿದ್ದಾರೆ. ಶ್ರೀಯುತರು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, 17 ಕೃತಿಗಳು, 16 ಕಾದಂಬರಿಗಳು, 09 ಕಥಾ ಸಂಕಲನ, 26 ವೈದ್ಯಕೀಯ ಲೇಖನಗಳು. ಏಡ್ಸ್ ನಿವಾರಣೆ ಅಂದೋಲನಕ್ಕೆ ಸಂಬಂಧಿಸಿದ 13 ಕಿರು ನಾಟಕಗಳು ಹಾಗೂ 15 ನಾಟಕ ಕೃತಿಗಳನ್ನು ರಚಿಸಿದ್ದಾರೆ. ಸಾಕ್ಷ್ಯ ಚಿತ್ರಗಳನ್ನು ರೂಪಿಸಿ ಚಲನಚಿತ್ರವನ್ನೂ ನಿರ್ದೇಶಿಸಿದ್ದಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಲೇಖಕಿ ಹಾಗೂ ಖ್ಯಾತ ವೈದ್ಯರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ದಯಮಾಡಿ ಕ್ಷಮಿಸಬೇಕು. ಶ್ರೀ ಎಸ್.ಎಂ.ಆನಂದ್‌ರವರ ಹೆಸರನ್ನು ಉಲ್ಲೇಖ ಮಾಡುವುದು slip ಆಗಿತ್ತು. ಹಾಗಾಗಿ, ಈಗ ಅವರ ಹೆಸರನ್ನು ಉಲ್ಲೇಖ ಮಾಡುತ್ತಿದ್ದೇನೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಸ್.ಎಂ.ಆನಂದ್‌ರವರು ದಿನಾಂಕ 01.08.2021 ರಂದು ನಿಧನ ಹೊಂದಿರುತ್ತಾರೆ. 1949ರ ಡಿಸೆಂಬರ್, 14 ರಂದು ಹಾಸನ ತಾಲ್ಲೂಕಿನ ಶಂಕರನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ. ಎಲ್.ಎಲ್.ಬಿ., ಪದವಿಯನ್ನು ಹೊಂದಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು 2004 ರಿಂದ 2010ರವರೆಗೆ ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ, ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷರಾಗಿ ಹಾಗೂ ಹಾಸನ ನಗರಾಭಿವೃದ್ಧಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ನಿರಂತರವಾಗಿ ಒಂಭತ್ತು ವರ್ಷಗಳ ಕಾಲ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಶ್ರೀಯುತರು ದಾಖಲೆ ಅವಧಿಯ ಸೇವೆ ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ವಕೀಲರನ್ನು ಹಾಗೂ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ 24 ಜನ ಗಣ್ಯರೊಂದಿಗೆ ಕೋವಿಡ್-19 ರ ಎರಡನೇ ಅಲೆಯಲ್ಲಿ ಮತ್ತು ಕೋವಿಡ್ ಕಾಯಿಲೆಗೆ ಸಂಬಂಧಪಟ್ಟಂತೆ, ತಮ್ಮ ಸೇವೆಯನ್ನು ಮಾಡಿ ತಮ್ಮ ಬದುಕನ್ನು ಸಮರ್ಪಣೆ ಮಾಡಿದಂತಹ ಕೋವಿಡ್-19 ರಿಂದ ಮೃತಪಟ್ಟಂತಹ ವ್ಯಕ್ತಿಗಳಿಗೆ ಸಂತಾಪವನ್ನು ಸೂಚಿಸಿದ್ದೀರಿ. 24 ಜನ ಗಣ್ಯರು ಮತ್ತು ಕೋವಿಡ್ ಸಂತ್ರಸ್ಥರಲ್ಲಿ ಮೃತರು ಸೇರಿದಂತೆ ಅವರೆಲ್ಲರ ಆತ್ಮಕ್ಕೆ ಪರಮಾತ್ಮನು ಸದ್ಗತಿಯನ್ನು ನೀಡಲಿ ಮತ್ತು ಅವರ ಅಗಲಿಕೆ ನೋವವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತಾ, ತಮ್ಮ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಧನ್ಯವಾದಗಳು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದ್ದಂತಹ ಸುರ್ಧೀಘವಾದ ಸಂತಾಪ ಸೂಚಕ ಗೊತ್ತುವಳಿಯನ್ನು ಬೆಂಬಲಿಸಿ ಮೃತರ ವಿಚಾರವಾಗಿ ತಾವು ವ್ಯಕ್ತ ಪಡಿಸಿದಂತಹ ಅನೇಕ ವಿಚಾರಗಳಿಗೆ ಅನುಗುಣವಾಗಿ ನಾನು ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮನ್ನು ಸುಮಾರು ವ್ಯಕ್ತಿಗಳು ಆಗಲಿದ್ದಾರೆ. ಅದರಲ್ಲಿ ಪ್ರಮುಖರಾದಂತಹ ಶ್ರೀ ಕೆ.ಬಿ.ಶಾಣಪ್ಪನವರು ಸಚಿವರು, ಸಂಸದರು, ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರ ನಿಧನದಿಂದಾಗಿ ಶೋಷಿತ ವರ್ಗದ ಒಂದು ಪ್ರಬಲ ಧ್ವನಿ ಅಡಗಿದಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾನಾಯಕರವರು ಹೇಳಿದಂತೆ, ಶ್ರೀಯುತರು ವಿರೋಧ ಪಕ್ಷದ ಉಪ ನಾಯಕರಾಗಿ ಅತ್ಯಂತ ಸಮರ್ಥರಾಗಿ ವಾದ ಮಂಡಿಸುತ್ತಿದಿದ್ದು ಇನ್ನೂ ನನಗೆ ನೆನಪಿನಗಂಳದಲ್ಲಿದೆ. ಅಲ್ಲದೇ, ಶ್ರೀಯುತರು ನನಗೆ ವಿಶೇಷವಾಗಿ ಆತ್ಮೀಯ ಗೆಳೆಯರಾಗಿದ್ದರು. ಒಬ್ಬ ಸಮರ್ಥ ಕಾರ್ಮಿಕ ಮುಖಂಡರಾಗಿ ಕಾರ್ಮಿಕರ ಕಲ್ಯಾಣಕ್ಕಾಗಿ ಬಹಳಷ್ಟು ಕೆಲಸಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಶ್ರೀಯುತರು ಒಬ್ಬ ಶ್ರೇಷ್ಠ ವಾಗ್ಮಿಯಾಗಿ ಮತ್ತು ಅತ್ಯುತ್ತಮ ಸಂಸದೀಯ ಪಟುವಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಶ್ರೇಷ್ಠ ಸಂಸದೀಯ ಪಟು ಹಾಗೂ ಒಬ್ಬ ಸಮರ್ಥ ದಲಿತ ನಾಯಕನನ್ನು ಕಳೆದುಕೊಂಡಂತಾಗಿದೆ.

ಡಾ: ಮುಮ್ತಾಜ್ ಅಲಿಖಾನ್‌ರವರು ಈ ಸದನದ ಸದಸ್ಯರಾಗಿ ಮತ್ತು ಸಚಿವರಾಗಿ ಕೆಲಸ ಮಾಡಿದ್ದಾರೆ. ನಮ್ಮ ನಾಡಿನ ಶಿಕ್ಷಣ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದಲ್ಲಿಯೂ ಸ್ವಹ ಅವರದ್ದೇ ಆದಂತಹ ಕೊಡುಗೆಯನ್ನು ನೀಡಿದಂತವರು. ಶ್ರೀಯುತರು ಶಿಕ್ಷಣ ಪ್ರೇಮಿಯಾಗಿದ್ದರು. ಅಲ್ಲದೇ, ಶ್ರೀಯುತರು ಸುಮಾರು 30 ವರ್ಷಗಳ ಕಾಲ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ನಡೆಸುವುದರ ಜೊತೆಗೆ ಆರ್ಥಿಕವಾಗಿ ತೊಂದರೆಯಲ್ಲಿದ್ದ ಬಡ ಕುಟುಂಬಗಳ ಮಕ್ಕಳಿಗೆ ಧನ ಸಹಾಯ ಮಾಡಿ ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿರುವುದು ಅವರ ಹೃದಯ ಶ್ರೀಮಂತಿಕೆಗೆ ಒಂದು ಉದಾಹರಣೆ ಎಂದು ಹೇಳಬಹುದು. ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಸರಳ ಸಜ್ಜನ ರಾಜಕಾರಣಿ ಹಾಗೂ ಸಮಾಜ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ಡಾ:ಸಿದ್ದಲಿಂಗಯ್ಯರವರು ನಮ್ಮ ನಾಡಿನ ದಲಿತ ಕವಿ ಕಣ್ಮಣಿ ಎಂದು ಹೇಳಬಹುದು. ಶ್ರೀಯುತರು ಮೇಲ್ಮನೆಗೆ ಎರಡು ಬಾರಿ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಶ್ರೀಯುತರು ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿಇಡೀ ಸದನವೇ 'pin drop silence' ಆಗಿದ್ದನ್ನು ನಾನು ಬಹಳಷ್ಟು ಸಂದರ್ಭದಲ್ಲಿ ನೋಡಿದ್ದೇನೆ. ಅವರು ಒಳ್ಳೆಯ ಸಂಸದೀಯ ಪಟುವಾಗಿದ್ದರು. ಬಂಡಾಯ ಸಾಹಿತಿಯಾಗಿದ್ದರು. ಅನೇಕ ಮೌಲಿಕ ಕವನಗಳನ್ನು ರಚನೆ ಮಾಡುವುದರ ಜೊತೆಗೆ, 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಭಾಜನರಾಗಿದ್ದರು. ಶ್ರೀಯುತರ ನಿಧನದಿಂದ ಒಬ್ಬ ಹಿರಿಯ ಕವಿ, ಸಾಹಿತ್ಯ ಲೋಕದ ಮೇರು ಪರ್ವತವೇ ಕಳಚಿ ಬಿದ್ದಂತಾಗಿದೆ.

ಶ್ರೀ ಎಸ್.ಆರ್.ಆನಂದ್‌ರವರು ಮತ್ತು ನಾನು ಬಹಳ ಆತ್ಮೀಯ ಗೆಳೆಯರಾಗಿದ್ದೇವು. ನನಗೆ ಅವರ ಜೊತೆಗೆ ಆರು ವರ್ಷಗಳ ಕಾಲ ಒಡನಾಟವಿತ್ತು. ಅದರಲ್ಲೂ ಅವರು ವಿಶೇಷವಾಗಿ ಮೇಲ್ಮನೆ ಸದಸ್ಯರಾದ ನಂತರ ನಮ್ಮ ಪಕ್ಷ ಕರ್ನಾಟಕ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ 24 X 7 ಕೆಲಸ ಮಾಡುವುದನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಶ್ರೀಯುತರು ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ಮತ್ತು ಖ್ಯಾತ ನ್ಯಾಯವಾದಿಗಳಾಗಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ಅಲ್ಲದೇ, ಶ್ರೀಯುತರು ಸುಮಾರು ಒಂಭತ್ತು ವರ್ಷಗಳ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ದಾಖಲೆ ಅವಧಿಯ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಹೊಸದಾಗಿ ಬಂದತಹ ಕಿರಿಯ ವಕೀಲರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಶ್ರೀಯುತರ ನಿಧನದಿಂದ ರಾಜ್ಯವು ಹಿರಿಯ ವಕೀಲರನ್ನು ಹಾಗೂ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀ ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪರವರು ಆರು ಬಾರಿ ವಿಧಾನಸಭೆಯ ಸದಸ್ಯರಾಗಿ, ಸಚಿವರಾಗಿದ್ದರು. ನನಗೆ ಅವರ ನಿಧನದಿಂದ 12ನೇ ಶತಮಾನದ ಬಬ್ಬ ಶರಣರನ್ನು ಕಳೆದುಕೊಂಡಂತಹ ಅನುಭವ ಆಗಿದೆ. ಶ್ರೀಯುತರಿಂದ ನಯ್ಯ, ವಿನಯ, ಸೌಜನ್ಯತೆ, ಶಿಷ್ಟಚಾರವನ್ನು ಕಲಿಯಬೇಕು. ಶ್ರೀಯುತರು ಅಪಾರವಾದ ಜ್ಞಾನವನ್ನು ಹೊಂದಿದ್ದರು. ಅದರಲ್ಲೂ ವಿಶೇಷವಾಗಿ ರೈತರ ಬಗ್ಗೆ ಬಹಳ ಕಾಳಜಿ ಹೊಂದಿದ್ದರು. ಶ್ರೀಯುತರು ಬೆಳೆ ವಿಮೆ ಬಗ್ಗೆ ಬಹಳಷ್ಟು ಅಧ್ಯಯನ ಮಾಡಿ ಅನೇಕ ರೈತರು ಬೆಳೆ ವಿಮೆಯಿಂದ ವಂಚಿತರಾದಂತಹ ಸಂದರ್ಭದಲ್ಲಿ ರೈತರಿಗೆ ನ್ಯಾಯವನ್ನು ಒದಗಿಸಿದಂತಹ ಕೀರ್ತಿಗೆ ಭಾಜನರಾಗಿದ್ದಾರೆ. ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದಿಂದ ಆರು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗುವುದರ ಜೊತೆಗೆ ಹಾವೇರಿ ಜಿಲ್ಲೆಗೆ ಅತ್ಯುತ್ತಮವಾದ ಕೆಲಸವನ್ನು ಮಾಡಿ ಅದರ ಅಭಿವೃದ್ಧಿಯಲ್ಲಿ ಸಿಂಹ ಪಾಲು ನೀಡಿದಂತಹ ಹಿರಿಯ ರಾಜಕಾರಣಿಯಾಗಿದ್ದರು. ಅಲ್ಲದೇ, ಸಚಿವರಾಗಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದಂತಹ ಕೀರ್ತಿಗೆ ಭಾಜನರಾದವರು. ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀ ಕೃಷ್ಣನವರು ಕೆಳಮನೆಯ ಸಭಾಧ್ಯಕ್ಷರಾಗಿ, ಸಚಿವರಾಗಿ ಹಾಗೂ ಸಂಸದರಾಗಿ ಅತ್ಯುತ್ತಮವಾದಂತಹ ಕೆಲಸ ಮಾಡಿದ್ದಾರೆ. ಅವರ ನಿಧನದಿಂದ ಸಾರ್ವಜನಿಕ ಕ್ಷೇತ್ರ ಬರಡಾಗಿದೆ ಎಂದು ಹೇಳಬಹುದು. ಅವರು ವೃತ್ತಿಯಲ್ಲಿ ವಕೀಲರಾಗಿದ್ದರು. ಅವರು ಜನಪರ ಕಾಳಜಿಯಿಂದ ರೈತರ ಹೋರಾಟದಲ್ಲಿ ಭಾಗಿಯಾಗುತ್ತಿದ್ದರು. ಕಲುಷಿತವಾದ ರಾಜಕಾರಣದಲ್ಲಿ ಅಪ್ಪಟ ಪ್ರಾಮಾಣಿಕ ರಾಜಕಾರಣಿ ಎಂದು ಹೇಳುವುದಕ್ಕೆ ಅಡ್ಡಿಯಿಲ್ಲ. ಭ್ರಷ್ಟಾಚಾರ ವಿರೋಧಿ ಸಂಘದ ಸಂಸ್ಥಾಪಕರು ಹಾಗೂ ಸಂಚಾಲಕರಾಗಿ ಕೆಲಸ ಮಾಡಿದ್ದರು. ಅಂದರೆ, ಭ್ರಷ್ಟಾಚಾರಕ್ಕೆ ಕಡು ವಿರೋಧಿಯಾಗಿದ್ದರು ಎನ್ನುವುದು ಕಂಡುಬರುತ್ತದೆ. ಶ್ರೀಯುತರು ಗಾಂಧಿವಾದಿಗಳಾಗಿದ್ದರು. ಅವರು ಮಂಡ್ಯದ ಗಾಂಧಿ ಎಂದೇ ಹೆಸರುವಾಸಿಯಾಗಿದ್ದರು. ಶ್ರೀಯುತರ ನಿಧನದಿಂದ ಗಾಂಧಿ ವಾದಿಯ ಕೊನೆಯ ಕೊಂಡಿ ಕಳಚಿದಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(632) 13-09-2021 (11.50) ಎಂವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾಜಿ ಸಂಸದರು, ಮಾಜಿ ಸಚಿವರು, ವಿಧಾನಸಭೆಯ ಮಾಜಿ ಸದಸ್ಯರು, ಮಂಡ್ಯ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಕಾವೇರಿ ಹೋರಾಟದ ರೂವಾರಿಯಾದಂತಹ ಡಾ||ಜಿ.ಮಾದೇಗೌಡರ ನಿಧನ ಕಾವೇರಿ ಕಣಿವೆಯ ರೈತ ಸಮುದಾಯಕ್ಕೆ ಒಂದು ದೊಡ್ಡ ಹಾನಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎರಡು ಬಾರಿ ಸಂಸತ್ ಸದಸ್ಯರಾಗಿ, ಕೃಷ್ಣ ಮತ್ತು ಕಾವೇರಿ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ, ಕಾವೇರಿ ಮಧ್ಯಂತರ ತೀರ್ಪನ್ನು ಪಾಲಿಸಲು ಸಾಧ್ಯವಿಲ್ಲವೆಂದು ಕಡಾ ಖಂಡಿತವಾಗಿ ಶಾಸನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳುವುದಕ್ಕೆ ಯಾರಾದರೂ ಕಾರಣೀಭೂತರೆಂದರೆ ನಿಸ್ಸಂಶಯವಾಗಿ ಅದು ಡಾ||ಜಿ.ಮಾದೇಗೌಡರು ಎಂದು ಹೇಳಬಹುದು. 1996ರಲ್ಲಿ ಕಾವೇರಿ ಹೋರಾಟ ತೀವ್ರಗೊಂಡಂತಹ ಸಂದರ್ಭದಲ್ಲಿ ಸಂಸತ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಕಾವೇರಿ ಹೋರಾಟದ ನೇತೃತ್ವವನ್ನು ವಹಿಸಿದಂತಹ ಒಬ್ಬ ಧೀಮಂತ ನಾಯಕ. ಆದರೆ, ಇವತ್ತಿನ ದಿನಗಳಲ್ಲಿ ಒಬ್ಬ ಪಂಚಾಯಿತಿ ಸದಸ್ಯ ಕೂಡ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದಿಲ್ಲ. ಆದರೆ, ಅವರು ಅಂತಹ ಅತ್ಯುನ್ನತವಾದಂತಹ ಸಂಸತ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕಾವೇರಿ ಕಣಿವೆ ರೈತರ ಹಿತಾಸಕ್ತಿ ಕಾಪಾಡುವ ವಿಚಾರದಲ್ಲಿನ ಅವರ ದಿಟ್ಟತನ, ರೈತಪರ ಕಾಳಜಿಯಿಂದಾಗಿ ವಿಶೇಷವಾಗಿ ಕಾವೇರಿ ಕಣಿವೆಯ ರೈತರು ಅವರನ್ನು ಕಾಯಂ ಆಗಿ ನೆನಪಿಸಿಕೊಳ್ಳುತ್ತಾರೆ. ನಾನು ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಆಗದೆ ಇದ್ದ ಕಾರಣಕ್ಕೆ ಆ ನಂತರ ಅವರ ಕುಟುಂಬ ವರ್ಗದವರನ್ನು ಭೇಟಿಯಾಗಿ ಸಾಂತ್ವನ ಹೇಳಿ ಬಂದಿರುವುದನ್ನು ನೆನಪಿಸಿಕೊಳ್ಳುತ್ತೇನೆ. ಅವರು ರೈತರ ಹಕ್ಕಿಗಾಗಿ ವಿಶೇಷವಾಗಿ ಕಾವೇರಿ ಕಣಿವೆ ಭಾಗದ ರೈತರಿಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರೈತಪರ ದಿಟ್ಟ ಹೋರಾಟಗಾರರು ಆಗಿದ್ದಂತಹ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಷಣ್ಮುಖಪ್ಪ ಬಸಪ್ಪ ಸಿದ್ನಾಳರವರು ನಾಲ್ಕು ಬಾರಿ ಸಂಸತ್ ಸದಸ್ಯರಾಗಿ ಬೆಳಗಾವಿ ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರು ನ್ಯಾಯವಾದಿ ಮತ್ತು ಕೃಷಿಕರಾಗಿ ಕೆಲಸ ಮಾಡಿದ್ದಾರೆ. ಬೆಳಗಾವಿ ವಕೀಲರ ಸಂಘದ ಅಧ್ಯಕ್ಷರಾಗಿ ಮತ್ತು ಗ್ರಾಮೀಣ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಬೆಳಗಾವಿ ಜಿಲ್ಲೆಗೆ ಬಹಳಷ್ಟು ಕೊಡುಗೆಗಳನ್ನು ನೀಡಿದಂತಹವರು. ಅವರು ಸರಳ ಮತ್ತು ಸಜ್ಜನ ರಾಜಕಾರಣಿಯಾಗಿ ಹೆಸರನ್ನು ಗಳಿಸಿದಂತಹವರು. ಶ್ರೀಯುತರ ನಿಧನ ಒಬ್ಬ ಅನುಭವಿ ಮುತ್ಸದ್ದಿ ಮತ್ತು ಒಬ್ಬ ಶ್ರೇಷ್ಠ ಸಂಸದ್‌ಪಟುವನ್ನು ಕಳೆದುಕೊಂಡಂತಾಗಿದೆ.

ಶ್ರೀ ಎಂ.ರಾಜಗೋಪಾಲರವರು ಒಂದು ಬಾರಿ ರಾಜ್ಯಸಭೆಯ ಸದಸ್ಯರಾಗಿ ಸಾರ್ವಜನಿಕ ಬದುಕಿನಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ನಿಧನದಿಂದಾಗಿ ರಾಜ್ಯದ ಒಬ್ಬ ಹಿರಿಯ ಪ್ರಮುಖ ರಾಜಕಾರಣಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್‌ರವರ ಹೆಸರನ್ನು ಕೇಳಿರದಂತಹವರೇ ಕರ್ನಾಟಕ ರಾಜ್ಯದಲ್ಲಿ ಯಾರೂ ಇಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ಇಡೀ ನಾಡಿನ ಉದ್ದಗಲಕ್ಕೂ ಸಂಚಾರ ಮಾಡಿ, ರೈತರ ಹೋರಾಟವನ್ನು ಸಂಘಟನೆ ಮಾಡಿ, ರೈತರಲ್ಲಿ ಧೈರ್ಯ ತುಂಬಿ, ಅನ್ನದಾತರ ಬದುಕಿಗೆ ಮಹತ್ವದ ತಿರುವು ಕೊಟ್ಟಂತಹವರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಈ ರಾಷ್ಟ್ರದ tallest personality ಅನಿಸುಕೊಳ್ಳುವಂತಹ ಅವರು ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ, ಗ್ರಾಮೀಣ ಭಾಗದಲ್ಲಿ ಜಮೀನುಗಳಿಗೆ ಹೋಗುವಂತಹ ರಸ್ತೆಗಳಿಗೆ ವಿಶೇಷವಾದಂತಹ ಅನುದಾನ ನೀಡಿ ದೊಡ್ಡ ಪ್ರಮಾಣದಲ್ಲಿ 'ಗ್ರಾಮ ಸಡಕ್' ಯೋಜನೆ ಅಕ್ಷರಶಃ ಜಾರಿಗೆ ಬರುವುದಕ್ಕೆ ಅವರು ಕಾರಣೀಭೂತರು ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಭಾಗದಲ್ಲಿ ಅವರ ಹೆಸರು ಅತ್ಯಂತ ಚಿರಸ್ಮರಣೀಯವಾಗಿದೆ. ಅವರ ನಿಧನದಿಂದ ರಾಜ್ಯ ಒಬ್ಬ ಶ್ರೇಷ್ಠ ರೈತ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀ ಎ.ಕೆ.ಅಬ್ದುಲ್ ಸಮದ್‌ರವರು ವಿಧಾನಸಭೆಯ ಸದಸ್ಯರಾಗಿ ಮತ್ತು ಮಾಜಿ ಸಚಿವರಾಗಿ ಕೆಲಸ ಮಾಡಿದಂತಹವರು. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದ ಅವರು ರಾಜ್ಯದ ಪ್ರತಿಷ್ಠಿತ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಒಳ್ಳೆಯ ಸಹಕಾರಿಗಳಾಗಿ ಕೆಲಸ ಮಾಡಿದಂತಹವರು ಮತ್ತು ಆರೋಗ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರಾಗಿ ಕೂಡ ಒಳ್ಳೆಯ ಸೇವೆ ಮಾಡಿದಂತಹ ಶ್ರೀ ಎ.ಕೆ.ಅಬ್ದುಲ್ ಸಮದ್‌ರವರ ನಿಧನದಿಂದ ಒಬ್ಬ ಹಿರಿಯ ರಾಜಕಾರಣಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ.

ಪ್ರೊ.ಜಿ.ವೆಂಕಟಸುಬ್ಬಯ್ಯನವರು ಕನ್ನಡ ನಿಘಂಟು ಲೋಕವನ್ನು ಶ್ರೀಮಂತಗೊಳಿಸಿದ ಪದ ಬ್ರಹ್ಮ, ಶತಾಯುಷಿಗಳಾಗಿದ್ದಂತಹವರು. ಇವರು ಭಾಷಾ ತಜ್ಞರಾಗಿ, ವ್ಯಾಕರಣ ತಜ್ಞರಾಗಿ, ಸಂಶೋಧಕರಾಗಿ, ಪ್ರಾಧ್ಯಾಪಕರಾಗಿ, ಅದಕ್ಕಿಂತ ಹೆಚ್ಚು ನಿಘಂಟು ರಚನೆಯಲ್ಲಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡ ಕಾಯಕ ಜೀವಿಯಾಗಿದ್ದರು. ಅವರು ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಂತಹವರು. ಶ್ರೀಯುತರ ನಿಧನದಿಂದ ಕನ್ನಡ ಸಾರಸ್ವತ ಲೋಕದ ಒಬ್ಬ ಧ್ರುವತಾರೆಯನ್ನು ಕಳೆದುಕೊಂಡಂತಾಗಿದೆ.

ಹಿರಿಯ ಕವಿ ಶ್ರೀ ಜರಗನಹಳ್ಳಿ ಶಿವಶಂಕರ್‌ರವರು, ಶಿಲ್ಪ ಕಲಾವಿದ ಶ್ರೀ ಷಣ್ಮುಖಪ್ಪ ಕಾಶಪ್ಪ ಯರಕರರವರು,  ಚಲನಚಿತ್ರ ನಟ ಅರವಿಂದ್‌ರವರು, ಹಿರಿಯ ಶಿಲ್ಪ ಕಲಾವಿದೆ ಶ್ರೀಮತಿ ಕನಕ ಮೂರ್ತಿಯವರು, ಹಿರಿಯ ವಿದ್ವಾಂಸರಾದಂತಹ ಡಾ||ಲಕ್ಷ್ಮೀತಾತಾಚಾರ್‌ರವರು ಹಾಗೂ ನೃತ್ಯ ಕಲಾವಿದೆಯಾದಂತಹ ಶ್ರೀಮತಿ ಬಿ.ಭಾನುಮತಿ, ಇವರೆಲ್ಲರ ನಿಧನದಿಂದ ನಾವು ಕನ್ನಡ ನಾಡಿನ ಅನರ್ಘ್ಯರತ್ನಗಳನ್ನು ಕಳೆದುಕೊಂಡಂತಾಗಿ ನಮಗೆಲ್ಲರಿಗೂ ಬಹಳ ದೊಡ್ಡ ನೋವು ಉಂಟಾಗಿದೆ.

ಡಾ||ಅಶೋಕ ರಾಮಣ್ಣ ಸೊನ್ನದರವರು ಖ್ಯಾತ Diabetic Specialist, ಇದು ಮಾನ್ಯ ಸಚಿವರಾದಂತಹ ಶ್ರೀ ಗೋವಿಂದ ಎಂ. ಕಾರಜೋಳರವರಿಗೂ ಸಹ ಗೊತ್ತು. ವಿಶೇಷವಾಗಿ ಅವರು ಮುಧೋಳ ತಾಲ್ಲೂಕಿನ ಶ್ರೇಷ್ಠ ವೈದ್ಯರು. ಅವರು ಅಮೆರಿಕದ ಮಿಚಿಗನ್ ರಾಜ್ಯದ ಸಮುದಾಯ ಆರೋಗ್ಯ ಕೇಂದ್ರದಲ್ಲಿ 38 ವರ್ಷಗಳ ಕಾಲ ಅಂದರೆ ಸುಮಾರು ನಾಲ್ಕು ದಶಕಗಳ ಕಾಲ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸಿ, ನಂತರ ಬಾಗಲಕೋಟೆಗೆ ಬಂದು ಹತ್ತು ವರ್ಷ ವೈದ್ಯರಾಗಿ ಸೇವೆ ಸಲ್ಲಿಸಿದಂತಹವರು. ಅವರು ನಮ್ಮೆಲ್ಲರಿಗೂ ಬಹಳ ಚಿರಪರಿಚಿತರು.

**ಸಭಾಪತಿಯವರು:-** ಅವರು ಬಂಟನೂರ್‌ನವರು.

**ಶ್ರೀ ಎಸ್.ಆರ್.ಪಾಟೀಲ್:-** ಅವರು ಅತ್ಯಂತ ಶ್ರೀಮಂತ ಕೃಷಿ ಕುಟುಂಬದವರು. ಬಹುತೇಕವಾಗಿ ಅವರ ಮನೆಯವರೆಲ್ಲರೂ ಸಹ ಅಮೆರಿಕಾಕ್ಕೆ ಹೋಗಿದ್ದಾರೆ. ಒಟ್ಟು ಒಂಬತ್ತು ಪಿ.ಹೆಚ್‌ಡಿ ಪಡೆದಂತಹ ಕುಟುಂಬದವರು. ಡಾ||ಅಶೋಕ ಸೊನ್ನದರವರ ತಂದೆಯವರು ಕೂಡ ಅಷ್ಟೇ ಜನಾನುರಾಗಿಯಾಗಿದ್ದರು. ಬಡವರಿಗೆ ಉಚಿತವಾಗಿ ವೈದ್ಯಕೀಯ ಸೇವೆಯನ್ನು ಸಲ್ಲಿಸುವುದರ ಜೊತೆಗೆ ಉಚಿತವಾಗಿ ಔಷಧಿಗೂ ಕೂಡ ಹಣ ಕೊಡುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಬ್ಬ ಹೃದಯ ಶ್ರೀಮಂತಿಕೆಯ ವೈದ್ಯ ಎಂಬುದನ್ನು ನಾನು ಕಂಡಿದ್ದೇನೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರ ಈ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅದಕ್ಕೆ ಕಾರಣೀಭೂತರು ಎಂದರೆ ಮಾನ್ಯ ಸಚಿವರಾದಂತಹ ಶ್ರೀ ಗೋವಿಂದ ಎಂ ಕಾರಜೋಳರವರು ಎಂದು ನೆನಪಿಸಿಕೊಳ್ಳುತ್ತೇನೆ. ಮಾನ್ಯ ಸಚಿವರು ಅವರನ್ನು ಗುರುತಿಸಿದ್ದಾರೆ. ಅವರು ಅದಕ್ಕೆ ಸಮರ್ಥರು ಮತ್ತು ಎಲ್ಲಾ ದೃಷ್ಟಿಯಿಂದ ಯೋಗ್ಯರಾದಂತಹವರು. ಅದಕ್ಕೆ ನಾನು ಶ್ರೀ ಗೋವಿಂದ ಎಂ. ಕಾರಜೋಳರವರನ್ನು ಸಹ ಅಭಿನಂದಿಸುತ್ತೇನೆ. ಅವರು ವೈದ್ಯರಾಗಿ ಎರಡು ಬಾರಿ ಕೋವಿಡ್ ವ್ಯಾಕ್ಸಿನ್ ಅನ್ನು ತೆಗೆದುಕೊಂಡಿದ್ದರು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಕಳೆದ ಬಾರಿ ಅವರು ಆಸ್ಪತ್ರೆಯಲ್ಲಿ ಇದ್ದಾಗ ಎರಡು ಬಾರಿ ಅವರ ಜೊತೆ ಮಾತನಾಡಿದ್ದೆ. ಈಗ ಅವರ ಕಣ್ಮರೆಯಿಂದ ಮಧುಮೇಹ ರೋಗಿಗಳು ಅನಾಥರಾಗಿದ್ದಾರೆಂದರೆ ತಪ್ಪಾಗುವುದಿಲ್ಲ. ಒಬ್ಬ ಹಿರಿಯ ವೈದ್ಯ ಮತ್ತು ಒಬ್ಬ ಒಬ್ಬ ಸಮಾಜ ಚಿಂತಕರೊಬ್ಬರನ್ನು ಕಳೆದುಕೊಂಡಂತಹ ಅನುಭವವಾಗಿದೆ.

ಶ್ರೀ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿಯವರು ಇಡೀ ರಾಜ್ಯಕ್ಕೆ ಚಿರಪರಿಚಿತರು. ಅವರು ಶತಾಯುಷಿಗಳು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಗಾಂಧೀಜಿಯವರ ಬಗ್ಗೆ ಪುಸ್ತಕವನ್ನು ಓದಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದಂತಹವರು. ಕ್ವಿಟ್ ಇಂಡಿಯಾ ಮೂವ್‌ಮೆಂಟಿನ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಕೆಲಸ ಮಾಡಿದಂತಹವರು. ಅವರು ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು. ಮುಖ್ಯಮಂತ್ರಿಗಳಾಗಿದಂತಹವರು ಕೂಡ ಅವರ ಬಳಿ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ನಿಧನದಿಂದ ರಾಜ್ಯವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಖ್ಯಾತ ಪತ್ರಕರ್ತ ಹಾಗೂ ಒಬ್ಬ ಗಾಂಧಿವಾದಿಯನ್ನು ಕಳೆದುಕೊಂಡಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಪ್ರೊ. ವಸಂತ ಕುಷ್ಟಗಿಯವರು ನಾಡಿನ ಹಿರಿಯ ಸಾಹಿತಿಗಳು, ಕವಿಗಳು ಹಾಗೂ ವಿದ್ವಾಂಸರು. ಇವರ ನಿಧನದಿಂದಾಗಿ ರಾಜ್ಯವು ಖ್ಯಾತ ಕವಿಗಳು, ವಾಗ್ಮಿಗಳು ಹಾಗೂ ಹಿರಿಯ ವಿದ್ವಾಂಸರೊಬ್ಬರನ್ನು ನಾಡು ಕಳೆದುಕೊಂಡಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಪ್ರೊ.ಎಂ.ಐ.ಸವದತ್ತಿಯವರು ಖ್ಯಾತ ಶಿಕ್ಷಣ ತಜ್ಞರು, ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಂತಹವರು. ಅವರು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಆಗಾಧವಾದ ಸಾಧನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಂತಹವರು. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಯಾಗಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಮಿತಿಯ ಸಂಸ್ಥಾಪಕ ಉಪಾಧ್ಯಕ್ಷರಾಗಿ ಹಾಗೂ ಯು.ಜಿ.ಸಿ. ಸದಸ್ಯರಾಗಿ ಅತ್ಯುತ್ತಮ ಕೆಲಸ ಮಾಡಿದಂತಹವರು. ಖ್ಯಾತ ಶಿಕ್ಷಣ ತಜ್ಞರಾಗಿದ್ದ ಇವರು ರಾಜ್ಯೋತ್ಸವ ಪ್ರಶಸ್ತಿಗೂ ಕೂಡ ಭಾಜನರಾದಂತಹವರು. ಅವರ ನಿಧನದಿಂದಾಗಿ ರಾಜ್ಯವು ಒಬ್ಬ ಶ್ರೇಷ್ಠ ಶಿಕ್ಷಣ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀಮತಿ ಜಯಂತಿಯವರು 'ಅಭಿನಯ ಶಾರದೆ' ಎಂದು ಎಲ್ಲರೂ ಮಾತನಾಡುತ್ತಾರೆ.

**(ಮುಂದು...**

(633) 13.09.2021 12.00 ಎಲ್‌ಎಲ್/ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್(ಮುಂದು...):-**

ಬಹುತರವಾಗಿ, ನನಗೆ ಅನಿಸಿದ ಮಟ್ಟಿಗೆ ಇವರು ನಟಿಸಿದಂತಹ ಚಲನಚಿತ್ರಗಳನ್ನು ನೋಡಲಾರದಂತಹವರು ಇಲ್ಲವೆಂದು ನಾನು ಭಾವಿಸುತ್ತೇನೆ. ಈಗಿನ ಯುವ ಜನಾಂಗದ ವಿಚಾರ ಬೇರೆ. ಆದರೆ, ಶ್ರೀಯುತರು ಅಷ್ಟು ಚಿರಪರಿಚಿತರು ಮತ್ತು ಹಿರಿಯ ಚಲನಚಿತ್ರ ನಟಿಯಾಗಿದ್ದರು. ಅಷ್ಟೇ ಅಲ್ಲದೇ, ಪಂಚ ಭಾಷಾ ತಾರೆ ಎಂದು ಹೆಸರು ಪಡೆದಂತಹವರು. ಅವರ ನಿಧನದಿಂದ ಚಲನಚಿತ್ರ ಲೋಕ ಸ್ತಬ್ಧವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಶ್ರೀಮತಿ ಜಯಂತಿಯವರ ನಿಧನದಿಂದ ರಾಜ್ಯವು ಅಪ್ರತಿಮ ಸಾಧನೆ ಮತ್ತು ಅತ್ಯಂತ ಪ್ರತಿಭಾನ್ವಿತ ಕಲಾವಿದರನ್ನು ಕಳೆದುಕೊಂಡಂತಾಗಿದೆ.

ಡಾ: ಹೆಚ್. ಗಿರಿಜಮ್ಮನವರು ಖ್ಯಾತ ವೈದ್ಯರು ಮತ್ತು ಬರಹಗಾರರು ಕೂಡ ಆಗಿದ್ದರು. ಅಷ್ಟೆ ಅಲ್ಲದೇ, ಸ್ತ್ರೀರೋಗ ತಜ್ಞರು ಆಗಿದ್ದರು ಹಾಗೂ ಆರೋಗ್ಯ ಕ್ಷೇತ್ರದ ಜೊತೆಗೆ, ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡ ಬಹಳ ಕೃಷಿ ಮತ್ತು ಸಾಧನೆ ಮಾಡಿದಂತಹವರು. ಶ್ರೀಯುತರ ನಿಧನದಿಂದ ರಾಜ್ಯ ಒಬ್ಬ ಹಿರಿಯ ಲೇಖಕಿ ಮತ್ತು ಸ್ತ್ರೀರೋಗ ತಜ್ಞರನ್ನು ಕಳೆದುಕೊಂಡಂತಾಗಿದೆ.

ಇನ್ನೂ ಕೊನೆಯದಾಗಿ, ಕೋವಿಡ್-೧೯ ಎರಡನೆ ಅಲೆಯ ಭೀಕರ ಕಾಯಿಲೆಗೆ ತುತ್ತಾಗಿ ಅಸಂಖ್ಯಾತ ನಾಗರಿಕರು ಜೀವ ಕಳೆದುಕೊಂಡಿದ್ದಾರೆ. ಅದರ ಜೊತೆಗೆ, ಈ ನಾಡಿನ ಮತ್ತು ರಾಷ್ಟ್ರದ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದಂತಹ ಬಹಳಷ್ಟು ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋವಿಡ್-೧೯ ಎರಡನೆ ಅಲೆಯ ಭೀಕರ ಕಾಯಿಲೆಗೆ ತುತ್ತಾಗಿದ್ದಾರೆ ಎನ್ನುವುದನ್ನು ನಾವು ಇವೊತ್ತಿನ ದಿವಸ ಬಹಳ ದುಃಖದಿಂದ ಸ್ಮರಿಸುವುದಕ್ಕೆ ಬಯಸುತ್ತಿದ್ದೇನೆ.

ಕೋವಿಡ್-೧೯ ಎರಡನೆ ಅಲೆಯಲ್ಲಿ ನಾಗರಿಕರು ಬಹಳ ತೊಂದರೆಯನ್ನು ಅನುಭವಿಸಿದರು. ಅದರಲ್ಲಿಯೂ ಪೀಕ್ ಟೈಮ್‌ನಲ್ಲಿ ಅಂದರೆ, ಮೇ ತಿಂಗಳಿನಲ್ಲಿ ಕೋವಿಡ್-೧೯ ಎರಡನೆ ಅಲೆಯ ಪ್ರಖರತೆ ಎಷ್ಟರಮಟ್ಟಿಗೆ ಇತ್ತೆಂದರೆ ರಾಜ್ಯದ ಮತ್ತು ರಾಷ್ಟ್ರದ ಉದ್ದಗಲಕ್ಕೂ ಬೆಡ್‌ಗಾಗಿ, ಐ.ಸಿ.ಯು. ಯೂನಿಟ್‌ಗಾಗಿ, ವೆಂಟಿಲೇಟರ್‌ಗಾಗಿ, HFNC (High-Flow Nasal Cannula), ಆಂಬ್ಯುಲೆನ್ಸ್‌ಗಳಿಗಾಗಿ ಜನ ಬಹಳಷ್ಟು ಪರದಾಡುವಂತಾಯಿತು. ಅದರಲ್ಲಿಯೂ ವಿಶೇಷವಾಗಿ antiviral drugs and antifungal injection *Amphotericin* B. ಇವು ಕಾಳಸಂತೆಯಲ್ಲಿ ಮಾರಾಟವಾಗುವಂತಹ ಸ್ಥಿತಿ ಬಂದಿತ್ತು. ಇದರಿಂದಾಗಿ, ಬಹಳಷ್ಟು ಜನ ಪರದಾಡುವಂತಾಯಿತು. ಅಷ್ಟೇ ಅಲ್ಲದೇ, ನಾನು ನೋಡಿದಂತೆ, ಕೋವಿಡ್-೧೯ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ವೆಚ್ಚ ನೋಡಿ ಗ್ರಾಮೀಣ ಭಾಗದಲ್ಲಿ ಕೋವಿಡ್-೧೯ ರೋಗದ ಲಕ್ಷಣ ಇದೆಯೆಂದು ತಿಳಿದ ತಕ್ಷಣ ಎಲ್ಲಿ ಹೋಗಬೇಕೆಂದು ಚಿಂತಿಸಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಭರಿಸುವುದಕ್ಕೆ ನಮ್ಮಿಂದ ಸಾಧ್ಯವಿಲ್ಲವೆಂದು ಮತ್ತು ಒಂದು ವೇಳೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋದರೆ ಹಣದ ಜೊತೆಗೆ ಪ್ರಾಣ ಸಹ ಹೋಗುತ್ತದೆಯೆಂದು ಭಾವಿಸಿ ಮನೆಯಲ್ಲಿ ಇದ್ದು ಸಾವನ್ನಪ್ಪಿದ ಅಸಂಖ್ಯಾತ ಜನರಿದ್ದಾರೆ. ಅವರೆಲ್ಲರೂ ಆಸ್ಪತ್ರೆಯ ಬಳಿ ಸಹ ಹೋಗಿರುವುದಿಲ್ಲ. ಅಷ್ಟೇ ಅಲ್ಲದೇ, ಕೊನೆಯಲ್ಲಿ ಶವಸಂಸ್ಕಾರಕ್ಕೂ ಜನ ಪರದಾಡಿದ್ದನ್ನು ನಾವು ಬಹಳ ನೋವಿನಿಂದ ನೆನಪಿಸಿಕೊಳ್ಳುತ್ತೇನೆ. ಕೋವಿಡ್-೧೯ ರೋಗದ ಬಗ್ಗೆ ಮೊದಲೇ ನಮಗೆ ಮಾಹಿತಿ ಇದ್ದಾಗಲೂ ಕೂಡ ಏತಕ್ಕೆ ಈ ರೀತಿ ಆಯಿತು ಎಂಬ ಬಗ್ಗೆ ನಾವೆಲ್ಲರೂ ಸಹ ಆತ್ಮ ಶೋಧನೆ ಮಾಡಿಕೊಳ್ಳಬೇಕು.

ಹಾಗಾಗಿ, ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಇವೊತ್ತಿನ ದಿವಸ ಕೋವಿಡ್-೧೯ ಮೂರನೆ ಅಲೆಯ ಹೊಸ್ತಿಲಲ್ಲಿ ನಾವು ಇದ್ದೇವೆ. ಕೋವಿಡ್-೧೯ ಎರಡನೆ ಅಲೆಯ ಸಂದರ್ಭದಲ್ಲಿ ನಾವು ಏನು ತೊಂದರೆ ಅನುಭವಿಸಿದ್ದೇವೆ ಅಂತಹ ತೊಂದರೆ ಮೂರನೆ ಅಲೆಯಲ್ಲಿ ಬರಬಾರದೆಂದು ನಾನು ಆಶಿಸುತ್ತೇನೆ. ಆದಾಗ್ಯೂ, ಈ ರೋಗ ನಾನು ಬೇಡವೆಂದರೆ ಬಿಡುವುದಿಲ್ಲ ಹಾಗೂ ಬಾ ಅಂದರೂ ಬರುವುದಿಲ್ಲ. ಹಾಗಾಗಿ, ಕೋವಿಡ್-೧೯ ಮೂರನೆ ಅಲೆಯ ಹೊಸ್ತಿಲಲ್ಲಿ ನಾವು ಇರುವಂತಹ ಸಂದರ್ಭದಲ್ಲಿ ಎರಡನೆ ಅಲೆಯ ಸಂದರ್ಭದಲ್ಲಿ ಈ ನಾಡಿನ ಮತ್ತು ರಾಷ್ಟ್ರದ ಜನ ಅದರಲ್ಲಿಯೂ ವಿಶೇಷವಾಗಿ ಆಕ್ಸಿಜನ್ ಕೊರತೆಯಿಂದಾಗಿ ಅಸಂಖ್ಯಾತ ಜನ ಏನು ಮರಣ ಹೊಂದಿದ್ದಾರೆ, ಅವರೆಲ್ಲರೂ ಸಹ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದರು. ಆ ರೀತಿಯ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಬಾರದು ಮತ್ತು ಮೂರನೆ ಅಲೆಯನ್ನು ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮರ್ಥವಾಗಿ ನಿಭಾಯಿಸಿ, ಈ ನಾಡಿನ ಹಾಗೂ ರಾಷ್ಟ್ರದ ಜನರ ಜೀವವನ್ನು ರಕ್ಷಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ಕೋವಿಡ್ ವಾರಿಯರ್ಸ್ ಅವರ ಸೇವೆ ಬಹಳ ಶ್ರೇಷ್ಠವಾದದ್ದು. ಕೋವಿಡ್-೧೯ ಸಂದರ್ಭದಲ್ಲಿ 24X7 ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳು ತಮ್ಮ ಜೀವದ ಹಂಗು ತೊರೆದು ಏಕೆಂದರೆ, ಅವರಿಗೆ ಅಪಾಯದ ಅರಿವು ಇದ್ದಾಗಿಯೂ ಕೂಡ ಕೋವಿಡ್ ರೋಗಿಗಳ ಶುಶ್ರೂಷೆ ಮಾಡುವುದರಲ್ಲಿ ಅದ್ಭುತವಾದಂತಹ ಕೆಲಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ಗಂಡ-ಹೆಂಡತಿ, ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಂದ ದೂರ ಉಳಿದು ಅದ್ಭುತವಾದಂತಹ ಸೇವೆ ಮಾಡಿದಂತಹ ವೈದ್ಯರು, ವೈದ್ಯಕೀಯ ಸಿಬ್ಬಂದಿಗಳು ಮತ್ತು ಕೋವಿಡ್ ವಾರಿಯರ್ಸ್‌ಗಳನ್ನು ಈ ಸದನ ನೆನಪಿಸಿಕೊಳ್ಳುವುದರ ಜೊತೆಗೆ, ವಿಶೇಷವಾಗಿ ನಾನು ಅವರೆಲ್ಲರಿಗೂ ಕೃತಜ್ಞತೆ ಮತ್ತು ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ.

ಕೊನೆಯದಾಗಿ, ನಮ್ಮನ್ನು ಅಗಲಿದಂತಹ ಅನೇಕ ದಿವ್ಯ ಚೇತನಗಳ ಆತ್ಮಕ್ಕೆ ಆ ಭಗವಂತ ಸದ್ಗತಿ ಕಲ್ಪಿಸಲಿ ಮತ್ತು ಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ, ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ, ಬಂಧು-ಬಾಂದವರಿಗೆ, ಹಿತೈಶಿಗಳಿಗೆ, ಅಭಿಮಾನಿಗಳಿಗೆ ಅಷ್ಟೆ ಅಲ್ಲದೇ, ರಾಜ್ಯ ಮತ್ತು ರಾಷ್ಟ್ರಕ್ಕೆ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈ ದಿನ ಸದನದಲ್ಲಿ ಸಂತಾಪ ಸೂಚಿಸುವುದಕ್ಕಿಂತಲೂ ಮೊದಲು ತಾವು ಮತ್ತು ಸಭಾನಾಯಕರು ಮೃತ ಗಣ್ಯರಿಂದ ದೇಶಕ್ಕೆ ಬಹಳಷ್ಟು ಅನ್ಯಾಯ ಮತ್ತು ಇದರಿಂದಾಗಿ, ಭಾರಿ ಆಘಾತವಾಯಿತೆಂದು ಹೇಳಿರುತ್ತೀರಿ. ಆದರೆ, ಇವೊತ್ತಿನ ದಿವಸ ಅನೇಕ ಮೃತ ಗಣ್ಯರ ಮನೆಗಳಲ್ಲಿ ತಿನ್ನುವುದಕ್ಕೆ ಅನ್ನ ಇರುವುದಿಲ್ಲ. ಮೃತ ಗಣ್ಯರ ಅಗಲಿಕೆಯಿಂದ ಆಘಾತ ದೇಶಕ್ಕಾಗಿದೆ. ಆದರೆ, ಮೃತ ಗಣ್ಯರ ಮನೆಯಲ್ಲಿ ಏನಾಗಿದೆ ಎಂಬುದರ ಬಗ್ಗೆ ಸರ್ಕಾರ ಚಿಂತನೆ ಮಾಡುವಂತಹ ಕಾಲ ಬಂದಿದೆ. ಅಂತಹವರನ್ನು ಹುಡುಕಿ ಅವರಲ್ಲಿ ಯಾರು ನಿಷ್ಠಾವಂತರಿದ್ದಾರೆ ಅವರಿಗೆ ಮಾಸಾಶನ ಕೊಡುವಂತಹ ಅಥವಾ ಏನಾದರೂ ವ್ಯವಸ್ಥೆ ಮಾಡಿದರೆ ನಾವು ಈ ಸದನದಲ್ಲಿ ಸಂತಾಪ ಸೂಚಿಸಿದ್ದಕ್ಕೂ ಸಾರ್ಥಕವಾಗುತ್ತದೆ. ಆ ಬಗ್ಗೆ ಸಂಬಂಧವಿಲ್ಲದೇ, ಇವೊತ್ತಿನ ದಿವಸ ಮೃತ ಗಣ್ಯರ ಅಗಲಿಕೆಯಿಂದ ದೇಶಕ್ಕೆ ಆ ರೀತಿ ಆಯಿತು, ಈ ರೀತಿ ಆಯಿತೆಂದು 24 ಮೃತ ಗಣ್ಯರ ಬಗ್ಗೆ ಒಂದು ಗಂಟೆ ಮಾತನಾಡಿರುತ್ತೇವೆ. ಆದರೆ, ಅವರ ಮನೆಯಲ್ಲಿ ತಿನ್ನುವುದಕ್ಕೆ ಅನ್ನ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಗಮನಿಸಿ ಅದಕ್ಕೆ ಯಾವ ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕು. ಅದರ ಜೊತೆಗೆ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ವ್ಯವಸ್ಥೆ ಮಾಡಬೇಕು. ಏಕೆಂದರೆ, ಮೃತ ಗಣ್ಯರಲ್ಲಿ ಕೆಲವು ಜನ ಕಲಾವಿದರಿದ್ದಾರೆ, ತಜ್ಞರಿದ್ದಾರೆ, ಸ್ವಾತಂತ್ರ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋರಾಟಗಾರರಿದ್ದಾರೆ. ಹಾಗಾಗಿ, ನಾನು ಹೇಳಿದ ವಿಷಯವನ್ನು ಸಂತಾಪ ಸೂಚನೆಯಲ್ಲಿ ಸೇರಿಸಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಸಭಾಪತಿಯವರು:-** ಸಂತಾಪ ಸೂಚನೆಯ ಬಗ್ಗೆ ಮಾನ್ಯ ಸಿ.ಎಂ. ಇಬ್ರಾಹಿಂರವರು ಹೇಳಿದ ವಿಷಯ ಸೂಕ್ತವಾಗಿದೆ. ಹಾಗಾಗಿ, ಸರ್ಕಾರ ಈ ಬಗ್ಗೆ ಸೂಕ್ತ ಗಮನ ಹರಿಸಬೇಕೆಂಬ ಮಾತನ್ನು ಹೇಳುತ್ತೇನೆ.

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎಂದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು 12 ಗಂಟೆ 07 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(634) 13.09.2021/12.20/ಎಸ್‌ಕೆ-ಬಿಎಸ್‌ಎಸ್

**( ಸದನವು ಪುನಃ ಮಧ್ಯಾಹ್ನ 12 ಗಂಟೆ 24 ನಿಮಿಷಕ್ಕೆ ಸಮಾವೇಶಗೊಂಡಿತು.)**

**(ಸನ್ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಂಚಾರಿ ವಿಜಯ್‌ರವರ ಹೆಸರನ್ನು ಸಂತಾಪ ಸೂಚನೆಯ ಪಟ್ಟಿಯಲ್ಲಿ ಕೈಬಿಟ್ಟಿರುವುದಕ್ಕಾಗಿ ನನಗೆ ಬಹಳ ಬೇಜಾರು ಆಗುತ್ತಿದೆ. ಶ್ರೀಯುತರು ಅತ್ಯಂತ ಕಿರಿಯ ವಯಸ್ಸಿನಲ್ಲಿ ರಾಷ್ಟ್ರ ಮಟ್ಟದಲ್ಲಿ ಮಹಾನ್ ಸಾಧನೆ ಮಾಡಿದಂತಹ ವ್ಯಕ್ತಿಯಾಗಿದ್ದು, ಇದು ಅವರಿಗೆ ಕೊಡತಕ್ಕಂತಹ ಗೌರವ ಆಗುವುದಿಲ್ಲವೆಂದು ನಾನು ಭಾವನೆ ಮಾಡುತ್ತಿದ್ದೇನೆ. ದಯವಿಟ್ಟು, ಕೂಡಲೇ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ನೂತನ ಸಚಿವರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರುಗಳನ್ನು ಸದನಕ್ಕೆ ಪರಿಚಯಿಸಿಕೊಡುತ್ತೇನೆ.

ನೂತನವಾಗಿ ಆಯ್ಕೆಯಾಗಿರುವಂತಹ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾದ ಶ್ರೀ ಬಿ.ಸಿ. ನಾಗೇಶ್, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ.ಸುನಿಲ್ ಕುಮಾರ್‌ರವರು ಸದನಕ್ಕೆ ಆಗಮಿಸಿದ್ದಾರೆ. ಇವರನ್ನೆಲ್ಲಾ ಈ ಸದನಕ್ಕೆ ತಮ್ಮ ಮೂಲಕ ಪರಿಚಯಿಸುತ್ತೇನೆ.

**ಸಭಾಪತಿಯವರು:-** ತಮ್ಮನ್ನು ಸಹ ಪರಿಚಯಿಸಿಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಹೊಸದಾಗಿ ಸಚಿವರಾಗಿರುವವರೆಲ್ಲರನ್ನೂ ಈ ಸದನಕ್ಕೆ ಪರಿಚಯ ಮಾಡಿಕೊಡಬೇಕು.

**ಸಭಾಪತಿಯವರು:-** ಹೊಸದಾಗಿ ಸಚಿವರಾಗಿರುವವರ ಹೆಸರನ್ನೆಲ್ಲಾ ಹೇಳಬೇಕಲ್ಲವೆ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲರ ಹೆಸರನ್ನು ಹೇಳಬೇಕಾಗುತ್ತದೆ. ದಯವಿಟ್ಟು, ಸದನ ಪ್ರಾರಂಭ ಮಾಡಬೇಕಾದರೆ, ...

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಹೊಸ ಮಂತ್ರಿಮಂಡಲದಲ್ಲಿ ಸಚಿವರಾದಂತಹವರನ್ನು ಸದನಕ್ಕೆ ಪರಿಚಯ ಮಾಡಿಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಹೊಸದಾಗಿ ಸಚಿವರಾಗಿ ಬಂದಂತಹವರನ್ನು ಸದನಕ್ಕೆ ಪರಿಚಯ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಮೊದಲು ಸಚಿವರಾಗಿದ್ದರು. ಆದರೆ ಖಾತೆ ಮಾತ್ರ ಬದಲಾವಣೆಯಾಗಿದೆ.

**ಸಭಾಪತಿಯವರು:-** ಆಯಿತು. ಆದರೆ ಪರಿಚಯ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ ಸಚಿವರಾದ ಶ್ರೀ ಉಮೇಶ್ ಕತ್ತಿ, ಬೃಹತ್ ಹಾಗೂ ಮಧ್ಯಮ ನೀರಾವರಿ ಇಲಾಖೆ (ಜಲ ಸಂಪನ್ಮೂಲ) ಸಚಿವರಾದ ಶ್ರೀ ಗೋವಿಂದ ಎಂ ಕಾರಜೋಳ, ಉನ್ನತ ಶಿಕ್ಷಣ ಸಚಿವ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಹೆಚ್ಚುವರಿಯಾಗಿ ಕೌಶಲ್ಯಾಭಿವೃದ್ಧಿ ಸಚಿವರಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ. ಸಿ.ಎನ್ . ಅಶ್ವಥ ನಾರಾಯಣ, ಅಬಕಾರಿ ಸಚಿವರಾದ ಶ್ರೀ ಗೋಪಾಲಯ್ಯ ಇವರೆಲ್ಲರೂ ಸದನಕ್ಕೆ ಆಗಮಿಸಿದ್ದಾರೆ. ಇವರನ್ನೆಲ್ಲಾ ಈ ಸದನಕ್ಕೆ ಪರಿಚಯಿಸುತ್ತೇನೆ.

**ಸಭಾಪತಿಯವರು:-** ಆಯಿತು. ಈಗ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ.

## 3. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ.

**ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು.**

--------

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ಅತ್ಯಂತ ಮಹತ್ವದ ಒಂದು ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ಕೋರಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಯೋಜನೆ ಅತ್ಯಂತ ಅವಶ್ಯವಾಗಿದೆ. ಉತ್ತರ ಕರ್ನಾಟಕಕ್ಕಲ್ಲದೇ ಇಡೀ ರಾಷ್ಟ್ರದ ವರಮಾನವನ್ನು ಹೆಚ್ಚು ಮಾಡುವಂತಹ ಮತ್ತು ಹದಿನೈದು ಲಕ್ಷ ಎಕರೆ ನೀರಾವರಿಯಾಗುವಂತಹ 130 ಟಿ.ಎಂ.ಸಿ. ನೀರನ್ನು ಬಳಕೆ ಮಾಡುವಂತಹ ಮೂರನೇ ಹಂತದ ಯೋಜನೆ ತ್ವರಿತಗತಿಯಲ್ಲಿ ಆಗಬೇಕೆಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡುವ ಸಲುವಾಗಿ ಈ ನಿಲುವಳಿ ಸೂಚನೆಯನ್ನು ನಿಯಮ 59 ರಡಿಯಲ್ಲಿ ಸಲ್ಲಿಸಿದ್ದೇನೆ. ದಯವಿಟ್ಟು ಆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಸದರಿ ವಿಷಯವನ್ನು ನಿಯಮ 68 ಕ್ಕೆ ಪರಿವರ್ತನೆ ಮಾಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಪ್ರಶ್ನೆ ಸಂಖ್ಯೆ 203

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ ಸಚಿವರಿಗೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಉಮೇಶ್ ವಿ. ಕತ್ತಿ (ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಒದಗಿಸಲು ನನಗೆ ಸಮಯಾವಕಾಶ ಬೇಕು.

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ಕುಳಿತುಕೊಳ್ಳಿ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಸಮಯಾವಕಾಶ ಕೇಳಬೇಕೆಂದರೆ, ಅದಕ್ಕೆ ಕಾರಣ ಬೇಡವೇ?

**ಶ್ರೀ ಉಮೇಶ್ ವಿ. ಕತ್ತಿ:-** ಮಾನ್ಯ ಸದಸ್ಯರು ವಿದ್ಯುತ್, ರಸ್ತೆ ಎಲ್ಲ ದರ ಕುರಿತಾಗಿಯೂ ಪ್ರಶ್ನೆಯನ್ನು ಕೇಳಿದ್ದಾರೆ.

**ಸಭಾಪತಿಯವರು:-** ಒಂದು ನಿಮಿಷ. ತಾವು ತಾವೇ ಮಾತಾಡಬೇಡಿ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಇಲಾಖೆಗೆ ಸಂಬಂಧಿಸಿಲ್ಲದೇ ಇರುವುದನ್ನು ಏನಾದರೂ ಕೇಳಿದ್ದೇನೆಯೇ?

**ಸಭಾಪತಿಯವರು:-** ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ ನಾನು ಹೇಳುತ್ತೇನೆ. ಮಾನ್ಯ ಸಭಾ ನಾಯಕರೇ, ಬಹಳ ಜನ ಸಚಿವರನ್ನು ತಾವು ಸದನಕ್ಕೆ ಕರೆಸಿದ್ದೀರಿ. ದಯವಿಟ್ಟು, ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ, ಯಾವುದೇ ಪರಿಸ್ಥಿತಿಯಲ್ಲಿ ಉತ್ತರವನ್ನು ಒದಗಿಸಿಕೊಡುವಂತಹ ಕೆಲಸವನ್ನು ತಾವು ಮಾಡಬೇಕು. ತಾವು ಹದಿನೈದು ದಿವಸ ಸಮಯಾವಕಾಶ ತೆಗೆದುಕೊಂಡಿದ್ದೀರಿ. ಆದರೆ ಅಧಿವೇಶನ ಹದಿನೈದು ದಿವಸಗಳಿರುತ್ತದೆಯೇ? ಮಾನ್ಯ ಸಭಾನಾಯಕರಿಗೆ ಮತ್ತೊಮ್ಮೆ ಹೇಳುತ್ತೇನೆ. ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಉತ್ತರವಿಲ್ಲದೇ ಅವರು ಅವಕಾಶ ವಂಚಿತರಾಗಬಾರದು. ಅದಕ್ಕೆ ತಾವು ಏನು ಹೇಳುತ್ತೀರಾ ಹೇಳಿ. ಅದನ್ನು ತಕ್ಷಣ ಮಾಡಿ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಯಾವಾಗ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ರಾಷ್ಟ್ರೀಯ ಹೆದ್ದಾರಿ ಮತ್ತು ರಸ್ತೆಯ ಮಾರ್ಜಿನ್ ಮತ್ತಿತರ ಹಲವಾರು ವಿಚಾರಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ.

**ಸಭಾಪತಿಯವರು:-** ಇದಕ್ಕೆ ತಾವೇ ಉತ್ತರ ಹೇಳುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:-** ಆಯಿತು ಬಿಡಿ, ಮುಗಿಯಿತಲ್ಲ. ಅದಕ್ಕೆ ಸಚಿವರು ಸಮಯಾವಕಾಶವನ್ನು ಕೇಳಿದ್ದಾರೆ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಮಾನ್ಯ ಸಚಿವರು ಈಗ ಸದನದಲ್ಲಿದ್ದಾರೆ. ಅವರು ಯಾವಾಗ ಉತ್ತರ ಕೊಡುತ್ತಾರೆಂಬುದನ್ನು ಸ್ಪಷ್ಟವಾಗಿ ಹೇಳಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದಕ್ಕೆ ಮುಂದಿನ ವಾರ ಉತ್ತರವನ್ನು ಕೊಡಿ.

**ಶ್ರೀ ಉಮೇಶ್ ವಿ. ಕತ್ತಿ:-** ಆಗಲಿ, ಇದಕ್ಕೆ ಸಮಯಾವಕಾಶವನ್ನು ಕೇಳಿದ್ದೇನೆ.

**ಸಭಾಪತಿಯವರು:-** ಉತ್ತರ ನೀಡಲು ಹದಿನೈದು ದಿನಗಳ ಸಮಯಾವಕಾಶವನ್ನು ನೀಡಲು ನಾನು ಒಪ್ಪುವುದಿಲ್ಲ. ಅದನ್ನು ಮುಂದಿನ ವಾರವೇ ಕೊಡಬೇಕು.

**ಶ್ರೀ ಉಮೇಶ್ ವಿ. ಕತ್ತಿ:-** ಆಗಲಿ, ಮುಂದಿನ ವಾರವೇ ಉತ್ತರ ಕೊಡುತ್ತೇನೆ.

**ಸಭಾಪತಿಯವರು:-** ಆಯಿತು.

<u>ಪ್ರಶ್ನೆ ಸಂಖ್ಯೆ 28</u>

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಮುಂದಿನ ವಾರ ಕೊಡುತ್ತಾರೆ. ಏಕೆಂದರೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ|| ಕೆ. ಸುಧಾಕರ್‌ರವರಿಂದ ನನಗೆ ಪತ್ರ ಬಂದಿದ್ದು, ಆ ಪತ್ರದ ಒಕ್ಕಣೆ ಈ ರೀತಿ ಇದೆ. ನಾನು ದಿನಾಂಕ 13.09.2021 ರಂದು ಮಾನ್ಯ ಮುಖ್ಯಮಂತ್ರಿಯವರ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸುವುದರಿಂದ ಹಾಗೂ ಕೇಂದ್ರ ಸ್ಥಾನದಲ್ಲಿ ಇಲ್ಲದೇ ಇರುವುದರಿಂದ ದಿನಾಂಕ 13.09.2021ರಂದು ನಡೆಯುವ ವಿಧಾನ ಪರಿಷತ್ತಿನ ಕಾರ್ಯಕಲಾಪಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸದರಿ ದಿನದಂದು ಉತ್ತರಿಸುವ ಪ್ರಶ್ನೆಗಳಿಗೆ ಮತ್ತೊಂದು ದಿನ ಉತ್ತರಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿದ್ದಾರೆ. ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರಿಗೆ ಕೇಳುವಂತಹ ಪ್ರಶ್ನೆಗಳಿಗೆ, ಮುಂದಿನ ವಾರ ಉತ್ತರವನ್ನು ಒದಗಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 214**

(ಮಾನ್ಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ಗೈರು ಹಾಜರಿದ್ದರು.)

**ಪ್ರಶ್ನೆ ಸಂಖ್ಯೆ 191**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕನ್ನಡ ಭಾಷೆಯ ಉನ್ನತೀಕರಣಕ್ಕಾಗಿ ಕೈಗೊಂಡಿರುವ ಕ್ರಮಗಳೇನು? ಎಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವನ್ನು ಮುಖ್ಯ ವಿಷಯವಾಗಿ ಅಧ್ಯಯನ ಮಾಡುತ್ತಿದ್ದಾರೆ; ಕನ್ನಡ ಶಾಸ್ತ್ರೀಯ ಭಾಷೆಯಾಗಿ ಮಾನ್ಯತೆ ಪಡೆದ ನಂತರ ಕನ್ನಡ ಪಸರಿಸುವಿಕೆಗೆ ಯಾವ ಕ್ರಮ ವಹಿಸಲಾಗಿದೆ; ರಾಜ್ಯದಲ್ಲಿರುವ ಕನ್ನಡದ ಇತಿಹಾಸ ಕಲಾ ಸಂಸ್ಕೃತಿ ಸಾರುವ ಶಾಸನಗಳನ್ನು ಗುರುತಿಸಲಾಗಿದೆಯೇ; ಅವುಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮ; ಎಲ್ಲಿವೆ; ಯಾವುವು? ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ನಾನು ಈ ಸದನಕ್ಕೆ ಶಾಸಕಿಯಾದ ಮೇಲೆ ಈ ಸಂಬಂಧಪಟ್ಟಂತಹ ಪ್ರಶ್ನೆಗಳು ಬಂದಾಗ ಏನೇನು ಉತ್ತರ ಬರುತ್ತಿದೆಯೋ, ಅದೇ ಉತ್ತರವನ್ನು ಕೊಟ್ಟಿದ್ದಾರೆ.

(ಮುಂದು)

(635) 13.09.2021, 12.30, ಟಿಸಿಹೆಚ್-ಬಿಎನ್‌ಥ್

**(ಮಾನ್ಯ ಸಭಾಪತಿಯವರ ಉಪಸ್ಥಿತಿ)**

**ಡಾ.ತೇಜಸ್ವಿನಿ ಗೌಡ (ಮುಂದು):-**

ಮಾನ್ಯ ಸಚಿವರಾದ ಶ್ರೀ ವಿ.ಸುನಿಲ್ ಕುಮಾರ್‌ರವರು ಕೊಟ್ಟಿರುವ ಉತ್ತರದಲ್ಲಿ ಅಂಕಿ-ಅಂಶಗಳು ಸಹಜವಾಗಿ ಸರಿ ಇದೆ. ನಮ್ಮ ದೃಷ್ಟಿಕೋನ ಹಾಗೂ ವ್ಯವಹಾರ ಮಾಡುವ ವಿಧಾನ ಬದಲಾಗದಿದ್ದರೆ ಹೇಗೆ? ಕನ್ನಡದ ಸಂಸ್ಕೃತಿ ಹಾಗೂ ಕನ್ನಡದ ಇತಿಹಾಸವನ್ನು ನಾವು ಜನಗಳ ಮಧ್ಯೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಉದಾಹರಣೆಗೆ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಶಾಸ್ತ್ರೀಯ ಭಾಷೆಯಾದ ನಂತರ ಇಡೀ ಸದನ ಅದಕ್ಕೆ ಸಪೋರ್ಟ್ ಮಾಡಿದೆ. ಇವತ್ತು ನಮಗೆ ತುಂಬಾ ನೋವಾಗುತ್ತಿರುವ ಸಂಗತಿ ಎಂದರೆ, ಪ್ರೊಫೆಸರ್ ಜಿ.ವೆಂಕಟ ಸುಬ್ಬಯ್ಯನವರು ಕನ್ನಡಕ್ಕೆ ಸಾಕಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ಶ್ರೀ ಜರಗನಹಳ್ಳಿ ಶಿವಶಂಕರ್, ಶ್ರೀ ಷಣ್ಮುಖಪ್ಪ ಕಾಶಪ್ಪ ಯರಕರ ರವರು ನಿಧನರಾಗಿದ್ದಾರೆ. ಇವತ್ತು ಇಡೀ ಸದನ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆ. ಶ್ರೀಮತಿ ಕನಕ ಮೂರ್ತಿ, ಚಲನಚಿತ್ರ ನಟರಾದ ಶ್ರೀ ಅರವಿಂದ್‌ರವರು, ನೃತ್ಯ ಕಲಾವಿದರು ಹಾಗೂ ಚಾಲುಕ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲೆಯಲ್ಲಿ ಪ್ರಾವಿಣ್ಯತೆಯನ್ನು ಹೊಂದಿರತಕ್ಕಂಥವರು, ಡಾ: ಲಕ್ಷ್ಮೀ ತಾತಾಚಾರ್ ಮತ್ತು ಶ್ರೀಮತಿ ಭಾನುಮತಿರವರುಗಳು ನಿಧನರಾಗಿದ್ದಾರೆ.

**ಸಭಾಪತಿಯವರು:-** ಡಾ.ತೇಜಸ್ವಿನಿ ಗೌಡರವರೇ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೇಳಿ.

**ಡಾ.ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಆ ವಿಶ್ವವಿದ್ಯಾಲಯಗಳಲ್ಲಿ ಕಲಿಯತಕ್ಕಂಥ ವಿದ್ಯಾರ್ಥಿಗಳಿಗೆ ಸರ್ಕಾರ ವರ್ಷಕ್ಕೆ ಸುಮಾರು ರೂ.25,000/-ಗಳನ್ನು ಕೊಡುತ್ತಿದೆ. ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆ ಕಲಿಯುವುದು ಅಥವಾ ಬೇರೆಯವರು ಬಂದು ನಮ್ಮ ಸಂಸ್ಕೃತಿಯನ್ನು ಕಲಿಯುವಂಥವರಿಗೆ ತಿಂಗಳಿಗೆ ರೂ.2,000/- ಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಈ ಹಣಕ್ಕೆ ಇವತ್ತಿನ ದಿವಸ ಬಸ್ ಚಾರ್ಜ್, ಕಾಫಿ ಮತ್ತು ಟೀ ಬರುತ್ತದೆಯೇ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಪುರಾತತ್ವ ಇಲಾಖೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಇಲ್ಲ. ಪ್ರವಾಸೋದ್ಯಮ ಇಲಾಖೆಯ ಜೊತೆ ಇದೆ. ಪ್ರವಾಸೋದ್ಯಮಕ್ಕೆ ಹೋಗತಕ್ಕಂಥವರಿಗೆ ಆ ಟೆಂಪಲ್ ಯಾವುದು, ಕಲ್ಯಾಣಿಯಲ್ಲಿ ಏನಿದೆ ಎಂದು ಗೊತ್ತಾಗುತ್ತಿಲ್ಲ. ಅದರ ಇತಿಹಾಸ ಮತ್ತು ಶಾಸನವನ್ನು ಹಾಳು ಮಾಡುತ್ತಿದ್ದಾರೆ. ಇವತ್ತಿನ ದಿವಸ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಪುರಾತತ್ವ ಇಲಾಖೆಯನ್ನು ಜೋಡಿಸದೇ ಇದ್ದರೆ ತೊಂದರೆಯಾಗುತ್ತದೆ. ಈಗ ಪುರಾತತ್ವ ಇಲಾಖೆ ಪ್ರವಾಸೋದ್ಯಮ ಇಲಾಖೆಯಡಿ ಇರುವುದು ಖಂಡಿತವಾಗಿಯು ಇದಕ್ಕೂ, ಅದಕ್ಕೂ ಸಂಬಂಧ ಇರುವುದಿಲ್ಲ. ಶಾಸ್ತ್ರೀಯ ಭಾಷೆಯಾದ ನಂತರ ನಾಡಿನ ಇತಿಹಾಸ ಸಾರುವುದಕ್ಕೆ ಅರಮನೆಗಳು ನಾಶವಾಗಿವೆ. ಇವತ್ತಿನ ದಿವಸ ನಮ್ಮ ಭವ್ಯವಾದ ಮಂದಿರಗಳು ನಾಶವಾಗಿವೆ. ನಮ್ಮ ದೇಶಕ್ಕೆ ವಿದೇಶಿ ಪ್ರವಾಸಿಗರು ಬಂದು ಅರಮನೆಗಳ ಫೋಟೋ ಹಿಡಿದುಕೊಂಡು ವಿಡಿಯೋವನ್ನು ಅಪ್‌ಲೋಡ್ ಮಾಡುತ್ತಿದ್ದಾರೆ. ಇದು ನಮಗೆ ತುಂಬಾ ಅಪಮಾನ ಮತ್ತು ದುಃಖವಾಗುತ್ತಿದೆ. ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಪುರಾತನ ಅರಮನೆ ಮತ್ತು ಕೋಟೆಗಳು ಬಹಳಷ್ಟಿದ್ದು ಅವು ಹಾಳಾಗುತ್ತಿದೆ. ಹಿಂದಿನ ರಾಜರುಗಳ ಕೊಡುಗೆ ಅಪಾರವಾಗಿದೆ. ಅದಕ್ಕಾಗಿ ದಯಮಾಡಿ ಸರ್ಕಾರಕ್ಕೆ ನಾನು ಮನವಿಯನ್ನು ಮಾಡುತ್ತೇನೆ. ಮಾನ್ಯ ವಿ.ಸುನಿಲ್ ಕುಮಾರ್‌ರವರೇ ನಾನು ಈ ವಿಚಾರದಲ್ಲಿ ತುಂಬಾ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆ. ಹೊಸದಾಗಿ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಬಂದಿದ್ದಾರೆ, ಅವರು ಇಂಧನ ಖಾತೆಗಿಂತ ಕನ್ನಡ ಮತ್ತು ಸಂಸ್ಕೃತಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದಾರೆ. ಎಲ್ಲರೂ ಇಂಧನ ಖಾತೆ ಬೇಕೆಂದು ಕೇಳುತ್ತಾರೆ. ಆದರೆ ಅವರಿಗೆ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಕೂಡ ಸಿಕ್ಕಿದೆ. ಆದ್ದರಿಂದ ಸ್ವಲ್ಪ ಅನುದಾನ ಹೆಚ್ಚಿಗೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಡಾ.ತೇಜಸ್ವಿನಿ ಗೌಡರವರೇ, ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಕಳೆದ ಕೆಲವು ವರ್ಷಗಳಿಂದ ರಾಜ್ಯದಲ್ಲಿ ಒಟ್ಟು ಕನ್ನಡದ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಉಳಿಸಲಿಕ್ಕೆ ಮತ್ತು ಬೆಳೆಸಲಿಕ್ಕೆ ಬೇಕಾದಂತಹ ಎಲ್ಲಾ ಕಾರ್ಯಕ್ರಮಗಳನ್ನು ಇಲಾಖೆಯ ಮುಖಾಂತರ ನಿರಂತರವಾಗಿ ಮಾಡುತ್ತಿದೆ. ಒಟ್ಟು ರಾಜ್ಯದ 22 ವಿಶ್ವವಿದ್ಯಾಲಯಗಳಲ್ಲಿ 6279 ವಿದ್ಯಾರ್ಥಿಗಳು ಕನ್ನಡವನ್ನು ಮುಖ್ಯ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು ಅದನ್ನು ಅಧ್ಯಯನ ಮಾಡುತ್ತಿದ್ದಾರೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ಒಟ್ಟು 8 ರಾಜ್ಯಗಳ ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವತ್ತಿನ ದಿವಸ ಸರ್ಕಾರ ಅಂಥವರಿಗೆ ವಾರ್ಷಿಕವಾಗಿ ರೂ.25,000/-ಗಳ ಪ್ರೋತ್ಸಾಹ ಧನವನ್ನಾಗಿ ಕನ್ನಡ ಅಧ್ಯಯನಕ್ಕೋಸ್ಕರ ಕೊಡುತ್ತಿದೆ. ಮಾನ್ಯ ಸದಸ್ಯರು ಉಲ್ಲೇಖ ಮಾಡಿದಂತೆ ಇನ್ನಷ್ಟು ಕನ್ನಡದ ಕಂಪು ನಮ್ಮ ರಾಜ್ಯದಲ್ಲಿ ನಿರಂತರವಾಗಿ ನಡೆಯಬೇಕು. ಭಾಷೆಯ ಬಗ್ಗೆ ಅಭಿಮಾನ, ಸಾಹಿತ್ಯ ಕುರಿತಂತೆ ಇನ್ನಷ್ಟು ಪ್ರಗತಿಗಳನ್ನು ಸಾಧಿಸಬೇಕೆಂಬ ಭಾವನೆಗಳೇನಿದೆ, ಅದಕ್ಕೆ ಖಂಡಿತವಾಗಿಯು ನನ್ನ ಸಹಮತಿ ಇದೆ. ಆದರೆ ವಿಶೇಷವಾಗಿ ನಾವು ಅರ್ಥ ಮಾಡಿಕೊಳ್ಳುವಂಥದ್ದು ಏನೆಂದರೆ, ಮಾನ್ಯ ಸಭಾಪತಿಯವರೇ, ಈ ಸದನದ ಮುಖಾಂತರ ತಮ್ಮ ಗಮನಕ್ಕೆ ತರುವುದೇನೆಂದರೆ, ಕೋವಿಡ್-19 ಸಂದರ್ಭದಲ್ಲಿ ಎಲ್ಲಾ ಚಟುವಟಿಕೆಗಳು ಸ್ತಬ್ಧವಾಗಿತ್ತು. ಇದು ನಮಗೆಲ್ಲಾ ಗೊತ್ತಿದೆ. ಕಳೆದ ಎರಡು ವರ್ಷಗಳಿಂದ ಕೋವಿಡ್-19 ಕಾರಣಕ್ಕೆ ಸಾರ್ವಜನಿಕವಾದಂಥ ಎಲ್ಲಾ ಚಟುವಟಿಕೆಗಳು ಕಡಿಮೆಯಾಗುತ್ತಿದೆ. ಆದರೆ ಕನ್ನಡ ಪ್ರಾಧಿಕಾರದ ಮುಖಾಂತರ, ನಾವು ಕಳೆದ ಒಂದು ವರ್ಷದ ಅವಧಿಯಲ್ಲಿ 188 ಕಾರ್ಯಕ್ರಮಗಳನ್ನು ಕನ್ನಡದ ಕುರಿತಂತೆ ಇವತ್ತಿನ ದಿವಸ ಆನ್‌ಲೈನ್ ಮುಖಾಂತರ ಮಾಡಲಾಗಿದೆ. ಅದನ್ನು ಇವತ್ತಿನ ದಿವಸ ಯೂಟ್ಯೂಬ್‌ನಲ್ಲಿ ಅಪ್‌ಲೋಡ್‌ನ್ನು ಕೂಡ ಮಾಡಿದೆ. ಇವತ್ತಿನ ದಿವಸ ಕೋರೊನಾದ ಕಾರಣಕ್ಕೆ ಕನ್ನಡ ಕಾರ್ಯಕ್ರಮ ನಿಂತಿಲ್ಲ. ನಮ್ಮ ಇಲಾಖೆಯ ಬೇರೆ ಬೇರೆ ಹಂತಗಳಲ್ಲಿ ಈ ಇಲಾಖೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಪ್ರಾಚ್ಯವಸ್ತು ಇಲಾಖೆಯನ್ನು ಪ್ರವಾಸೋದ್ಯಮ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೇರಿಸಬೇಕು ಎನ್ನತಕ್ಕಂಥ ಮಾತನ್ನು ಏನು ಹೇಳಿದ್ದಾರೆ, ಅದು ಈ ಹಿಂದೆಯೂ ಕೂಡ ಚರ್ಚೆಯಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆಯನ್ನು ಮಾಡಿಕೊಂಡು ಯಾವ ಇಲಾಖೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸೇರಿಸಿದರೆ ಇನ್ನಷ್ಟು ಕನ್ನಡದ ವಿಸ್ತಾರವಾಗುತ್ತದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಕ್ರಮವನ್ನು ಕೈಗೊಳ್ಳುವುದಕ್ಕೆ ನಾನು ಮುಂದಾಗುತ್ತೇನೆ.

**ಡಾ.ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಭಾರತದಲ್ಲಿನ ಭಾಷಾ ನೀತಿಯ ಬಗ್ಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಕೊಂಡಿಯಾಗಿ ಹೇಗೆ ಇರಬೇಕೆಂದು ಸಂವಿಧಾನದಲ್ಲಿ Article 343 ಯಿಂದ Article 351 ರವರೆಗೆ ನಿರ್ದಿಷ್ಟವಾದ ಸೂಚನೆಗಳನ್ನು, ಗೈಡ್‌ಲೈನ್ಸ್‌ನ್ನು ಕೊಟ್ಟಿದೆ. ಅದರಲ್ಲಿ ಆರ್ಟಿಕಲ್ 344ರಲ್ಲಿ Commission and Committee of Parliament on official language. 8ನೇ ಪರಿಚ್ಛೇದದ ಅಡಿಯಲ್ಲಿ ಭಾಷೆಗಳನ್ನು ಗುರ್ತಿಸುವ ಅಧಿಕಾರವನ್ನು ಕೊಟ್ಟಿದೆ. ಅದರಲ್ಲಿ sub clause (3) ರಲ್ಲಿ ಏನು ಹೇಳುತ್ತಾರೆಂದರೆ, ಇಂತಹ ಒಂದು recommendation ಮಾಡುವಾಗ,: "*the Commission shall have due regard to the industrial, cultural and scientific advancement of India, and the jut claims and the interests of persons belonging to the non Hindi speaking areas in regard to the public services.*" ಎಂದು ಹೇಳಿದೆ.

**ಸಭಾಪತಿಯವರು:-** ಡಾ.ತೇಜಸ್ವಿನಿ ಗೌಡರವರೇ, ಈಗ ತಾವು ಏನು ಮಾಡಬೇಕೆಂದು ಹೇಳಿ.

**ಡಾ.ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಕೋಟೆ-ಕೊತ್ತಲೆಗಳಿಗೆ ರಕ್ಷಣೆ ಇಲ್ಲ. ಕವಲೆದುರ್ಗದಲ್ಲಿ ಸುಮಾರು 25 ವರ್ಷಗಳ ಕಾಲ ಕೆಳದಿ ರಾಣಿ ಚೆನ್ನಮ್ಮನವರು ಆಳಿದ್ದಾರೆ, ಆದರೆ ಇವತ್ತಿನ ದಿವಸ ಆ ಅರಮನೆ ನೋಡುವುದಕ್ಕೆ ಸಿಗುತ್ತಿಲ್ಲ. ಹಾಗಾದರೆ ನಾವು ಮುಂದಿನ ಪೀಳಿಗೆಗೆ ಹೇಗೆ ರಕ್ಷಣೆ ಮಾಡುವುದು. ವಿಜಯನಗರದ dynasty ಆ ಅರಮನೆಗಳ ನಾಶವಾಗಿದೆ. Restoration ಇಲ್ಲ. ASI (Archaeological Survey of India) ಎಂದು ಹೇಳುತ್ತಾರೆ. ನಾನು ಹೇಳುವುದೇನೆಂದರೆ, ಪುರಾತತ್ವ ಇಲಾಖೆಯ ASI ನ ಅಡಿಯಲ್ಲಿ ಕೋಟೆ-ಕೊತ್ತಲೆಗಳಲ್ಲಿ ಮರಗಿಡಗಳು ಬೆಳೆದು ಹಾಳಾಗುತ್ತಿವೆ. ಇವರು ಅದನ್ನು ಕಟ್ಟಲಿಕ್ಕೆ ಆಗುತ್ತದೆಯೇ? ಆ ಮಕ್ಕಳಿಗೆ Skill India ದಲ್ಲಿ ಟ್ರೈನಿಂಗ್ ಕೊಡುತ್ತಾರೆ. ಆ ಶಿಲ್ಪಕಲೆ ಕಟ್ಟಿದಂಥ ಹಿರಿಯರೆಲ್ಲಾ ನಿಧನರಾಗುತ್ತಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿ ಒಳ್ಳೆಯ ಅನುಭವಿ ಅಧಿಕಾರಿಗಳು ಇದ್ದಾರೆ. ಅದಕ್ಕಾಗಿ ನಾನು ಮಾನ್ಯ ಸಚಿವರಾದ ವಿ.ಸುನಿಲ್ ಕುಮಾರ್‌ರವರ ಬಳಿ ಭರವಸೆಯನ್ನು ಕೇಳುತ್ತಿದ್ದೇನೆ. ಹೊಯ್ಸಳ ಅರಮನೆ, ರಾಣಿ ಅಬ್ಬಕ್ಕ ಅರಮನೆ, ಕೆಳದಿ ಅರಮನೆ ಇಂತಹ ಘತ ವೈಭವ ಸಾರುವಂಥ ಬಾದಾಮಿಯಲ್ಲಿ ಅರಮನೆಯೇ ಇಲ್ಲ. ಸರ್ಕಾರ ಒಂದು ಹೊಸ ಅರಮನೆಯನ್ನು ಕಟ್ಟಲಿ. ಉತ್ಸವಗಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿ ದುಡ್ಡನ್ನು ಹಾಳು ಮಾಡುವುದಲ್ಲ. ಹೆಚ್ಚಿನ ಅನುದಾನ ಕೂಡ ಅವರ ಇಲಾಖೆಗೆ ಬೇಕಾಗುತ್ತದೆ. ಹಾಗಾಗಿ, ದಯಮಾಡಿ ಸರ್ಕಾರ ಒಂದು ಒಳ್ಳೆಯ ಯೋಚನೆಯನ್ನು ಮಾಡಬೇಕು. ಇವರ ಅವಧಿಯಲ್ಲಿ ಅರಮನೆಗಳನ್ನು ತ್ವರಿತವಾಗಿ ಕಟ್ಟಬೇಕು. ಯಾವ್ಯಾವ ಅರಮನೆಗಳು ಅಳಿವಿನ ಅಂಚಿನಲ್ಲಿವೆಯೊ ಅವುಗಳನ್ನು ಹಳೆಯದನ್ನು ಹಾಗೆಯೇ ಉಳಿಸಿಕೊಂಡು ರಾಣಿ ಚೆನ್ನಮ್ಮನವರ ಅರಮನೆಯೇ ಇಲ್ಲ. ಮಾನ್ಯ ಸಭಾಪತಿಯವರೇ, ಅವರು ಆ ಅರಮನೆಯನ್ನು ಕಟ್ಟಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಕರ್ನಾಟಕವನ್ನು ಕಟ್ಟಿ ಬೆಳೆಸಿದಂತಹ ಬೇರೆ ಬೇರೆ ಪರಂಪರೆಯ ಕೋಟೆ-ಕೊತ್ತಲೆಗಳನ್ನು ರಕ್ಷಣೆ ಮಾಡಬೇಕು. ಅರಮನೆಗಳನ್ನು ರಕ್ಷಣೆ ಮಾಡಬೇಕು ಎನ್ನತಕ್ಕಂತ ಭಾವನೆಗಳನ್ನು ಮಾನ್ಯ ಸದಸ್ಯರೇನು ವ್ಯಕ್ತ ಮಾಡಿದ್ದಾರೆ, ಅದನ್ನು ನಾನು ಖಂಡಿತವಾಗಿಯು ಗಮನಕ್ಕೆ ತಂದು, ಅದನ್ನು ಪುನರುಜ್ಜೀವನಗೊಳಿಸುವಂಥ ಮತ್ತು ಇವತ್ತಿನ ಪೀಳಿಗೆಗೆ ಅದನ್ನು ಹಸ್ತಾಂತರಿಸುವಂಥ ಒಳ್ಳೆಯ ಕಾರ್ಯವನ್ನು ನಮ್ಮ ಸರ್ಕಾರ ಖಂಡಿತವಾಗಿಯು ಮಾಡುತ್ತದೆ. ನಾವು ಅವರ ಸಲಹೆಗಳನ್ನು ತೆಗೆದುಕೊಂಡು ಮುಂದಿನ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.113**

**(ಉತ್ತರ ಲಗತ್ತಿಸಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರು ಕೊಟ್ಟಿರತಕ್ಕಂತ ಉತ್ತರಕ್ಕೂ ನಾನು ಕೇಳಿರತಕ್ಕಂಥ ಪ್ರಶ್ನೆಗೂ ಏನೂ ಸಂಬಂಧವಿಲ್ಲ. ಇವರು 2021-22ರ ಆಯವ್ಯಯ ಪುಸ್ತಕದ point No.167ರಲ್ಲಿ "ಗ್ರಾಮೀಣ ಪ್ರದೇಶದ ಯುವತಿಯರನ್ನು ಸಬಲರನ್ನಾಗಿಸುವ ನಿಟ್ಟಿನಲ್ಲಿ ಪ್ರಾಯೋಗಿಕವಾಗಿ 1000 ಯುವತಿಯವರಿಗೆ ಮೃದು ಕೌಶಲ್ಯ (Soft skill), ಸಂವಹನ ಕೌಶಲ್ಯ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿಯನ್ನು ಸರ್ಕಾರಿ ಸಂಸ್ಥೆಗಳಲ್ಲಿ ನೀಡಲಾಗುವುದು" ಎಂದು ಹೇಳಲಾಗಿದೆ. ಅವರು ತರಬೇತಿಯನ್ನು ಕೊಟ್ಟಿದ್ದಾರೊ, ಇಲ್ಲವೊ ಗೊತ್ತಿಲ್ಲ. 2020-21ರ ಆಯವ್ಯಯದಲ್ಲೂ ಕೂಡ ಅದೇ ರೀತಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. "ಖಚಿತವಾದ ಉದ್ಯೋಗಾವಕಾಶಕ್ಕಾಗಿ ಕೌಶಲ್ಯ ತರಬೇತಿಗಳನ್ನು ನೀಡಲು ಮತ್ತು ಕೌಶಲ್ಯಗಳನ್ನು ಉನ್ನತೀಕರಿಸಲು ಮುಂದಿನ ಎರಡು ವರ್ಷಗಳಲ್ಲಿ ಸಾವಿರ ಪದವೀಧರರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಎರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ Talent Acceleration Programmeನ್ನು ಅನುಷ್ಠಾನಗೊಳಿಸಲಾಗುವುದು" ಎಂದು ಹೇಳಿದ್ದಾರೆ. ಆದರೆ ಇದ್ಯಾವುದೂ ಅನುಷ್ಠಾನಗೊಂಡಿಲ್ಲ. ಇವರು ಕೊಡತಕ್ಕಂಥ ಪ್ರಮಾಣ ಪತ್ರಗಳಿಗೆ ಎಲ್ಲಾದರೂ ಮಾನ್ಯತೆ ಇದೆಯೇ ಅಥವಾ ಇವರಿಂದ ಬಂದಂಥ ಹುಡುಗರಿಗೆ ಎಲ್ಲಾದರೂ acceptance ಇದೆಯೇ? ಇವರು ಕೊಡತಕ್ಕಂಥ ಟ್ರೈನಿಂಗ್ ಬೇರೆ; ಜನರ ಜೀವನಕ್ಕೆ ಬೇಕಾಗಿರುವಂಥ ಪದವಿ ಅಥವಾ ಆ Certificate ಬೇರೆ. ಇಲ್ಲವೇ ಇವರು ಕೊಡತಕ್ಕಂಥ ಸರ್ಟಿಫಿಕೇಟ್‌ನಲ್ಲಿ ಸರ್ಕಾರಿ ಉದ್ಯೋಗದಲ್ಲಿ ಇವರಿಗೆ ಪ್ರಾಧಾನ್ಯತೆ ಕೊಡಬಹುದು ಎನ್ನುವುದನ್ನು ಏನಾದರು ಮಾಡುತ್ತಾರೆಯೆ? ಸರ್ಕಾರ ಇಷ್ಟು ದುಡ್ಡು ಖರ್ಚು ಮಾಡುತ್ತಿದೆ. ಯಾವುದೋ ಒಂದು ಸರ್ಟಿಫಿಕೇಟ್ ಕೊಟ್ಟರೆ ಸಾಕೆ. ಗ್ರಾಮೀಣ ಪ್ರದೇಶದ ಯುವತಿಯರನ್ನು ಸಬಲರನ್ನಾಗಿಸಲು ತರಬೇತಿಯನ್ನು ಸರ್ಕಾರಿ ಸಂಸ್ಥೆಗಳಲ್ಲಿ ನೀಡಲಾಗುವುದು ಎಂದು ಹೇಳಿದ್ದಾರೆ. ಯಾವ ಭಾಗದಲ್ಲಿ ಏನು ಕೊಡಬೇಕೆಂದು ಸೂಚನೆ ಕೊಡಿ. ಅವರಿಗೆ ಸರಿಯಾದ ತರಬೇತಿ ಕೊಟ್ಟು, ಅವರಿಗೆಲ್ಲಾ ಉದ್ಯೋಗಾವಕಾಶಗಳು ಸಿಗುವಂಥ ವ್ಯವಸ್ಥೆ ಆಗಬೇಕು.

**ಡಾ.ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರಸ್ತುತವಾದಂಥ ಒಂದು ವಿಚಾರವನ್ನು ಕೇಳಿದ್ದಾರೆ. ಮುಖ್ಯವಾಗಿ ಇದುವರೆಗೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಒಂದು ಕೌಶಲ್ಯಾಭಿವೃದ್ಧಿಯ ಮೂಲಕ ಕೌಶಲ್ಯತೆಯನ್ನು ಕೊಡಲಾಗುತ್ತಿದೆ. Demand and supply. ಈಗ ಮಾರ್ಕೆಟ್‌ನಲ್ಲಿ ಏನು demand ಇದೆ, ಆ ಪ್ರಕಾರದಲ್ಲಿ ನಾವು ತರಬೇತಿಯನ್ನು ಕೊಡುವಂಥದ್ದು ಆಗಬೇಕಿದೆ. ಇದು ಬಹಳ ಸ್ಪಷ್ಟ. ಹಾಗಾಗಿ, ಎಲ್ಲೋ ಒಂದು ಕಡೆ ಟ್ರೈನಿಂಗ್ ಕೊಡುವುದಕ್ಕೂ ಮತ್ತು placement rate ಗೂ ಬಹಳ ಕಡಿಮೆ ಇದೆ.

**(ಮುಂದು...)**

(636)13.9.2021/12.40/ಎಂ.ಎಂ-ಜಿ.ಆರ್

(ಸಭಾಪತಿಯವರ ಉಪಸ್ಥಿತಿ)

**ಡಾ|| ಸಿ.ಎನ್. ಅಶ್ವಥ್ ನಾರಾಯಣ (ಮುಂದು):-**

ಇದನ್ನು ಸರಿಪಡಿಸಿಕೊಳ್ಳುವುದಕ್ಕೋಸ್ಕರವಾಗಿ ‘ಸ್ಕಿಲ್ ಕನೆಕ್ಟ್’ ಎಂಬ ಪೋರ್ಟಲ್ ಅನ್ನು ಪ್ರಾರಂಭ ಮಾಡಿದ್ದೇವೆ. ‘ಸ್ಕಿಲ್ ಕನೆಕ್ಟ್’ ಮೂಲಕ ಯಾವುದೆಲ್ಲಾ ಉದ್ಯಮಗಳು ಪ್ರಾರಂಭವಾಗುತ್ತಿವೆ, ಅವರ ಅವಶ್ಯಕತೆಗಳನ್ನು ನಮ್ಮ ಪೋರ್ಟಲ್‌ಗೆ ಆ ಕಂಪನಿಗಳನ್ನು ನೋಂದಾಯಿಸಿಕೊಳ್ಳುವುದು ಮತ್ತು ಯಾವುದೇ ರೀತಿಯ ಸಿಬ್ಬಂದಿಗಳ ಅವಶ್ಯಕತೆ ಇದ್ದರೆ ಅದನ್ನು ತಿಳಿಸಿ ಅವರಿಗೆ ತರಬೇತಿ ಕೊಡುವುದಕ್ಕೆ ನಾವು ತಯಾರಿದ್ದೇವೆ ಎನ್ನುವುದನ್ನು ತಿಳಿಸುವಂತಹ ವ್ಯವಸ್ಥೆಯನ್ನು ಮಾಡಿ, ಪ್ರಸ್ತುತವಾಗಿ ಆಗುವ ರೀತಿಯಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ‘ಕೋವಿಡ್’ ಬಂದಂತಹ ಸಂದರ್ಭದಲ್ಲಿ ತರಬೇತಿ ಕೇಂದ್ರಗಳಲ್ಲಿ ಸಮಸ್ಯೆಯಾಗಿವೆ. ಮುಂದಿನ ದಿನಗಳಲ್ಲಿ ನಾವು ಇನ್ನೂ placement ಮಾಡುವಂತಹ agency ಗಳನ್ನು ಹೆಚ್ಚಾಗಿ ತರುವುದನ್ನು ಮಾಡುತ್ತಿದ್ದೇವೆ. ನಮ್ಮ ಎಲ್ಲಾ ಸರ್ಕಾರಿ ಸಂಸ್ಥೆಗಳು ಐ.ಟಿ.ಐ., ಪಾಲಿಟೆಕ್ನಿಕ್, ಜಿ.ಟಿ.ಟಿ.ಸಿ., ಇಂಜಿನಿಯರಿಂಗ್ ಮತ್ತು ಪದವಿ ಕಾಲೇಜುಗಳಲ್ಲೂ ಸ್ಕಿಲ್ ಟ್ರೇನಿಂಗ್ ಅನ್ನು demand and supply ಆಧಾರಿತವಾಗಿ ಕೌಶಲ್ಯತೆ ಕೊಡುವುದನ್ನು ಮಾಡುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇರುವ ಐ.ಟಿ.ಐ.,ಗಳಲ್ಲಿ ಸುಸಜ್ಜಿತವಾದ ಸಿಬ್ಬಂದಿಗಳಿಲ್ಲ ಅಥವಾ ತರಬೇತಿ ಕೊಡುವಂತಹ utensils ಇಲ್ಲ. ಇವರು ಅಪ್‌ಗ್ರೇಡ್ ಮಾಡುತ್ತೇವೆ ಎನ್ನುತ್ತಾರೆ. ಯಾವುದನ್ನು ಅಪ್‌ಗ್ರೇಡ್ ಮಾಡಿದ್ದಾರೆ, ಎಷ್ಟು ಅಪ್‌ಗ್ರೇಡ್ ಮಾಡಿದ್ದಾರೆ ಎಂಬುದನ್ನು ತಿಳಿಸಬೇಕು. ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಎಷ್ಟು ಅಪ್‌ಗ್ರೇಡ್ ಮಾಡಿದ್ದಾರೆ? ಐ.ಟಿ.ಐ., ಆಗಬಹುದು, ಇಂಜಿನಿಯರಿಂಗ್ ಆಗಬಹುದು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಲ್ಲಿ ಶೇ.50ರಷ್ಟೂ ಸಿಬ್ಬಂದಿಗಳಿಲ್ಲ. ಎರಡನೆಯದಾಗಿ ಅಲ್ಲಿ ಹೇಳಿಕೊಳ್ಳುವಂತಹ ನಿಷ್ಣರಿಲ್ಲ, ಇದ್ದರೂ ಕೆಟ್ಟು ಹೋಗಿರುತ್ತವೆ, ಅಕಸ್ಮಾತ್ ಇದ್ದರೆ ಅದನ್ನು ಉಪಯೋಗ ಮಾಡುವಂತಹ technically qualified ಇರುವಂತಹ ವ್ಯಕ್ತಿ ಇರುವುದಿಲ್ಲ. ಇದಕ್ಕೆ ಏನು ಮಾಡಬೇಕು?

**ಡಾ|| ಸಿ.ಎನ್. ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ಹಣವನ್ನು ಖರ್ಚು ಮಾಡುವುದು ತರಬೇತಿಗೆ ಮಾತ್ರ. ತರಬೇತಿ ಕೇಂದ್ರಗಳ ಜೊತೆ ಒಡಂಬಡಿಕೆ ಮಾಡಿಕೊಂಡು ಅಲ್ಲಿರುವಂತಹ ತರಬೇತಿ ಕೇಂದ್ರಗಳನ್ನು ಉಪಯೋಗಿಸಿಕೊಂಡು ತರಬೇತಿ ಕೊಡುವುದಾಗುತ್ತದೆ. ಈ ದಿಕ್ಕಿನಲ್ಲಿ ನಾವು ಸರ್ಕಾರದಲ್ಲಿ, ಈಗ ಸುಮಾರು 270 ಐ.ಟಿ.ಐ., ಸಂಸ್ಥೆಗಳಿದೆ. ಇದರಲ್ಲಿ 150 ಐ.ಟಿ.ಐ., ಸಂಸ್ಥೆಗಳನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸುವಂತಹದ್ದನ್ನು ಮಾಡಿದ್ದೇವೆ. ಇವತ್ತು 21ನೇ ಶತಮಾನಕ್ಕೆ ಬೇಕಾಗಿರುವಂತಹ relevant training and emerging technology ಕುರಿತಾಗಿ ತರಬೇತಿಯನ್ನು ಕೊಟ್ಟು 150 ಸಂಸ್ಥೆಗಳಲ್ಲಿ ಸಧ್ಯದಲ್ಲಿಯೇ ಪ್ರಾರಂಭವಾಗುತ್ತದೆ. ಹಾಗೂ ಕೆ.ಜಿ.ಟಿ.ಟಿ.ಐ., ನಲ್ಲಿಯೂ ಬಹಳಷ್ಟು ಪ್ರಸ್ತುತವಾದಂತಹ ತರಬೇತಿಗಳನ್ನು ಕೊಡುವಂತಹದ್ದಾಗುತ್ತದೆ ಮತ್ತು ಜಿ.ಟಿ.ಟಿ.ಸಿ., ನಲ್ಲೂ ಪ್ರಸ್ತುತವಾದಂತಹ ತರಬೇತಿಗಳನ್ನು ಕೊಡುವಂತಹದ್ದಾಗುತ್ತದೆ ಮತ್ತು ಇವತ್ತು ಬೇರೆ ಬೇರೆ ತರಬೇತಿ ಸಂಸ್ಥೆಗಳಿಂದಲೂ ಹೊರಬರುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರದಲ್ಲಿರುವಂತಹ ಸಂಸ್ಥೆಗಳಲ್ಲೇ ಎಲ್ಲಾ ತರಬೇತಿಗಳನ್ನು ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪದವಿ ಕಾಲೇಜು, ನಮ್ಮ ಸರ್ಕಾರಿ ಸಂಸ್ಥೆಗಳಲ್ಲೇ ಎಲ್ಲಾ ತರಬೇತಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲಾ ತಾಲ್ಲೂಕುಗಳಲ್ಲೂ ಈ ವ್ಯವಸ್ಥೆಗಳು ಇರುತ್ತವೆ, ಹಾಗಾಗಿ ಇದರ ಸಂಪೂರ್ಣ ಬಳಕೆ ಮಾಡುವಂತಹದ್ದಾಗುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಚಿವರೇ, ನಿಮ್ಮ ಆಶ್ವಾಸನೆ ಚೆನ್ನಾಗಿದೆ. ಆದರೆ ಅದನ್ನು ಅನುಷ್ಠಾನ ಮಾಡಿದರೆ ಒಳ್ಳೆಯದು. ನಾವು ಹೇಳುವುದಿಷ್ಟೇ, ನೀವು ಪೋರ್ಟಲ್ ಮಾಡಿ ಯಾವ ಫ್ಯಾಕ್ಟರಿಗೆ ಬರುತ್ತದೆ ಅವರಿಗೆ ಜನರನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಅದನ್ನು ಹೊರತಾಗಿ ಯೋಚನೆ ಮಾಡಿ. ಜನರು ಪ್ರೊಫೆಷನಲ್ ಆಗಿ ಮಸಾಜ್ ಮಾಡುವವರು, ಸೆಕ್ಯುರಿಟಿ ಗಾರ್ಡ್ಸ್ ಇರುತ್ತಾರೆ. ಇವುಗಳಿಗೆ ಕೊಟ್ಟರೆ ಅಲ್ಲಿಯ ಜನರು ಉದ್ಯೋಗವನ್ನರಸಿಕೊಂಡು ಬರುವವರಿಗೆ ಅವರಿಗೂ ಕನಿಷ್ಟವೇತನವನ್ನು ಕೊಡಲೇಬೇಕು. ಇಂತಹದ್ದನ್ನು ಅನುಷ್ಠಾನ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಆಯಿತು. ಈಗ ಮಾನ್ಯ ಕೆ.ಸಿ. ಕೊಂಡಯ್ಯನವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 237**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾನೇ ಉತ್ತರ ಕೊಡುತ್ತೇನೆ. ಸಚಿವರಾದ ಶ್ರೀ ಆನಂದ್ ಸಿಂಗ್‌ರವರು ಬಂದಿರಲಿಲ್ಲ. ನಾನೇ ಉತ್ತರ ಕೊಡಬೇಕೆಂದು ಚೀಟಿ ಕಳುಹಿಸಿದ್ದಾರೆ.

**ಸಭಾಪತಿಯವರು:-** ಸಚಿವರು ಏತಕ್ಕೆ ಬಂದಿಲ್ಲವೆಂದು ಹೇಳಬೇಕಲ್ಲವೇ? ಅದನ್ನು ಸದನಕ್ಕೆ ತಿಳಿಸಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಹೌದು ತಿಳಿಸಬೇಕು. ಈಗ ನಾನೇ ಉತ್ತರ ಕೊಡುತ್ತೇನೆ.

**ಶ್ರೀ ಕೆ.ಸಿ. ಕೊಂಡಯ್ಯ**:- ಮಾನ್ಯ ಸಭಾಪತಿಯವರೇ, ನಮ್ಮ ದೇಶ, ರಾಜ್ಯದಲ್ಲಿ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಸ್ವಚ್ಛ ಗಾಳಿಗೂ ಒಂದು ಕಾರ್ಯಕ್ರಮವನ್ನು ಮಾಡಿದ್ದಾರೆ. ಅಂದರೆ ಮಾಲಿನ್ಯದಿಂದ ಇಡೀ ದೇಶ ಎಷ್ಟು ಹದಗೆಟ್ಟಿದೆ ಎಂಬುದು ನಮಗೆ ತಿಳಿಯುತ್ತಿದೆ. ನಾನು ಪೇಪರ್‌ನಲ್ಲಿ ಓದಿದ ನಂತರ ಪ್ರಶ್ನೆ ಕೇಳೋಣ ಎಂದುಕೊಂಡಿದ್ದೆ. ನಾನು ಪ್ರಶ್ನೆ ಕೇಳಿರುವುದು ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದಡಿ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ನಮ್ಮ ರಾಜ್ಯದಲ್ಲಿ ನಾಲ್ಕು ಪಟ್ಟಣಗಳನ್ನು ತೆಗೆದುಕೊಂಡಿದ್ದೀರಿ. ಎರಡನೇ ಪ್ರಶ್ನೆ ಕೇಳಿರುವುದು 2024ರ ವೇಳೆಗೆ ನಿಗದಿಪಡಿಸಿಕೊಂಡಿರುವ ಗುರಿಗಳನ್ನು ಸಾಧಿಸಲು ಸರ್ಕಾರ ಸಿದ್ಧಪಡಿಸಿದ ನಿರ್ದಿಷ್ಟ ಕ್ರಿಯಾ ಯೋಜನೆಗಳೇನು? ಇದಕ್ಕೇನು ಉತ್ತರ ಕೊಟ್ಟಿದ್ದಾರೆ ಅದು ನನಗಂತೂ ಅರ್ಥವಾಗುತ್ತಿಲ್ಲ. ಇಲಾಖೆಗಳು-ಬಿ.ಬಿ.ಎಂ.ಪಿ/ಸ್ಥಳೀಯ ಸಂಸ್ಥೆಗಳು: ಬೆಂಗಳೂರು-16, ಹುಬ್ಬಳ್ಳಿ-ಧಾರವಾಡ-11, ಕಲಬುರ್ಗಿ-11, ದಾವಣಗೆರೆ-11 ಹೀಗೆ ಕೊಟ್ಟಿರುವ ಅಂಕಿ-ಅಂಶಗಳು ಅರ್ಥವಾಗುತ್ತಿಲ್ಲ. ನಾನು ಸ್ಪಷ್ಟವಾಗಿ ಕೇಳಿರುವುದು ಈ ಕಾರ್ಯಕ್ರಮದಡಿಯಲ್ಲಿ ಏನು ನಿರ್ಣಯ ಮಾಡಿದ್ದೀರಿ? ಯಾವರೀತಿಯಾಗಿ ಮಾಲಿನ್ಯವನ್ನು ಕಡಿಮೆ ಮಾಡುತ್ತೀರಿ ಎಂದು ಕೇಳಿದ್ದೇನೆ. ನನಗೆ ಮಾಹಿತಿ ಸಿಕ್ಕಿರುವ ಹಾಗೆ ಕೋವಿಡ್ ಬಂದು ನಾವೆಲ್ಲಾ ಹೆಣಗಾಡಿದ್ದೇವೆ. ಮುಖ್ಯವಾಗಿ ಕಾರ್ಖಾನೆಗಳಿಂದ ಮತ್ತು ವಾಹನಗಳಿಂದ ಮಾಲಿನ್ಯ ಉಂಟಾಗುತ್ತದೆ. ಮಾಲಿನ್ಯವನ್ನು ಕಡಿಮೆ ಮಾಡುವುದು, ಸಾರ್ವಜನಿಕ ಜಾಗೃತಿ ಹೆಚ್ಚಿಸುವುದು ಇತ್ಯಾದಿ ಅಂಶಗಳಿಗೆ ಕ್ರಿಯಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಗಳ ಅನುಷ್ಠಾನವನ್ನು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಸಮಿತಿಗಳು ನಿಯಮಿತವಾಗಿವೆ. ಈ ಸಮಿತಿಗಳ ಕೆಲಸವೇನು? ಇಲ್ಲಿಯವರೆಗೆ ಎಷ್ಟು ಅನುದಾನ ಬಂದಿದೆ? ನೀವು ಕೊಟ್ಟಿರುವ ಉತ್ತರದಲ್ಲಿ 2019 ಹಾಗೂ 2021ರಲ್ಲಿ 07 ಕೋಟಿ ರೂಪಾಯಿಗಳು ಬಂದಿದೆ. ಇದು ಯಾವ ಕಾರ್ಯಕ್ರಮಕ್ಕೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಕೇವಲ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಸ್ಪಷ್ಟೀಕರಣ ಬೇಕೆಂದು ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಸೂಕ್ಷ್ಮವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಕೇಳುತ್ತಿರುವುದು ಸ್ವಚ್ಛವಾದ ಗಾಳಿಯನ್ನು ಸೇವಿಸುವ ನಮ್ಮ ಹಕ್ಕನ್ನು ಪರಿಸರವನ್ನು ಸ್ವಚ್ಛಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ ಮತ್ತು ರಾಜ್ಯದಲ್ಲಿ ಯಾವ ಯಾವ ನಗರಗಳನ್ನು ಇದಕ್ಕೆ ಗುರುತಿಸಲಾಗಿದೆ? ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಕಾರ್ಯಕ್ರಮದ ಸ್ವರೂಪವೇನು ಎಂಬ ಪ್ರಶ್ನೆಗಳನ್ನು ಕೇಳಿದ್ದಾರೆ. ಪ್ರಶ್ನೆಗೆ ಇಷ್ಟೇ ಉತ್ತರವನ್ನು ಕೊಡಲಾಗಿದೆ. ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮ ಎನ್ನುವ ಕೇಂದ್ರ ಸರ್ಕಾರದ ಕಾರ್ಯಕ್ರಮಕ್ಕೋಸ್ಕರ ರಾಜ್ಯದ ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ ಮತ್ತು ಕಲಬುರ್ಗಿ ನಗರಗಳನ್ನು ಗುರುತಿಸಲಾಗಿದೆ. 2019ರಿಂದ 2024ರ ಅವಧಿಯಲ್ಲಿ ಈ ಕಾರ್ಯಕ್ರಮದ ಸ್ವರೂಪಗಳಿರುತ್ತದೆ. ಅದಕ್ಕೋಸ್ಕರ ಧೂಳಿನ ಪ್ರಮಾಣವನ್ನು ಕಡಿಮೆ ಮಾಡುವುದು, ಮತ್ತು ಮುಖ್ಯ ಗುರಿಯಿರುವುದೇನೆಂದರೆ, 2019ರಲ್ಲಿ ಇದ್ದಂತಹ ಧೂಳಿನ ಪ್ರಮಾಣವನ್ನು 2024ರೊಳಗೆ ಶೇ.20 ರಿಂದ ಶೇ.30 ರಷ್ಟು ತಗ್ಗಿಸುವುದು, ಹೊಗೆರಹಿತವಾದ ವಾತಾವರಣವನ್ನು ನಿರ್ಮಾಣ ಮಾಡುವುದು ಮತ್ತು ಕಟ್ಟಡಗಳ ತ್ಯಾಜ್ಯಗಳ ನಿರ್ವಹಣೆಗಳನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡುವ ಮೂಲಕ ಅಲ್ಲಿ ಧೂಳು ಏಳದಿರುವಂತೆ ನೋಡಿಕೊಳ್ಳುವುದು, ಟ್ರಾಫಿಕ್ ಜಂಕ್ಷನ್ ಬಳಿ ನೀರನ್ನು ಸಿಂಪಡಣೆ ಮಾಡುವ ಮೂಲಕ ಧೂಳು ಮೇಲೇರದಂತೆ ನೋಡಿಕೊಳ್ಳುವುದು, ರಸ್ತೆಗಳ ಬದಿಯಲ್ಲಿ ಕಾಲುದಾರಿಗಳನ್ನು ಧೂಳುರಹಿತವಾಗಿ ಮಾಡಿರುವುದು, ರಸ್ತೆಗಳ ಪಕ್ಕದಲ್ಲಿ ಗಿಡಗಳನ್ನು ನೆಡುವುದು, ವಾಹನಗಳ ರೀಚಾರ್ಜ್ ವ್ಯವಸ್ಥೆಗಳನ್ನು ಮಾಡುವುದು, ರಾತ್ರಿಯಲ್ಲಿ ರಸ್ತೆಯಲ್ಲಿ ಧೂಳುರಹಿತ ವಾತಾವರಣ ಮಾಡುವುದಕ್ಕೆ ಬೇಕಾದಂತಹ ನೀರನ್ನು ಸಿಂಪಡಣೆ ಮಾಡುವುದು ಸೇರಿದಂತೆ ನೀವು ಹೇಳಿರುವಂತಹ ಫ್ಯಾಕ್ಟರಿಗಳಲ್ಲಿ ಹೊಗೆ ರಹಿತ ಮಾಡುವಂತಹ ಇತ್ಯಾದಿ ಅನೇಕ ಅಂಶಗಳನ್ನು ಕೂಡ ಇಟ್ಟುಕೊಳ್ಳಲಾಗಿದೆ. ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಾನಗರ ಪಾಲಿಕೆಯಲ್ಲಿ 44 ಅಂಶಗಳನ್ನೊಳಗೊಂಡಂತೆ ಕಾರ್ಯ ಯೋಜನೆಗಳನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ. ಉಳಿದ ಮೂರು ನಗರಗಳಲ್ಲಿ 27 ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಧೂಳು ರಹಿತವಾದಂತಹ ಮತ್ತು ಪರಿಸರ ಮಾಲಿನ್ಯ ರಹಿತವಾದಂತಹ ವಾತಾವರಣವನ್ನು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದಕ್ಕೋಸ್ಕರ ತಾವು ಎಷ್ಟು ಹಣವನ್ನು ನಿಗದೀಕರಿಸಿದ್ದೀರಿ ಎಂದು ಪ್ರಶ್ನೆ ಕೇಳಿದ್ದೀರಿ, ಅದಕ್ಕೂ ಸಹ ಮಾಹಿತಿಯನ್ನು ಕೊಡಲಾಗಿದೆ. ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದಡಿ ಕೇಂದ್ರ ಸರ್ಕಾರವು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮುಖೇನ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ 2019 ಹಾಗೂ 2021ರಲ್ಲಿ ಒಟ್ಟು ರೂ. 7.82 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ಇದರಲ್ಲಿ ಎಲ್ಲವನ್ನೂ ಹೇಳಿದ್ದೀರಿ, ಮಾನ್ಯ ಸದಸ್ಯರು ಕೇಳಿರುವ ಉಪ ಪ್ರಶ್ನೆಗೆ ಸಂಬಂಧಿಸಿದಂತೆ ಲಿಖಿತ ಉತ್ತರವನ್ನು ನೋಡದೆ ಹಾಗೆಯೇ ಉತ್ತರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ, ನಿಮ್ಮ ಸಲಹೆ ಸೂಚನೆಗಳೇನಾದರೂ ಇದ್ದರೆ ಕೊಡಿ, ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುತ್ತೇವೆ.

**ಶ್ರೀ ಕೆ.ಸಿ. ಕೊಂಡಯ್ಯ**:- ಮಾನ್ಯ ಸಭಾಪತಿಯವರೇ, ನಾವು ಸರ್ಕಲ್‌ಗಳಲ್ಲಿ ನೀರು ಸಿಂಪಡಣೆ ಮಾಡಿದರೂ, ಸ್ವಚ್ಛ ಮಾಡಿದ್ದರೂ ಒಂದಂತೂ ನಡೆದಿದೆ, ಬಿ.ಬಿ.ಎಂ.ಪಿ., ಅವರಿಗಾಗಲೀ ಅಥವಾ ಮಾಲಿನ್ಯ ನಿಯಂತ್ರಣ ಮಂಡಳಿಗಾದರೂ ಒಂದು ವೀಡಿಯೋ ತೋರಿಸಲು ಹೇಳಿ. ರೂ. 2 ಕೋಟಿ 60 ಲಕ್ಷ ಖರ್ಚು ಮಾಡಿದರು. ಯಾವುದಾದರೂ ಭೌತಿಕವಾಗಿ ಆಗಿರುವುದನ್ನು ತೋರಿಸಲಿ. ಈ ಕಾರ್ಯಕ್ರಮದಲ್ಲಿ ಒಂದೂ ನಡೆದಿಲ್ಲ. ಬಿ.ಬಿ.ಎಂ.ಪಿ., ಯಲ್ಲಿ 02 ಕೋಟಿ 70 ಲಕ್ಷದವರೆಗೆ ಖರ್ಚು ಮಾಡಿರುವುದನ್ನು ಹೇಳಿದಿರಿ. ಧೂಳನ್ನು ಕಡಿಮೆ ಮಾಡಲು ಸರ್ಕಲ್‌ಗಳಲ್ಲಿ ನೀರು ಸಿಂಪಡಿಸಿರುವುದು, ಕಸಕಡ್ಡಿಗಳನ್ನು ಎತ್ತಿಹಾಕಿರುವುದನ್ನು ಹೇಳಿದಿರಿ. ಒಂದು ಕಟ್ಟಡದ ಮುಂದೆ ಇವತ್ತಿಗೂ ರಾಶಿ ರಾಶಿ ಕಸ, ಕಲ್ಲು ಬಿದ್ದಿರುತ್ತದೆ. ಒಂದನ್ನೂ ಕ್ಲೀನ್ ಮಾಡಿರುವುದಿಲ್ಲ. ಕೇವಲ ಹಣ ಬಂದಿದೆ ಅದನ್ನು ಖರ್ಚು ಮಾಡಿರುವುದನ್ನು ತೋರಿಸುತ್ತೀರಿ ಹೊರತು ಇದರಿಂದ ಏನು ಕಡಿಮೆಯಾಗಿದೆ, ಎಷ್ಟು ಪರ್ಸೆಂಟೇಜ್ ಮಾಲಿನ್ಯ ಕಡಿಮೆಯಾಗಿದೆ ಎಂಬುದನ್ನು assess ಮಾಡಿಲ್ಲ. ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕಾರ ಈ ವಿಚಾರವನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕನ್ವರ್ಟ್ ಮಾಡುವುದು ಮೇಲು. ಆಗ ಎಲ್ಲಾ ಸದಸ್ಯರೂ ಇದರ ಬಗ್ಗೆ ಚಿಂತನೆ ಮಾಡುತ್ತಾರೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ನೀವು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕನ್ವರ್ಟ್ ಮಾಡುವ ಬಗ್ಗೆ ಒಂದು ಪತ್ರ ಬರೆದು ಕಳುಹಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಆಗಬಹುದು.

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ಯಾರೇ ಮಂತ್ರಿಗಳು ಹೇಳದೇ ಕೇಳದೇ ಸದನಕ್ಕೆ ಗೈರಾದರೆ ನಾನು ಒಪ್ಪುವುದಿಲ್ಲ. ಸದನಕ್ಕೆ ಯಾರೂ ದೊಡ್ಡವರಲ್ಲ, ದಯಮಾಡಿ ಸದನಕ್ಕೆ ತಿಳಿಸಬೇಕು ಹಾಗೂ ನನ್ನ ಅನುಮತಿ ಪಡೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 173**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಬಹಳಷ್ಟು ಜನರು ಬೆಂಗಳೂರಿನ ಸದಸ್ಯರಿದ್ದೇವೆ.

(ಮುಂದು)

(637) 13-09-2021/ 12-50/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಇದು ಬೆಂಗಳೂರಿನ ಏಳಿಗೆ. ಟಿಪ್ಪುಸುಲ್ತಾನ್ ಕಾಲದ 'ಸಿಲ್ಕ್ ಸಿಟಿ' ಯಿಂದ ಹಿಡಿದು 'ಸಿಲಿಕಾನ್ ಸಿಟಿ' ಯಾಗಿ ಬೆಂಗಳೂರು ನಗರ ಬೆಳೆದು 'ಸೈನ್ಸ್ ಸಿಟಿ', 'ಮಿಲ್ಕ್ ಸಿಟಿ' ಮತ್ತು 'ಸಿಲಿಕಾನ್ ಸಿಟಿ' ಎಂಬೆಲ್ಲಾ ಹೆಸರುಗಳನಿಟ್ಟು ಹೇಳುತ್ತಿದ್ದರು. ಇದು ಎರಡನೇ ಮಾಹಿತಿ ತಂತ್ರಜ್ಞಾನದ ರಾಜಧಾನಿಯಾಗಿ ಮೆರೆದಂತಹ ನಗರವಾಗಿದೆ. ಈಗಾಗಲೇ ಮಾನ್ಯ ಮಂತ್ರಿಗಳು ವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಈ ಸಿಲಿಕಾನ್ ಸಿಟಿಯಲ್ಲಿ ಉದ್ಯೋಗವಕಾಶಗಳಿಗೆ ಯಾವ ಸ್ಥಿತಿ ಬಂದಿದೆ ಎಂದರೆ, ಅವರದೇ ಆದಂತಹ Centre for Monitoring Indian Economy (C.M.I.E.,) ಮತ್ತು Naukari.Com ಎರಡರ ಸರ್ವೆ ನೋಡಿದಾಗ ಹೈದರಾಬಾದ್‌ನಲ್ಲಿ ಶೇಕಡ 10 ರಷ್ಟು ಉದ್ಯೋಗವಕಾಶ ಜಾಸ್ತಿಯಾಗಿದೆ. ಪೂನಾದಲ್ಲಿ ಶೇಕಡ 13 ರಷ್ಟು ಇದೆ. ಬೆಂಗಳೂರು ಶೇಕಡ 4 ರಷ್ಟು ಇದೆ. ನಾವು ಬೆಂಗಳೂರಿನವರಾಗಿ ಈ ಪ್ರಶ್ನೆ ಕೇಳುವಂತಹ ಪರಿಸ್ಥಿತಿ ಬಂದಿದೆ ಎಂದು ನನಗೆ ನಾಚಿಕೆಯಾಗುತ್ತಿದೆ. ಬೆಂಗಳೂರಿನಲ್ಲಿ ಶೇಕಡ 4 ರಷ್ಟಕ್ಕೆ ಬಂದಿರುವಂತಹ ಅಂಕಿ-ಅಂಶಗಳನ್ನು ನೋಡಿದಾಗ ಇವರು ಯಾರಿಗೆ ಟ್ರೈನಿಂಗ್ ಕೊಟ್ಟಿದ್ದಾರೆ ಎಂಬುದು ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ಕೋವಿಡ್-19 ಪರಿಸ್ಥಿತಿಯಿಂದ ಬಹಳಷ್ಟು ಜನರು ಕೆಲಸವನ್ನು ಕಳೆದುಕೊಂಡಿದ್ದಾರೆ. Skill development ವಿಷಯದಲ್ಲಿಯೂ ಸಹ ಮಾನ್ಯ ಮಂತ್ರಿಯವರು ಒದಗಿಸಿರುವಂತಹ ಉತ್ತರದಲ್ಲಿ contradiction ಅನ್ನು ನೋಡಿದಾಗ ಒಂದು ಕಡೆ ತರಬೇತಿಯನ್ನು ಕೊಟ್ಟು ಸಹಾಯಧನವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಮತ್ತೊಂದು ಕಡೆ ನಾವು ಸಹಾಯಧನವನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಇವರು ಯಾರಿಗೆ confusion create ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ, ಉದ್ಯೋಗ ಸೃಷ್ಟಿ ಮಾಡುವುದರಲ್ಲಿ ಬೆಂಗಳೂರು ಶೇಕಡ 4 ರಷ್ಟಕ್ಕೆ ಬರುವುದಕ್ಕೆ ಕಾರಣ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೆಂಬುದನ್ನು ಸಹ ಹೇಳಬೇಕಾಗುತ್ತದೆ? ಕೋವಿಡ್ ಕಡಿಮೆಯಾದ ನಂತರ ಹೈದರಾಬಾದ್‌ನಲ್ಲಿ ಶೇಕಡ 49 ರಷ್ಟು ಉದ್ಯೋಗ ಸೃಷ್ಟಿಯಾಗಿದೆ. ಬೆಂಗಳೂರು ನಗರದಲ್ಲಿ ಶೇಕಡ 9 ರಷ್ಟಕ್ಕೆ ಬಂದು ನಿಂತಿದೆ. ಇದಕ್ಕೆ ಯಾವುದೇ ರೀತಿಯ ಮಾಹಿತಿಗಳಿಲ್ಲ. Naukari.Com ಮತ್ತು C.M.I.E., ರವರು ಕೊಟ್ಟಿರುವಂತಹ ಮಾಹಿತಿಗಳಾಗಿವೆ. ಇದಕ್ಕೆ ಕಾರಣ ಏನೆಂಬುದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಿದರೆ ಒಳ್ಳೆಯದು.

**ಡಾ|| ಸಿ.ಎನ್. ಅಶ್ವತ್ಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯಲ್ಲಿ ಮುಖ್ಯವಾಗಿ ತರಬೇತಿ ಕೊಡುವಂತಹದ್ದು, ಉದ್ಯೋಗ ಸೃಷ್ಟಿ ಮಾಡುವಂತಹದ್ದು ಇದೆ. ನಮ್ಮ ಇಲಾಖೆಯ ಮುಖಾಂತರ ಗ್ರಾಮೀಣ ಭಾಗದಲ್ಲಿ National Rural Livelihood Mission ನ ಅಡಿಯಲ್ಲಿ ಉದ್ಯೋಗ ನಿರ್ಮಾಣ ಮಾಡುವಂತಹದ್ದು ಆಗುತ್ತದೆ. ಇವತ್ತಿನ ದಿವಸ ನಗರ ಭಾಗದಲ್ಲಿ ಕೌಶಲ್ಯತೆ ಕೊಟ್ಟು ಇರುವಂತಹ ಉದ್ಯೋಗವನ್ನು ಪಡೆದುಕೊಳ್ಳುವುದಕ್ಕೆ ನಾವು ತರಬೇತಿ ಕೊಡುವಂತಹದ್ದು ಆಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಕೋವಿಡ್-19 ಪರಿಸ್ಥಿತಿಯಿಂದ ತರಬೇತಿ ಕೊಡುವುದಕ್ಕೆ ಹೆಚ್ಚು ಹೆಚ್ಚು ಅವಕಾಶ ಇಲ್ಲದಂತಾಗಿದೆ. ಏಕೆಂದರೆ, ತರಬೇತಿ ಸೆಂಟರ್‌ಗಳನ್ನು Covid-19 norms ಪ್ರಕಾರವಾಗಿ ಮುಚ್ಚುವಂತಾದ್ದಾಗುತ್ತಿದೆ. ಈಗ ಜುಲೈ ತಿಂಗಳಿನಿಂದ ಪ್ರಾರಂಭವಾಗಿದೆ. ಹಾಗಾಗಿ ಸಾಕಷ್ಟು ಅಡೆತಡೆಗಳು ಇವೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಉದ್ಯೋಗವಕಾಶ ಎಷ್ಟು ಶೇಕಡಾವಾರು ನಿರ್ಮಾಣವಾಗುತ್ತಿದೆ. ಹೈದರಾಬಾದ್ ಮತ್ತು ಪೂನದಲ್ಲಿ ಉದ್ಯೋಗವಕಾಶ ನಿರ್ಮಾಣವಾಗುವುದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಬೇರೆ ಬೇರೆ ಸಂಸ್ಥೆಗಳ ಬಗ್ಗೆ ಪ್ರತ್ಯೇಕವಾಗಿ ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ನಾನು ಒಂದು ವಿಶ್ವಾಸದಲ್ಲಿ ಹೇಳಬಹುದು. ಕೋವಿಡ್-19 ಇರುವಂತಹ ಸೋಂಕಿನ ಖಾಯಿಲೆಯ ಹಿನ್ನಲೆಯಲ್ಲಿ ಎಲ್ಲಾ ರೀತಿಯಲ್ಲಿ virtual ಆಗಿ ಮತ್ತು 'work from anywhere' ಇರುವುದರಿಂದ ಎಲ್ಲವೂ ಸವಾಲಾಗಿದೆ. ಇದರ ಬಗ್ಗೆ ಮುಂದಿನ ಬಾರಿ ಚರ್ಚೆ ಮಾಡೋಣ. ಬೆಂಗಳೂರಿನಲ್ಲಿ ಉದ್ಯೋಗ ನಿರ್ಮಾಣವಾಗುವುದಕ್ಕೆ Employees Provident Fund, E.S.I., ನ ಅಂಕಿ-ಅಂಶಗಳನ್ನು ನೋಡಿದಾಗ, ಎಲ್ಲೆಲ್ಲಿ ಎಷ್ಟೆಷ್ಟು ಉದ್ಯೋಗ ನಿರ್ಮಾಣವಾಗುತ್ತಿದೆ ಎನ್ನುವುದರ ಅಂಕಿ-ಅಂಶಗಳನ್ನು ನೋಡಿದಾಗ, formal sector ನಲ್ಲಿ 25 ಸಾವಿರಕ್ಕಿಂತ ಆದಾಯ ಕಡಿಮೆ ಇರುವಂತಹ ಉದ್ಯೋಗಗಳು ಎಷ್ಟರಮಟ್ಟಿಗೆ ನಿರ್ಮಾಣವಾಗುತ್ತಿದೆ ಎನ್ನುವಂತಹ ಅಂಕಿ-ಅಂಶಗಳ ಬಗ್ಗೆ ಮುಂದಿನ ದಿನಮಾನಗಳಲ್ಲಿ ಚರ್ಚೆ ಮಾಡೋಣ. ಒಟ್ಟಾರೆಯಾಗಿ ನಾವೆಲ್ಲರೂ ಸೇರಿ ಉದ್ಯೋಗವಕಾಶಗಳನ್ನು ಹೆಚ್ಚಿಸಬೇಕು. ನಗರ ಪ್ರಸ್ತುತವಾಗಿರಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೆ ಗೊತ್ತಿರುವ ಪ್ರಕಾರ ಮತ್ತು ಇವತ್ತಿನ ಎಲ್ಲಾ ಅಂಕಿ-ಅಂಶಗಳ ಪ್ರಕಾರವಾಗಿಯೂ ಬೆಂಗಳೂರು ನಗರ ಬಹಳ ಉತ್ತಮವಾಗಿ ಬೆಳೆಯುತ್ತಿದೆ. ಬೇರೆ ಎಲ್ಲಾ ನಗರಗಳಿಗೂ ಹೋಲಿಸಿಕೊಂಡಾಗ living standards ಆಗಲಿ, ಉದ್ಯೋಗ ನಿರ್ಮಾಣದಲ್ಲಾಗಲಿ, probably, in all aspects, ಚೆನ್ನಾಗಿ ಮುಂದೆ ಹೋಗುತ್ತಿದೆ. ಇನ್ನು ಬಹಳಷ್ಟು ಸುಧಾರಣೆಗಳನ್ನು ಮಾಡಬೇಕು. ಇದಕ್ಕೆ ಇನ್ನು ಹೆಚ್ಚಿನ ರೀತಿಯಲ್ಲಿ ಶಕ್ತಿ ತುಂಬುವಂತಹ ಪ್ರಯತ್ನಗಳು ಮಾಡಬೇಕು. ಇದಕ್ಕೆ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ. Demand and supply ಮತ್ತು ಉದ್ಯೋಗದ ಬಗ್ಗೆ ಹೇಳಿದಾಗ demand and supply ನೋಡಿಕೊಳ್ಳದೇ ಹೇಗೋ ತರಬೇತಿಗಳು ನಡೆಯುತ್ತಿತ್ತು. ಇದನ್ನು ಸಂಪೂರ್ಣವಾಗಿ ಸರಿಪಡಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ಯಾರಿಗೆ ತರಬೇತಿಯನ್ನು ಕೊಟ್ಟರೂ ಅವರಿಗೆ ಉದ್ಯೋಗ ಸಿಗಬೇಕು. Demand ಇದ್ದರೆ ಮಾತ್ರ ತರಬೇತಿ ಕೊಡಬೇಕು. ಎಲ್ಲೋ ಒಂದು ಕಡೆ ತರಬೇತಿ ಕೊಡಬೇಕೆಂಬ ಬಗ್ಗೆ ಗುರಿಯಿಟ್ಟುಕೊಂಡು ತರಬೇತಿಯನ್ನು ಕೊಟ್ಟರೆ ಅಷ್ಟು ಉಚಿತ ಅಲ್ಲ. ಬೇಡಿಕೆ ಆಧಾರಿತವಾಗಿ ತರಬೇತಿ ಕೊಡುವಂತಹದ್ದು ಆಗಬೇಕೆಂದು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ದಿಕ್ಕಿನಲ್ಲಿ ಕಾರ್ಯವನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. Training and Placement Rate ಅನ್ನು ನೋಡಿದಾಗ ಇದುವರೆಗೂ 2016 ರಲ್ಲಿ ಪ್ರಾರಂಭವಾಗಿರುವಂತಹ ಈ ಒಂದು ಯೋಜನೆ ಅಷ್ಟು ಫಲಕಾರಿಯಾಗಿ ಮುಂದೆ ಸಾಗುತ್ತಿಲ್ಲ. ಇದನ್ನು ಸರಿಪಡಿಸುವುದಕ್ಕೆ demand and supply basis ಮೇಲೆ ಈಗಾಗಲೇ ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರಿಗೆ ಉತ್ತರ ಕೊಡುತ್ತಾ ನಾನು ಹೇಳಿದ್ದೇನೆ. Demand and supply ಅನ್ನು ಪೋರ್ಟಲ್ ಮೂಲಕ ಎಲ್ಲೆಲ್ಲಿ ಖಾಲಿ ಇದೆ ಎಂಬುದನ್ನು ಪೋರ್ಟಲ್‌ನಲ್ಲಿ ಎಲ್ಲಾ ಕಂಪನಿಗಳು ಮುಂದೆ ಬಂದು ಅಲ್ಲಿ ನೋಂದಾಯಿಸಿಕೊಳ್ಳುವಂತಹದ್ದಾಗುತ್ತದೆ. ಯಾವುದೇ ಕಂಪನಿಗಳ requirement ಇದ್ದರೂ ಕೂಡ ಅವರು ಖರ್ಚು ಮಾಡುವುದೇನು ಬೇಕಾಗಿಲ್ಲ. ನಾವು ಸರ್ಕಾರದಿಂದ ಖರ್ಚು ಮಾಡಿ ತಮಗೆ ಬೇಕಾಗಿರುವಂತಹ ಮಾನವ ಸಂಪನ್ಮೂಲದ ಬಗ್ಗೆ ತರಬೇತಿಯನ್ನು ಕೊಟ್ಟು ಉದ್ಯೋಗವನ್ನು ಭರಿಸುವುದಕ್ಕೆ ಎಲ್ಲಾ ರೀತಿ ಸಹಕಾರ ಕೊಡುವುದಕ್ಕೆ ಸರ್ಕಾರ ತಯಾರಾಗಿ ಮುಂದೆ ಬರುತ್ತದೆ ಎಂದು ತಿಳಿಸುವಂತಹದ್ದನ್ನು ಬಹಳ ಸ್ಪಷ್ಟವಾಗಿ ಮಾಡುತ್ತಿದ್ದೇವೆ. ಹಾಗಾಗಿ ಖಂಡಿತವಾಗಿ ಈ ದಿಕ್ಕಿನಲ್ಲಿ ಸಾಗುವಂತಹದ್ದನ್ನು ಸಹ ಮಾಡುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ನೀಡಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಬೆಂಗಳೂರು ನಗರದಲ್ಲಿ ಕೋವಿಡ್-19 ಕಾರಣದಿಂದ ಕೆಲವು ಅಡೆಚಣೆಗಳು ಉಂಟಾಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದು, ಬೆಂಗಳೂರು ನಗರಕ್ಕಿಂತ ಹೆಚ್ಚಿನ ಅಡೆಚಣೆ ಪೂನಾದಲ್ಲಿ ಇತ್ತು. ಅಲ್ಲಿ ಶೇಕಡ 13 ರಷ್ಟು employment rise ಆಗಿದೆ. ಹೈದರಾಬಾದ್‌ನಲ್ಲಿ ಶೇಕಡ 49 ರಷ್ಟಕ್ಕೆ ಹೋಗಿದೆ. Second tier city ಎಂದು ರಾಜಸ್ಥಾನ್ ಅನ್ನು ಹೇಳುತ್ತೇವೆ. ಅಲ್ಲಿಯೂ ಸಹ ಶೇಕಡ 44 ರಷ್ಟು ಇದೆ. ಇದು ಕಾಂಗ್ರೆಸ್ ಪಕ್ಷದ ಮಾಹಿತಿ ಅಲ್ಲ. C.M.I.E., and Naukari.Com ಹೇಳಿರುವಂತಹ ಸರ್ವೇಯ ಮಾಹಿತಿಯಾಗಿದೆ. ಆದ್ದರಿಂದ, ಕೋವಿಡ್-19 ಹೆಸರಿನಲ್ಲಿ ಉದ್ಯೋಗಗಳು ಸಿಗುತ್ತಿಲ್ಲವೆಂದರೆ ತಪ್ಪಾಗುತ್ತದೆ. ಮಾನ್ಯ ಮಂತ್ರಿಗಳು demand and supply ಬಗ್ಗೆ ಮಾತನಾಡಿದರು. ನಾನೂ ಕೂಡ C.M.I.E., Monitoring Committee ವರದಿಯ ಬಗ್ಗೆಯೇ ಹೇಳುತ್ತೇನೆ. It says, "The Center for monitoring the Indian economy C.M.I.E., recorded national unemployment rate at 7.97% in April, at 11.09% in May. Unemployment in rural is increased from 7.13% in April, 2021 to 10.63% in May." Rural employment scheme ನಲ್ಲಿ MNREGA ಈ ಸರ್ಕಾರವಾಗಲಿ ಮತ್ತು ಕೇಂದ್ರ ಸರ್ಕಾರದವರಾಗಲಿ ಒಪ್ಪುವುದಕ್ಕೆ ತಯಾರಿರಲಿಲ್ಲ. ಇವತ್ತು ಅದೊಂದೇ ಒಂದು ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡುವಂತಹ ಒಂದು ಮಾಧ್ಯಮ ಇರುವಂತಹದ್ದಾಗಿದೆ. ಅದರಲ್ಲಿಯೂ ಸಹ ಇದಕ್ಕೆ ಸರಿಯಾದ ಹಣಕಾಸಿನ ವ್ಯವಸ್ಥೆ ಆಗುತ್ತಿಲ್ಲ. ಆದ್ದರಿಂದ, ಮಾನ್ಯ ಮಂತ್ರಿಗಳು ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ. ಬೆಂಗಳೂರು ನಗರದಲ್ಲಿ ಶೇಕಡ 4 ರಷ್ಟು ಮಾತ್ರ ಉದ್ಯೋಗವಕಾಶಗಳು ಸಿಗುವಂತಹದ್ದು ಆಗಿದೆ. ಬೆಂಗಳೂರು ಸಿಟಿಯ ಬಗ್ಗೆ ಹೇಳಿದ ಹಾಗೆ 'it was a city of opportunities.' Opportunities ಏಕೆ ಕಳೆದುಕೊಳ್ಳುತ್ತಿದ್ದಾರೆ. ಬೆಂಗಳೂರು ನಗರವನ್ನು ಎಷ್ಟೋ ಕಂಪನಿಗಳು ಬಿಟ್ಟು ಹೋಗಿದ್ದು, ಇದಕ್ಕೆ ಕಾರಣ ಏನೆಂಬುದನ್ನು ಮಾನ್ಯ ಮಂತ್ರಿಗಳು ಹುಡುಕಿ ಹೇಳಿದರೆ ಬಹಳ ಉತ್ತಮವಾಗಿರುತ್ತದೆ. ಆದ್ದರಿಂದ, ಬೆಂಗಳೂರು ನಗರದಲ್ಲಿ ನಿರುದ್ಯೋಗ ಹೆಚ್ಚು ಹೆಚ್ಚಾಗಿ ಆಗುತ್ತಿದೆ. ಕೋವಿಡ್-19ನ ಕಾರಣವನ್ನು ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲೋ ಒಂದು ಕಡೆ ತಪ್ಪು ನಡೆದಿದ್ದು, ಇದನ್ನು ಸರಿಪಡಿಸಿಕೊಂಡು ಹೋಗುತ್ತೇವೆ ಎನ್ನುವಂತಹ ಭರವಸೆಯನ್ನು ಸದನದಲ್ಲಿ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಡಾ|| ಸಿ.ಎನ್. ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಿದ ಹಾಗೆ ನಾವು ಉದ್ಯೋಗ ನಿರ್ಮಾಣ ಮಾಡುವವರು ಅಲ್ಲ. ಇರುವಂತಹ ಉದ್ಯೋಗಕ್ಕೆ ತರಬೇತಿ ಕೊಡುವಂತಹದ್ದು ಇದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಉದ್ಯೋಗಕ್ಕೋಸ್ಕರ ತರಬೇತಿಯನ್ನು ಕೊಡುತ್ತೇವೆ ಎನ್ನುವುದು ಸರಿಯಿಲ್ಲ ಎಂದು ಮಾನ್ಯ ಮಂತ್ರಿಗಳೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದಾರೆ. ಇಷ್ಟೊಂದು ಉದ್ಯೋಗವಕಾಶ ಕಡಿಮೆಯಾಗಬೇಕೆಂದರೆ ಕಾರಣ ಏನೆಂಬುದು ಬೇಕಲ್ಲವೇ? ಸರ್ಕಾರದವರು ಉದ್ಯೋಗ ಕೊಡುವುದಿಲ್ಲವೆಂಬುದು ನಮಗೆ ಗೊತ್ತಿದೆ. ಮಾನ್ಯ ಪ್ರಧಾನ ಮಂತ್ರಿಯವರು ಪಕೋಡ ಮಾರಾಟ ಮಾಡಿ ಎಂದು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇಷ್ಟು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ತರಬೇತಿಯನ್ನು ಕೊಡುತ್ತೀರಲ್ಲವೇ, ಏತಕ್ಕಾಗಿ ತರಬೇತಿಯನ್ನು ಕೊಡಲಾಗುತ್ತದೆ ಎಂಬುದನ್ನು ಹೇಳಿ. Skill development ಎಂದು ಹೇಳಿದರೆ ಇಷ್ಟು ದಿವಸ ಬೆಂಗಳೂರು ನಗರದಲ್ಲಿ ಇರಲಿಲ್ಲವೇ?

**ಡಾ|| ಸಿ.ಎನ್. ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ಉದ್ಯೋಗ ನಿರ್ಮಾಣ ವಿಚಾರವಾಗಿ ನನ್ನ ಇಲಾಖೆಗೆ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಮತ್ತು ಒಟ್ಟಾರೆ ವಿಚಾರವಾಗಿ ಕೇಳಿದಾಗ ಸರ್ಕಾರದಲ್ಲಿ ಉದ್ಯೋಗ ಹೇಗೆ ನಿರ್ಮಾಣವಾಗುತ್ತದೆ ಎನ್ನುವಂತಹ ಪ್ರಶ್ನೆಗೆ ಉತ್ತರವಾಗಿ ಇವತ್ತಿನ ದಿವಸ ಕೌಶಲ್ಯತೆ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗೆ ಸಂಬಂಧವಾಗಿ ಯಾವುದೇ ಒಂದು ಕೌಶಲ್ಯತೆಗೆ ಸಂಬಂದಪಟ್ಟಂತೆ ಏನು ತರಬೇತಿಯನ್ನು ಕೊಡುತ್ತಿದ್ದೇವೆ ಎನ್ನುವುದಕ್ಕೆ ಪ್ರಸ್ತುತವಾಗಿ ಉತ್ತರ ಕೊಡುವಂತಹದ್ದು ಆಗುತ್ತದೆ. ಅದರ ಜೊತೆಯಲ್ಲಿ ಇದರ ಬಗ್ಗೆ ಇವತ್ತು ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ.

(ಮುಂದು)

**(638) 1:00 ಎಸ್‌ಪಿಆರ್-ಎಂಡಿ 13/09/2021**

(ಸಭಾಪತಿಯವರ ಉಪಸ್ಥಿತಿ)

**ಡಾ|| ಸಿ.ಎಸ್.ಅಶ್ವಥ ನಾರಾಯಣ(ಮುಂದು):-**

ಮುಖ್ಯವಾಗಿ ಇಡೀ ದೇಶದಲ್ಲಿ ಯಾವುದಾದರೂ ರಾಜ್ಯದಲ್ಲಿ ಮುಂಚೂಣಿಯಲ್ಲಿ ಆರ್ಥಿಕ ಚೇತರಿಕೆಯಾಗಿದೆ ಎಂದರೆ ಅದು ನಮ್ಮ ಕರ್ನಾಟಕ ರಾಜ್ಯವಾಗಿದ್ದು, ನಮ್ಮ ರಾಜ್ಯದಲ್ಲಿ ಬಹಳ ವೇಗವಾಗಿ ಆರ್ಥಿಕ ಚೇತರಿಕೆಯಾಗಿದೆ. ಇದಕ್ಕೆ ಕಾರಣಗಳು ತೆರಿಗೆ ಸಂಗ್ರಹ, ಜಿ.ಎಸ್.ಟಿ. ಮತ್ತು ನೇರ ತೆರಿಗೆ ಸಂಗ್ರಹಣೆಗಳಾಗಿವೆ. ದೇಶದ ಇನ್ನಿತರೆ ನಗರಗಳ ಆರ್ಥಿಕ ಚೇತರಿಕೆಯು ಕುಂಠಿತವಾಗಿದ್ದು, ಸುಧಾರಣೆಯಾಗಲು ಬಹಳಷ್ಟು ಸಮಯವನ್ನು ತೆಗೆದುಕೊಂಡಿವೆ. ಆರ್ಥಿಕ ಚೇತರಿಕೆಯಲ್ಲಿ lives and livelihood ಗಳಿಗೆ ಸ್ಪಂದಿಸುವ ಸರ್ಕಾರ ನಮ್ಮ ಸರ್ಕಾರವಾಗಿದೆ. ಈ ಎರಡೂ ರೀತಿಯ ಸಮಸ್ಯೆಗಳನ್ನು ಬಗೆಹರಿಸುವಂತಹ ಕೆಲಸಗಳನ್ನು ಪ್ರಸ್ತುತ ನಮ್ಮ ಸರ್ಕಾರವು ಮಾಡಿದೆ. ನಮ್ಮ ರಾಜ್ಯದಲ್ಲಿ ಆರ್ಥಿಕ ಚೇತರಿಕೆ ಚೆನ್ನಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿದ್ದು, ಉದ್ಯೋಗಾವಕಾಶಗಳೂ ಸಹ ಉತ್ತಮ ರೀತಿಯಲ್ಲಿ ಸೃಷ್ಟಿಯಾಗಿ, ಇದರ ಪ್ರಮಾಣವು ಜಾಸ್ತಿಯಾಗುತ್ತಿವೆ. ಹೀಗಾಗಿ ಮುಂದಿನ ದಿನಗಳಲ್ಲಿ ಪ್ರಸ್ತುತ ಪ್ರಶ್ನೆಯ ಬಗ್ಗೆ ಉಲ್ಲೇಖಿಸಿ, ಚರ್ಚಿಸುವಂತೆ ಸದಸ್ಯರಿಗೆ ಹೇಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೌಕರಿ ಡಾಟ್ ಕಾಮ್ ಅಂತರ್ಜಾಲ ಕುರಿತಾದ ವಿವರವನ್ನು ಪಡೆದುಕೊಂಡು, ಉತ್ತರ ನೀಡಿದರಾಯಿತು.

**ಡಾ||ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಅದೊಂದೇ ಉದ್ದೇಶವನ್ನು ಪರಿಗಣಿಸುವುದಕ್ಕಾಗುತ್ತದೆಯೇ?

**ಸಭಾಪತಿಯವರು:-** ಈ ವಿಚಾರದಲ್ಲಿ ಸಚಿವರು ಸದಸ್ಯರ ಸಲಹೆಯನ್ನು ಪಡೆಯಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಚಿವರನ್ನು ನಾವು ವೈಯಕ್ತಿಕವಾಗಿ ಆಪಾದಿಸುತ್ತಿಲ್ಲ. ಸರ್ಕಾರಿ ಮಟ್ಟದಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಿರುವುದಾಗಿ ಸಚಿವರು ತಿಳಿಸಿದ್ದು, ಅದರಿಂದ ಜನರಿಗೆ ಅನುಕೂಲವಾಗಬೇಕು. ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ನೀಡಬಾರದು.

**ಡಾ||ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ತಪ್ಪು ಮಾಹಿತಿಯನ್ನು ನೀಡುವುದಕ್ಕೆ ಹೊರಟಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಬೇರೆ ವಿಚಾರವಾಗಿದೆ.

**ಡಾ|| ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಅದು ಬೇರೆಯ ವಿಚಾರ ಹೇಗೆ ಆಗುತ್ತದೆ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಕೇವಲ ಶೇಕಡಾ 4 ರಷ್ಟು ಮಾತ್ರವೇ ಆರ್ಥಿಕ ಚೇತರಿಕೆಯಾಗಿದೆ. ಆದರೆ ಹೈದರಾಬಾದ್ ನಗರದಲ್ಲಿ ಇದು ಶೇಕಡಾ 49 ರಷ್ಟಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಬೇರೆ ನಗರಗಳನ್ನು ಬೆಂಗಳೂರು ನಗರಕ್ಕೆ ಹೋಲಿಸುವುದು ಬೇಡ. ಬೆಂಗಳೂರು ನಗರವು ಇಡೀ ವಿಶ್ವದಲ್ಲಿಯೇ ಅತೀ ವೇಗದಲ್ಲಿ ಮುಂದೆ ಸಾಗುತ್ತಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ಈ ವಿಚಾರದಲ್ಲಿ ಅಂಕಿ-ಅಂಶಗಳನ್ನು ನೀಡಲಿ.

**ಡಾ|| ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಅಂಕಿ-ಅಂಶಗಳ ವಿಚಾರದಲ್ಲಿ ನಾವು ಮಾತನಾಡೋಣ. **(ಗೊಂದಲ)** ಮಾನ್ಯ ಸದಸ್ಯರು ನನ್ನ ಇಲಾಖೆಗೆ ಸಂಬಂಧಿತ ವಿಚಾರಗಳನ್ನು ಕೇಳುತ್ತಿದ್ದಾರೆ. ಸರ್ಕಾರವು ನೀಡಿರುವ ಉತ್ತರದಲ್ಲಿ ದಾರಿ ತಪ್ಪಿಸುವಂತಹ ವಿಚಾರಗಳಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಸದಸ್ಯರಿಂದ ಮಾಹಿತಿಯನ್ನು ಪಡೆದುಕೊಳ್ಳಲಿ.

**ಶ್ರೀ ಎಸ್.ಆರ್.ಪಾಟೀಲ್(ಮಾನ್ಯ ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೈದರಾಬಾದ್ ನಗರವನ್ನು ಹೋಲಿಸಿ, ಮಾತನಾಡುತ್ತಿದ್ದಾರೆ. ಅಲ್ಲಿ ಶೇಡಕಾ 49 ರಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿದ್ದು, ಇಲ್ಲಿ ಕಡಿಮೆ ಪ್ರಮಾಣ ಏಕೆ ಎಂಬುದಾಗಿ ಸದಸ್ಯರು ಕೇಳುತ್ತಿದ್ದಾರೆ. ಆದ್ದರಿಂದ ತಾವು ಪ್ರಸ್ತುತ ಪ್ರಶ್ನೆಯನ್ನು ಮುಂದೂಡುವುದು ಸೂಕ್ತವೆನಿಸುತ್ತದೆ. ಏಕೆಂದರೆ, ಸರ್ಕಾರವು ಇನ್ನೊಮ್ಮೆ ಉತ್ತರಿಸಲಿ. Let him take time.

**ಸಭಾಪತಿಯವರು:-** ಎಲ್ಲಾ ವಿಚಾರಗಳನ್ನು ಬರೆಸಿರುವುದಾಗಿ ಸಚಿವರು ಹೇಳುತ್ತಿದ್ದು, ಅವರ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರವೇ ಉತ್ತರಿಸಿದ್ದಾರೆ. ಇನ್ನುಳಿದ ವಿಚಾರಗಳ ಬಗ್ಗೆ ಚರ್ಚೆಯನ್ನು ಮಾಡಲಿ.

**ಡಾ||ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಪ್ರಶ್ನೆಗೆ ಸಂಬಂಧಪಟ್ಟಂತೆ ಸರ್ಕಾರವು ಉತ್ತರಿಸಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನನಗೂ ಸಹ ಬಹಳ ಆಘಾತವಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸರ್ಕಾರವು ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೃದಯ ವಿದ್ರಾವಕವಾದ ಉತ್ತರವನ್ನು ನೀಡಿದೆ. We consider Bengaluru as 'IT Capital' or 'Knowledge Hub' ಎಂದು ನಾವು ತಿಳಿದಿದ್ದೇವೆ. ಇಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗಿರುವ ಬಗ್ಗೆ ಸಚಿವರು ಇನ್ನೊಮ್ಮೆ ಚರ್ಚೆ ಮಾಡಿದ ನಂತರ ಉತ್ತರವನ್ನು ನೀಡಲಿ.

**ಡಾ||ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ನಾವು ತರಬೇತಿಗಳನ್ನೂ ಸಹ ನೀಡಿದ್ದೇವೆ. ಪ್ರಸ್ತುತ ಕಾಲದ ಬೇಡಿಕೆ ಮತ್ತು ಪೂರೈಕೆಗಳ ಆಧಾರದ ಮೇಲೆ ತರಬೇತಿಗಳನ್ನು ನೀಡಿ ನಮ್ಮ ರಾಜ್ಯದಲ್ಲಿ ಎಲ್ಲರಿಗೂ ಉದ್ಯೋಗ ದೊರೆಯುವ ರೀತಿಯಲ್ಲಿ ನಾವು ಮಾಡುತ್ತೇವೆ. ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದ ವತಿಯಿಂದ ರೂಪಿಸಲಾಗಿದ್ದು, ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 098**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಒದಗಿಸಿರುವ ಉತ್ತರವು ಸಮಾಧಾನಕರವಾಗಿಲ್ಲ. ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಅನೇಕ ಹಳೆಯ ಶಾಲಾ ಕಟ್ಟಡಗಳನ್ನು ನೆಲಸಮಗೊಳಿಸದೆ, ಮಕ್ಕಳಿಗೆ ಅಪಾಯ ಸೂಚಿಸುವ ಹಳೆಯ ಕಟ್ಟಡಗಳಲ್ಲಿಯೇ ಶಿಕ್ಷಣ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಇಲ್ಲವೆಂದು ಉತ್ತರಿಸುತ್ತಾ, 'ಅಪಾಯಕಾರಿ ಕಟ್ಟಡದಲ್ಲಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ'ವೆಂದು ಲಿಖಿತ ಉತ್ತರದಲ್ಲಿ ತಿಳಿಸಿರುತ್ತದೆ. ಜೋಯಿಡಾ ತಾಲ್ಲೂಕು ಗುಡ್ಡಗಾಡು ಪ್ರದೇಶಗಳಿಂದ ಕೂಡಿದ ಹಿಂದುಳಿದ ತಾಲ್ಲೂಕಾಗಿದೆ. ಮಳೆಗಾಲದಲ್ಲಿ ಮತ್ತು ಅತಿವೃಷ್ಟಿಯಿಂದಾಗಿ ತಾಲ್ಲೂಕಿನಲ್ಲಿ ಈಗಾಗಲೇ ಬಹಳಷ್ಟು ಹಾನಿಯಾಗಿದೆ. ಕೇವಲ 7 ಕಟ್ಟಡಗಳನ್ನು ಮಾತ್ರವೇ ನೆಲಸಮಗೊಳಿಸಿದ್ದು, 14 ಕಟ್ಟಡಗಳನ್ನು ದುರಸ್ತಿಗೊಳಿಸಲು ಇಲಾಖೆಯಿಂದ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳುತ್ತಿರುವುದು ಬಹಳ ಸರಿಯಾಗಿದೆ. ಇದರ ಬಗೆಗಿನ ಮಾಹಿತಿಯು ನನಗೂ ಸಹ ಬರುತ್ತಿದೆ. ಜೋಯಿಡಾ ತಾಲ್ಲೂಕಿನಲ್ಲಿ ಬಹಳ ಕಷ್ಟದ ಕೆಲಸಗಳಿದ್ದು, ಅಲ್ಲಿ ಬಹಳವಾಗಿ ಮಳೆಯಾಗುತ್ತದೆ. ಈ ರೀತಿಯಾಗಿ ಹಿಂದೊಮ್ಮೆಯೂ ಸಹ ಆಗಿತ್ತು. ಅಲ್ಲಿನ ಶಾಲಾ ಕಟ್ಟಡಗಳು ಬಿದ್ದು ಹೋಗಿವೆ. ಆದರೆ ಇದು ಪುನರಾವರ್ತನೆಯಾಗಬಾರದು. ಹೀಗಾಗಿ ಸಚಿವರು ತಕ್ಷಣವೇ ಸದಸ್ಯರು ಹೇಳಿದಂತೆ, ಇದರ ಬಗ್ಗೆ ಕ್ರಮ ವಹಿಸಲಿ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಅಪಾಯದ ಅಂಚಿನಲ್ಲಿರುವ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು ಎಂದು ಕೇಳಿರುವ ಪ್ರಶ್ನೆಗೆ, ದುರಸ್ಥಿಗೊಳಿಸಬೇಕಾದ ಶಾಲೆಗಳ ಸಂಖ್ಯೆ 42 ಮತ್ತು ಕೊಠಡಿಗಳ ಸಂಖ್ಯೆ 98 ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಅಂದರೆ ಒಟ್ಟಾರೆ ದುರಸ್ಥಿಗೊಳಿಸಬೇಕಾದ ಶಾಲೆ ಮತ್ತು ಕೊಠಡಿಗಳ ಸಂಖ್ಯೆ 140 ಆಗುತ್ತದೆ. ಜೋಯಿಡಾ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ದುರಸ್ಥಿ ವಿಚಾರವಾಗಿ ಹೇಳುವುದಾದರೆ, ಅಲ್ಲಿನ ನುಜ್ಜಿಪಾಟ್ನೆ, ಉಂಬಗಾವಂ, ಪುರಾಂ, ಪುಂಡಲ, ಕೇಲೋಹಳ್ಳಿ, ಕಾಳಸಿಂಗ, ಡಿಗ್ಗಿ, ಉಂಡೆವಲ್ಲಿ, ದೂಧ್‌ಮಾಳ್ ಸೇರಿದಂತೆ ಇನ್ನೂ ಹಲವಾರು ಪ್ರದೇಶಗಳಲ್ಲಿ ಬಹಳ ಹಳೆಯ ಕಟ್ಟಡಗಳಿವೆ. ನಾನು ಸ್ವತಃ ಸ್ಥಳಕ್ಕೆ ಭೇಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿ ಪರಿಶೀಲಿಸಿದ್ದೇನೆ. ಅಲ್ಲಿನ ಗೋಡೆಗಳು ಬಹಳ ತೇವಗೊಂಡಿದ್ದು, ಅವುಗಳು ಯಾವಾಗ ನೆಲಸಮಗೊಳ್ಳುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಸಚಿವರು ಸೂಕ್ತ ಕ್ರಮಗಳನ್ನು ತೆಗೆದುಕೊಂಡರೆ, ಒಳ್ಳೆಯದಾಗುತ್ತದೆ. ಅಲ್ಲಿ ಕೇವಲ ಎರಡು ಪ್ರೌಢ ಶಾಲೆಗಳಿದ್ದು, ಅಲ್ಲಿನ 4 ಕೊಠಡಿಗಳ ದುರಸ್ಥಿಯಾಗಬೇಕೆಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದ್ದು, ಅವುಗಳನ್ನು ದುರಸ್ಥಿಗೊಳಿಸಬೇಕು.

**ಸಭಾಪತಿಯವರು:-** ಒಟ್ಟಾರೆಯಾಗಿ ದುರಸ್ಥಿಗೊಳ್ಳಬೇಕಾದ ಕೊಠಡಿಗಳ ಸಂಖ್ಯೆಯನ್ನು ತಿಳಿಸಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಮಕ್ಕಳ ಹಿತದೃಷ್ಟಿಯಿಂದ ದುರಸ್ಥಿ ಕಾರ್ಯವನ್ನು ಎಷ್ಟು ಕಾಲಾವಧಿಯೊಳಗೆ ಕೈಗೊಳ್ಳಲಾಗುವುದು ಎಂದು ಕೇಳಿರುವ ಪ್ರಶ್ನೆಗೆ, ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆಗೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಶಾಲಾ ಕೊಠಡಿ ದುರಸ್ಥಿ ಕಾರ್ಯ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಆದರೆ, ಅಲ್ಲಿನ ಶಾಲಾ ಕೊಠಡಿಗಳು ಹಂತ ಹಂತವಾಗಿ ದುರಸ್ಥಿಗೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅಲ್ಲಿನ ಪರಿಸ್ಥಿತಿಯನ್ನು ನಾನು ಖುದ್ದು ನೋಡಿದ್ದೇನೆ. ಜೋಯಿಡಾ ತಾಲ್ಲೂಕಿನಲ್ಲಿ ಯಾವ ರೀತಿಯಾಗಿ ಮಳೆ ಬರುತ್ತದೆ ಮತ್ತು ಅತಿವೃಷ್ಟಿಯಿಂದಾಗಿ ಅಲ್ಲಿನ ಶಾಲಾ ಕಟ್ಟಡಗಳ ಪರಿಸ್ಥಿತಿಗಳ ಬಗ್ಗೆ ತಮಗೂ ಸಹ ತಿಳಿದಿದೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಕಳೆದ ಮೂರು ವರ್ಷಗಳಿಂದ ಅಲ್ಲಿ ಮಳೆ ಜಾಸ್ತಿಯಾಗಿರುವುದು ವಾಸ್ತವ ಸಂಗತಿಯಾಗಿದೆ. ಅತಿವೃಷ್ಟಿಯಿಂದಾಗಿ ಅಲ್ಲಿನ ಬಹಳಷ್ಟು ಶಾಲಾ ಕಟ್ಟಡಗಳು ದುರಸ್ಥಿಗೊಳ್ಳಬೇಕಾದ ಅವಶ್ಯಕತೆ ಇದೆ. 102 ಪ್ರಾಥಮಿಕ ಶಾಲೆ ಮತ್ತು 4 ಪ್ರೌಢ ಶಾಲೆಗಳ ಕೊಠಡಿಗಳು ದುರಸ್ಥಿಗೊಳ್ಳಬೇಕಾಗಿವೆ. ಆದರೆ, ಕಳೆದ ಮೂರು ವರ್ಷಗಳಿಂದ 102 ಕೊಠಡಿಗಳ ದುರಸ್ಥಿಗೊಳಿಸಲಾಗಿದ್ದು, 20 ಹೊಸ ಕೊಠಡಿಗಳ ನಿರ್ಮಾಣ ಕಾರ್ಯಕ್ಕೆ ಅನುಮತಿ ನೀಡಲಾಗಿದ್ದು, ಕಟ್ಟಡ ನಿರ್ಮಾಣ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ.

**ಸಭಾಪತಿಯವರು:-** ಸಚಿವರೇ, ಈ ವಿಚಾರದಲ್ಲಿ ತಾವು ಇನ್ನೊಮ್ಮೆ ತಪಾಸಣೆ ಮಾಡಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಕೆಲಸಗಳನ್ನು ಮಾಡುವ ಪ್ರಯತ್ನ ಮಾಡಲಾಗುವುದು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಈ ವಿಚಾರದಲ್ಲಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಬೇಕು. ಅಲ್ಲಿನ ವಿದ್ಯಾರ್ಥಿಗಳಿಗೆ ಏನಾದರೂ ಆದರೆ, ಯಾರು ಜವಾಬ್ದಾರರಾಗುತ್ತಾರೆ ಎಂದು ಕೇಳಲಿಚ್ಛಿಸುತ್ತೇನೆ.

**ಸಭಾಪತಿಯವರು:-** ಅದಕ್ಕೆ ಸರ್ಕಾರವು ಜವಾಬ್ದಾರವಾಗಿದ್ದು, ದುರಸ್ತಿ ಕೆಲಸಗಳನ್ನು ಮಾಡುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 289**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಎಂ.ಫಾರೂಖ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ಒದಗಿಸಿರುವ ಉತ್ತರವು ಸಮಾಧಾನಕರವಾಗಿಲ್ಲ. ಈ ವಿಚಾರದಲ್ಲಿ ವ್ಯವಸ್ಥಿತ ಮತ್ತು ಸಮಗ್ರವಾದ ಪರಿಹಾರ ನೀಡುವ ಉದ್ದೇಶದಿಂದ ತಮ್ಮ ಅಧ್ಯಕ್ಷತೆಯಲ್ಲಿ ಎಲ್ಲಾ ಅಸೋಸಿಯೇಷನ್‌ಗಳ ಸಭೆಯನ್ನು ಮಾಡುವ ಬಗ್ಗೆ ಸಭಾನಾಯಕರು ಕಳೆದ ಆರು ತಿಂಗಳುಗಳ ಹಿಂದೆ ಇದೇ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ತಿಳಿಸಿದ್ದರು. ಆದರೆ ಇದು ಕಾರ್ಯಗತವಾಗಿಲ್ಲ. ಆದರೆ ಈಗ ಕೇಳಿರುವ ಪ್ರಶ್ನೆಗೆ ಅದೇ ಉತ್ತರವನ್ನು ನೀಡಿದ್ದಾರೆ. ಈ ವಿಚಾರದಲ್ಲಿ ಸಂಕ್ಷಿಪ್ತವಾಗಿ ಚರ್ಚೆ ಮಾಡಬೇಕು ಏಕೆಂದರೆ, ಇದು ಹೂಡಿಕೆಯ ಪ್ರಶ್ನೆಯಾಗಿದೆ. ಬಹಳಷ್ಟು ಹೂಡಿಕೆದಾರರು ಅದರಲ್ಲೂ ವಿಶೇಷವಾಗಿ ನವೀಕರಿಸಬಹುದಾದ ಇಂಧನದ ವಿಚಾರದಲ್ಲಿ ಹೂಡಿಕೆ ಮಾಡಬೇಕು. ನಮ್ಮ ದೇಶದಲ್ಲಿ 2022 ಇಸ್ವಿಯೊಳಗಾಗಿ ಒಟ್ಟಾರೆಯಾಗಿ 175 ಗಿಗಾವ್ಯಾಟ್ ಇಂಧನ ಉತ್ಪಾದನೆಯ ಗುರಿಯನ್ನು ಹೊಂದಿದೆ. ಆ ಪೈಕಿ ಈಗಾಗಲೇ ಸುಮಾರು 60 ಗಿಗಾವ್ಯಾಟ್ ಇಂಧನವನ್ನು ಪವನ ವಿದ್ಯುತ್ ಪ್ರಕ್ರಿಯೆಯಲ್ಲಿ ಉತ್ಪಾದಿಸಬೇಕಾಗುತ್ತದೆ. ಆದರೆ ನಾವು ಈಗ ಕೇವಲ 39.25 ಗಿಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿಯನ್ನು ಮಾತ್ರವೇ ತಲುಪಿದ್ದೇವೆ. ಮುಂದಿನ ಒಂದು ವರ್ಷದಲ್ಲಿ 1,250 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬೇಕಾಗಿದೆಯಾದರೂ, ಅದು ಸಾಧ್ಯವಿಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಬ್ಯಾಂಕಿಂಗ್ ಫೆಸಿಲಿಟಿಯನ್ನು ಅನುಮತಿಸುವುದಾಗಿ ಸರ್ಕಾರವು ತಿಳಿಸಿದೆ. KERC (*Karnataka Electricity Regulatory Commission)* ಸಂಸ್ಥೆಯವರು ದಿನಾಂಕ 07/09/2021 ರಂದು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಅದರಲ್ಲಿ, ನ್ಯಾಯಾಲಯದ ಆದೇಶದನ್ವಯ ದಿನಾಂಕ 31/03/2020 ರ ವರೆಗೆ ಅದನ್ನು ಮುಂದುವರೆಸಲಾಗುವುದು ಎಂದು ತಿಳಿಸಿದೆ.

(ಮುಂದು)

(639) 13-09-2021 ಸಿಎಸ್/ಎಂಡಿ 01.10

**ಶ್ರೀ ಬಿ.ಎಂ. ಫಾರೂಖ್**(ಮುಂದು):-

ಇದರಲ್ಲಿ ಏನಾಗಿದೆ ಎಂದರೆ, particularly for a wind power project banking facility is required. Highest power generation will be done from May to

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

September month. That coincides with the south-west monsoon. ಬಾಕಿ ಅವಧಿ lull period ಆಗಿರುತ್ತದೆ.. Lull period ನಲ್ಲಿ ಜನರೇಷನ್ ಕೇವಲ ಶೇಕಡ ೨೫ ರಷ್ಟಿತ್ತು. ಅಷ್ಟು ಫೆಸಿಲಿಟಿ ಇಲ್ಲ. ನಾವು ಒಂದು ಮೆಗಾ ವ್ಯಾಟ್‌ಗೆ ಸುಮಾರು 30 ಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಆಗುವುದಾದರೆ ಮೇ ನಿಂದ ಸೆಪ್ಟೆಂಬರ್ ತಿಂಗಳ ವರೆಗೆ 70-75 ಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ಆಗುತ್ತದೆ. ಆಗ ನಾವು ಅದನ್ನು ಬ್ಯಾಂಕಿಂಗ್ ಮಾಡಬೇಕಾಗುತ್ತದೆ. ಈಗ ಇರುವ ಈ banking facility uncertain ಇರುವಾಗ indefinite ಆಗಿ banking facility ಮಾಡುವಂತಹ policy ಮಾಡದಿದ್ದರೆ ಬಂಡವಾಳ ಹಾಕಿರುವವರು ಬಹಳಷ್ಟು ಜನ NPA (Non-Performing Asset) ಆಗಿದ್ದಾರೆ. ಹಾಗೂ ಅದು ವಾಸ್ತವವಾಗಿ viability ಆಗುವುದಿಲ್ಲ. ಹೂಡಿಕೆದಾರರಿಗೂ ಸಹ uncertain ಇರುವಾಗ ಹೂಡಿಕೆ ಹೇಗೆ ಮಾಡುವುದು ಎನ್ನುವ ಪ್ರಶ್ನೆ ಅವರಿಗೆ ಬರುತ್ತಿದೆ. ಇತ್ತೀಚೆಗೆ ಕೆಇಆರ್‌ಸಿ ಮಧ್ಯಂತರ ಆದೇಶದಲ್ಲಿ banking facility ಆದೇಶ ಮಾಡಿರುತ್ತಾರೆ. ಸೋಲಾರ್‌ನಿಂದ ಬೇಸಿಗೆ ಕಾಲದಲ್ಲಿ day time ನಲ್ಲಿ ಬೆಳಗ್ಗಿನಿಂದ ಸಂಜೆಯವರೆವಿಗೂ ವಿದ್ಯುತ್ ಉತ್ಪಾದನೆ ಆಗುತ್ತದೆ. ಮಾನ್‌ಸೂನ್‌ನಲ್ಲಿ ವಿಂಡ್ ಬರುವಾಗ ವಿದ್ಯುತ್ ಉತ್ಪಾದನೆ ಆಗುತ್ತದೆ. Banking facility should be given indefinitely on any of this wind project. ಅದಕ್ಕಾಗಿ ಸರ್ಕಾರ ಒಂದು ನಿರ್ದಿಷ್ಟ ಪಾಲಿಸಿಯನ್ನು ಮಾಡಿದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಸಚಿವರು ಹೊಸದಾಗಿ ಇಂಧನ ಸಚಿವರಾಗಿ ಬಂದಿದ್ದಾರೆ. ಇಂಧನ ಖಾತೆ ಒಂದು powerful portfolio. ಇದನ್ನೆಲ್ಲ ಆಳವಾಗಿ ಅಧ್ಯಯನ ಮಾಡಲು ಅವರಿಗೂ ಸ್ವಲ್ಪ ಸಮಯ ಬೇಕಾಗಬಹುದು.

**ಶ್ರೀ ಸುನೀಲ್ ಕುಮಾರ್ :-** ಮಾನ್ಯ ಸಭಾಪತಿಯವರೆ, ನವೀಕರಿಸಬಹುದಾದ ಇಂಧನಗಳ ಉತ್ಪಾದನೆಯಲ್ಲಿ ನಮ್ಮ ರಾಜ್ಯ ದೇಶದಲ್ಲಿಯೇ ಮೊದಲನೇ ಸ್ಥಾನದಲ್ಲಿದೆ. ಈಗಾಗಲೇ ನಮ್ಮ ರಾಜ್ಯ 15193 ಮೆಗಾವ್ಯಾಟ್ ವಿದ್ಯುತ್ತನ್ನು renewable energy ಯಲ್ಲಿ ನಾವು ಉತ್ಪಾದನೆ ಮಾಡುತ್ತಿದ್ದೇವೆ. ಬೇಡಿಕೆಯಲ್ಲಿ 50% ವಿದ್ಯುತ್ renewable energy ಯಲ್ಲಿಯೇ ಉತ್ಪಾದನೆ ಆಗುತ್ತಿರುವುದು. ಈ ಹಿನ್ನಲೆಯಲ್ಲಿ ಯಾವ್ಯಾವ ಉಪಕರ್ಮಗಳನ್ನು ಕೈಗೊಳ್ಳಬಹುದು ಎನ್ನುವುದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಮಾನ್ಯ ಸದಸ್ಯರು ಪ್ರಮುಖವಾಗಿ banking and wheeling ನಲ್ಲಿ ಅವಕಾಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ನಮಗೆ ಈಗಾಗಲೇ RPO (Renewable Purchasable Obligation) ನಲ್ಲಿ ನಾವು ನಮ್ಮ ಗುರಿಯನ್ನು ಮುಟ್ಟಿದ್ದೇವೆ. ಹೊಸ ಇಂಧನವನ್ನು renewable energy ಯಲ್ಲಿ ಖರೀದಿ ಮಾಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಆದರೆ ಮೊನ್ನೆಯ ದಿವಸ KERC *(Karnataka Electricity Regulatory Commission)* ಯವರು ಒಂದು ಆದೇಶವನ್ನು ಮಾಡಿದ್ದಾರೆ. KERC ಆದೇಶವನ್ನು ಪರಿಶೀಲಿಸಿ, ಬ್ಯಾಂಕಿಂಗ್ ಮಾಡವ ವಿಚಾರದಲ್ಲಿ ಏನೇನು ಕ್ರಮ ಕೈಗೊಳ್ಳಬಹುದು ಎನ್ನುವುದನ್ನು ಪರಿಶೀಲಿಸಲು ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರ ಜೊತೆಯಲ್ಲಿ ವೈಯುಕ್ತಿಕವಾಗಿ ಕುಳಿತು ಮಾತನಾಡಿ, ಅದನ್ನು ಯಾವ ರೀತಿ ಪರಿಹರಿಸ ಬಹುದು ಎನ್ನುವುದನ್ನು ವಿಚಾರ ಮಾಡುತ್ತೇನೆ.

**ಶ್ರೀ ಬಿ.ಎಂ. ಫಾರೂಖ್**:- ಮಾನ್ಯ ಸಭಾಪತಿಗಳೇ, ನನ್ನ ಮತ್ತೊಂದು ಪ್ರಶ್ನೆ ಏನೆಂದರೆ ಮಾನ್ಯ ಸಚಿವರು ಹೇಳಿದಂತೆ RPO (Renewable Purchase Obligation) ಅನ್ನು ನಾವು ಈಗಾಗಲೇ reach ಮಾಡಿದ್ದೇವೆ. ತಮ್ಮ ಕೇಂದ್ರ ಸರ್ಕಾರದ ಪಾಲಿಸಿ ಪ್ರಕಾರ ನಮ್ಮ ರಾಜ್ಯದಲ್ಲಿ2022ರ ಒಳಗೆ 175 ಗಿಗಾ ವ್ಯಾಟ್ ಉತ್ಪಾದನೆ ಆಗಬೇಕಾಗುತ್ತದೆ. RPO (Renewable Purchase Obligation) ಇದಕ್ಕೂ ಯಾವುದೇ connection ತೆಗೆದುಕೊಳ್ಳುವುದು ಬೇಡ. State can independently increase the RPO obligation. ಆ ರೀತಿಯಲ್ಲಿಯೇ ಮಾಡಬೇಕೆಂದು ಏನೂ ಇಲ್ಲ. ರಾಜ್ಯಕ್ಕೆ 175 ಗಿಗಾ ವ್ಯಾಟ್ ಗುರಿಯನ್ನು ಕೊಟ್ಟಿರುವಾಗ why you want to depend on the RPO obligation? Does it make any sense? ಎನ್ನುವುದು ನನ್ನ ಮೊದಲನೇ ಪ್ರಶ್ನೆ. ನಮ್ಮ ದೇಶದಲ್ಲಿ ಮಾರ್ಚ್ 2019ಕ್ಕೆ 35600 ಮೆ.ವ್ಯಾಟ್ wind power ಉತ್ಪಾದನೆ ಆಗಿದ್ದು, ಅದರಲ್ಲಿ as of 31st March 2021it is 39250 MW ವಿಂಡ್‌ನಲ್ಲಿ ವಿದ್ಯುತ್ ಉತ್ಪಾದನೆ ಆಗಿದೆ. ಸುಮಾರು 244 ಮೆ.ವ್ಯಾಟ್ ಅಂದರೆ ಉತ್ಪಾದನಾ ಸಾಮರ್ಥ್ಯ, from last two years it is hardly 122 MW per year. ಅಂದರೆ ಕ್ರಮೇಣ ಉತ್ಪಾದನಾ ಸಾಮರ್ಥ್ಯ ಕಡಿಮೆ ಆಗುತ್ತಾ ಬಂದಿದೆ. The main reason for this decrease is banking facility. ಆದ್ದರಿಂದ ಸರ್ಕಾರ RPO obligation ಗೆ depend on ಆಗಬಾರದು. ತಮ್ಮದೇ ಪಕ್ಷದ ಆಡಳಿತ ಕೇಂದ್ರದಲ್ಲಿ ಇರುವುದರಿಂದ ನೀತಿ ಆಯೋಗದ ಪ್ರಕಾರ there should be total

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

capacity of 60 GW wind power by 2022. ಮುಖ್ಯವಾಗಿ ಪ್ಯಾರಿಸ್ ಅಗ್ರಿಮೆಂಟಿನಲ್ಲಿ ನಮ್ಮ ಭಾರತದೇಶ, as per our commitment, around 40 percent of the energy is being produced only by the renewable energy ಎಂದು ನಮ್ಮ ದೇಶ ಆಶ್ವಾಸನೆಯನ್ನು ಕೊಟ್ಟಿದೆ. ಈಗ ಹವಾಮಾನ ಮತ್ತು ಸೀಸನ್ ವೈಸ್ ಬದಲಾವಣೆಗಳಿಂದ Mount Alps is also melting. 2030ರಲ್ಲಿ ಎಲ್ಲಾ ತಾಪಮಾನvnfnu 1 ½ % ಕಡಿಮೆ ಮಾಡುವ ಉದ್ದೇಶದಿಂದ ಈ ನೀತಿಯನ್ನು ಜಾರಿಗೆ ತರಲಾಗುತ್ತಿದೆ. ನಮ್ಮ ಉತ್ಪಾದನೆ 175 ಗಿಗಾ ವ್ಯಾಟ್ ಇರುವಾಗ ನೀವು RPO obligation ಬಗ್ಗೆ ಏಕೆ ಹೇಳುತ್ತಿದ್ದೀರಿ. ಈಗ feeding tariff ನಲ್ಲಿ PPA (Power Purchase Agreement) ಮಾಡುತ್ತಿಲ್ಲ. ನಾನು ಹೇಳುವ ಪ್ರಕಾರ ತಮ್ಮ ಕೇಂದ್ರ ಸರ್ಕಾರವೇ ದಿನಾಂಕ 12-01-2018ನಲ್ಲಿ ಎಲ್ಲಾ ರಾಜ್ಯಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದೆ. "....*it is therefore hereby clarified that the states UTs can consider procuring power from solar and wind projects of less that the defined threshold prescribed (25 MW for wind, 5 MW for solar) in the Competitive Bidding guidelines through feed-in-tariff to be determined by concerned State Electricity Regulatory Commission.* ಈಗ ನಿಮ್ಮ power cost as per KERC ಎಷ್ಟಿದೆ? ಮೊನ್ನೆ ನೀಡಿರುವ ಮಾರ್ಗಸೂಚಿ ಪ್ರಕಾರ ನಿಮ್ಮ ಟ್ಯಾರಿಫ್ ಪ್ರಕಾರ ಮಿನಿಮಮ್ 25 ಮೆವ್ಯಾ ಈ ವಿಂಡ್ ಪವರ್‌ಗೆ ಕೊಡಿ. ಏಕೆಂದರೆ, SECI (Solar Energy Corporation of India) projects are large projects, PGCIL (Power Grid Corporation of India Ltd) station ಗದಗ ಮತ್ತು ಕೊಪ್ಪಳದಲ್ಲಿ ಮಾತ್ರ ಇರುವುದು. ಬಾಕಿ ಕಡೆಗಳಲ್ಲಿ ಹಳ್ಳಿಗಳಲ್ಲಿ ಇದರಿಂದ ರೈತರಿಗೂ ಸಹ ಒಂದು ಬೆಲೆ ಸಿಗುತ್ತದೆ, ಸ್ಥಳೀಯವಾಗಿ ಉದ್ಯೋಗಾವಕಾಶಗಳು ದೊರೆಯುತ್ತದೆ. SECI ಯಲ್ಲಿರುವುದು white collar job. ಆದರೆ ಇಲ್ಲೆಲ್ಲ blue collar or brown collar job ದೊರೆಯುತ್ತದೆ. ಹಾಗಾಗಿ minimum cap ಅಂದರೆ ಕನಿಷ್ಠ 2-3 ಸಾವಿರ ಮೆ.ವ್ಯಾಟ್‌ಗಾಗಿ ಒಂದು feed-in-tariff ಗೆ ಅವಕಾಶ ಮಾಡಿ ಕೊಟ್ಟರೆ ಇದಕ್ಕೆ ಒಂದು ಶಾಶ್ವತ ಪರಿಹಾರ ಸಿಗುತ್ತದೆ. ಇದು ಹೀಗೆಯೇ ಮುಂದುವರೆದರೆ, its never going to end. Investors are in distress. ಈಗ ಮತ್ತೊಂದು ಮುಖ್ಯವಾದ ವಿಚಾರ ಏನೆಂದರೆ group captive and

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

captive ಎಂದು ಮಾಡಿದ್ದಾರೆ. 2019ರ ಮೇ ವರೆಗೆ ಇವೆರಡು ಕೂಡ ಒಂದೇ ಆಗಿತ್ತು. 2017ರಲ್ಲಿ ಒಂದು ಮಾರ್ಗ ಸೂಚಿಯನ್ನು ಬಿಡುಗಡೆ ಮಾಡಿದರು.

**ಶ್ರೀ ಆಯನೂರ್ ಮಂಜುನಾಥ್:-** ಮಾನ್ಯ ಸಭಾಪತಿಯವರೆ, ಇದು ಪ್ರಶ್ನೋತ್ತರವೋ, ಉಪನ್ಯಾಸವೋ?

**ಸಭಾಪತಿಯವರು**:- ಸಚಿವರೆ, ನೀವು ಉತ್ತರ ಕೊಡಿ.

**ಶ್ರೀ ಸುನೀಲ್ ಕುಮಾರ್**:- ಮಾನ್ಯ ಸಭಾಪತಿಗಳೇ, ಈ ವಿಚಾರದಲ್ಲಿ ನಮ್ಮ ಸರ್ಕಾರ ಖಂಡಿತಾ ಉದ್ದಿಮೆದಾರರ ಮತ್ತು ಗ್ರಾಹಕರ ಹಿತವನ್ನು ಕಾಪಾಡಲು ಬದ್ಧವಾಗಿದೆ. ಮಾನ್ಯ ಸದಸ್ಯರು ಬಹಳ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ನಾನು ಅವರ ಜೊತೆಯಲ್ಲಿ ಸಮಾಲೋಚಿಸಿ, ಯಾವ ಉಪಕರ್ಮಗಳನ್ನು ಕೈಗೊಳ್ಳಲು ಸಾಧ್ಯವೋ ಅದನ್ನೆಲ್ಲ ಮಾಡುವ ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 177**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಗಳೇ, ರಾಜ್ಯದಲ್ಲಿ ಸೌರಶಕ್ತಿ ವಿದ್ಯುತ್ ಮೇಲ್ಛಾವಣಿ – ಪ್ರೋತ್ಸಾಹಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು, ಇದರಿಂದ ರಾಜ್ಯದಲ್ಲಿ ಎಷ್ಟು ಮೆಗವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಏಕೆ ಕೇಳಿದೆ ಎಂದರೆ, hydro power and thermal power generate ಮಾಡಬೇಕಾದರೆ ಸಾವಿರಾರು ಕೋಟಿ ರೂಪಾಯಿಗಳ ಖರ್ಚಾಗುತ್ತದೆ. ಸೋಲಾರ್ ವಿದ್ಯುತ್ ಕಡಿಮೆ ವೆಚ್ಚದಲ್ಲಿ ಉತ್ಪಾದನೆ ಮಾಡಬಹುದಾದ್ದರಿಂದ ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದಾರೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಹೊಸದಾಗಿ ಸಚಿವರಾಗಿ ಬಂದಿರುವ ಇಂಧನ ಸಚಿವರಿಗೆ ನನ್ನ ಧನ್ಯವಾದಗಳು. ಆದರೆ ಸಚಿವರು ಅಧಿಕಾರಿಗಳು ಏನು ಉತ್ತರ ನೀಡಿದ್ದಾರೆ, ಅದು ಒಂದು ರೀತಿ ಆಟ ಆಡುವ ಮಕ್ಕಳಿಗೆ ನೀಡಿದ ಹಾಗಿದೆ.

**ಸಭಾಪತಿಯವರು:-** ಹೊಸದಾಗಿ ಸಚಿವರಾಗಿ ಬಂದಿದ್ದಕ್ಕೆ ಧನ್ಯವಾದ ಹೇಳಿದಿರಾ?

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಗಳೇ, ಹೊಸದಾಗಿ ಸೌರಶಕ್ತಿ ವಿದ್ಯುತ್ ಮೇಲ್ಛಾವಣಿ ನಲ್ಲಿ power generate ಮಾಡುವುದರ ಬಗ್ಗೆ ಇಲಾಖೆ ಏನು ಕ್ರಮ ಕೈಗೊಂಡಿದೆ, ಯಾವ ರೀತಿ ಪ್ರೋತ್ಸಾಹ ನೀಡುತ್ತಿದೆ ಎಂದು ಕೇಳಿದರೆ ವಾರ್ತಾ ಪತ್ರಿಕೆ, ನಿಯತಕಾಲಿಕಾ ಸ್ವರ್ಣಸಂಚಿಕೆ, ಫೇಸ್‌ಬುಕ್, ಟ್ವಿಟರ್, ದೂರದರ್ಶನ, ಆಕಾಶವಾಣಿ, ಎಫ್.ಎಂ ಗಳಲ್ಲಿ ಜಾಹಿರಾತು ನೀಡುತ್ತಿದ್ದೇವೆ ಎನ್ನುವ ಉತ್ತರ ನೀಡಿದ್ದಾರೆ. ಜನರಿಗೆ ಪ್ರೋತ್ಸಾಹ ನೀಡಲ್ಲು ಜಾಹೀರಾತು ನೀಡಿದರೆ ಅದನ್ನು ಯಾರು ನೋಡುತ್ತಾರೆ. ಸರ್ಕಾರ ಈ ಸೌರಶಕ್ತಿ ಉತ್ಪಾದನೆ ಪ್ರೋತ್ಸಾಹ ಯಾವ ರೀತಿ ನೀಡಬಹುದು ಎನ್ನುವುದನ್ನು ಚಿಂತಿಸದೇ, ಜಾಹೀರಾತು ನೀಡುವುದು, ಅದರಲ್ಲಿಯೂ ಕಮೀಷನ್ ಪಡೆಯುವುದು, ಇದರಿಂದ power generate ಆಗುವುದೇ? ಜಾಹೀರಾತು ನೀಡಿರುವುದೇ ಸರಿ ಎನ್ನುವುದಾದರೆ ಇಲ್ಲಿಯವರೆಗೆ ಎಷ್ಟು ಮೆಗವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಲಾಗಿದೆ? ಸರ್ಕಾರವೇ 2020-21ನೇ ಸಾಲಿನಲ್ಲಿ 233.49 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆಯನ್ನು ಮಾಡಿದ್ದೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(640)13-09-2021(01-20)bsd-rn

**ಶ್ರೀ ಎಂ. ನಾರಾಯಣಸ್ವಾಮಿ** (ಮುಂದು)

೨೦೨೧-೨೨ ರ ಜುಲೈವರೆಗೂ ಕೇವಲ ೪೮ ದಶಲಕ್ಷ ಯೂನಿಟ್‌ಗಳು ಇದ್ದು, ಕಳೆದ ವರ್ಷ ೨೩೩ ದಶಲಕ್ಷ ಯೂನಿಟ್ ಉತ್ಪಾದನೆಯಾಗಿದೆ. ಜನರಿಗೆ ಹೆಚ್ಚು ತಿಳುವಳಿಕೆ ಕೊಟ್ಟು ಹೆಚ್ಚು ಪವರ್ ಗಳಿಸಲು ಹೋದರೆ ಆಗುತ್ತದೆಯೇ? ಮೇಲ್ಛಾವಣಿಯ ಸೌರಶಕ್ತಿ ವಿದ್ಯುತ್ ಬೇಡ ಎಂದುಕೊಂಡು ಬೇರೆ ರಾಜ್ಯಗಳಿಂದ ಹೆಚ್ಚು ಹಣ ಕೊಟ್ಟು ವಿದ್ಯುತ್ ಖರೀದಿ ಮಾಡಬೇಕೆಂಬ ಹುನ್ನಾರ ಇದರಲ್ಲಿ ಇದೆಯೇ? ಈ ರೀತಿ ಏಕೆ ಮಾಡುತ್ತಿದ್ದಾರೆ? ದಯಮಾಡಿ ಮಾನ್ಯ ಸಚಿವರು ಉತ್ತರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ವಿ. ಸುನೀಲ್ ಕುಮಾರ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖಿಸಿದಂತೆ ಸೌರ ವಿದ್ಯುತ್ ಉತ್ಪಾದನೆಯನ್ನು encourage ಮಾಡುವ ದೃಷ್ಟಿಯಿಂದ ಬೇರೆ ಬೇರೆ ರೀತಿ ಪ್ರಚಾರಗಳನ್ನು ESCOM ಮೂಲಕ ಮಾಡುತ್ತಿದ್ದೇವೆ. ಕಳೆದ ವರ್ಷ ೨೩೩ ದಶಲಕ್ಷ ಯೂನಿಟ್‌ಗಳು ಮೇಲ್ಛಾವಣಿ ಮೂಲಕ ಸೌರಶಕ್ತಿ ಉತ್ಪಾದನೆಯಾಗಿದೆ ಎಂದು ನಾನು ಉತ್ತರದಲ್ಲಿ ಹೇಳಿದ್ದೇನೆ. ಸೋಲಾರ್ ಹೇಗೆ ಬರುತ್ತದೆ ಎಂದು ನಾನು ವಿವರಣೆ ಕೊಡುವ ಅಗತ್ಯ ಇಲ್ಲ. ಜುಲೈವರೆಗೂ ೪೮ ದಶಲಕ್ಷ ಯೂನಿಟ್‌ಗಳನ್ನು ಉತ್ಪಾದನೆ ಮಾಡಿದ್ದು, ಈ ವರ್ಷ ೫ ESCOM ಗಳ ಮೂಲಕ ೩೭೨ ದಶಲಕ್ಷ ವಿದ್ಯುತ್ ಅನ್ನು ಉತ್ಪಾದನೆ ಮಾಡಬೇಕೆಂದು ಕೊಟ್ಟಿದ್ದೇವೆ. ಅದರ ಜೊತೆ ಖಾಸಗಿಯವರು ಮುಂದೆ ಬಂದಾಗ ಪ್ರೋತ್ಸಾಹ ಕೊಡುತ್ತೇವೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ಪಾದನೆಗೆ ಅವಕಾಶ ಇರುವಲ್ಲಿ ಮಾಡುತ್ತೇವೆ. ಸರ್ಕಾರಿ ಕಚೇರಿಗಳ ಮೇಲೂ ಸೌರ ವಿದ್ಯುತ್ ಉತ್ಪಾದಿಸುವ ಮೇಲ್ಛಾವಣಿ ಅಳವಡಿಸಬೇಕೆಂದು ಇಲಾಖೆಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ವರ್ಷ ಯೋಚಿಸಿರುವಂತೆ ೩೭೨ ದಶಲಕ್ಷ ಯೂನಿಟ್‌ಗಳ ಉತ್ಪಾದನೆಯನ್ನು ೫ ESCOM ಗಳ ಮೂಲಕ target reach ಮಾಡುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ಈಗ ಸೆಪ್ಟೆಂಬರ್ ತಿಂಗಳಿನವರೆಗೂ ೪೮ ದಶಲಕ್ಷ ಯೂನಿಟ್ ಉತ್ಪಾದನೆಯಾಗಿದ್ದು, ಇನ್ನುಳಿದಿರುವ ತಿಂಗಳುಗಳಲ್ಲಿ ೩೦೦ ದಶಲಕ್ಷ ಯೂನಿಟ್ ಸಾಧನೆ ಮಾಡಲು ಸಾಧ್ಯವೇ?

**ಶ್ರೀ ವಿ. ಸುನೀಲ್ ಕುಮಾರ್:-** ಸೂರ್ಯನ ಬೆಳಕು ಹೇಗೆ ಬರುತ್ತದೋ ಹಾಗೆ ಉತ್ಪಾದನೆ ಮಾಡಲು ಸಾಧ್ಯವಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿಃ-** ಹಾಗಾದರೆ ಉತ್ತರದಲ್ಲಿ ಏಕೆ ಸುಳ್ಳು ಹೇಳುತ್ತಾರೆ?

**ಶ್ರೀ ವಿ. ಸುನೀಲ್ ಕುಮಾರ್:-** ಸುಳ್ಳು ಹೇಳುತ್ತಿಲ್ಲ. ಜುಲೈ ಅಂತ್ಯದವರೆಗೆ ೪೮ ದಶಲಕ್ಷ ಯೂನಿಟ್‌ವರೆಗೆ target reach ಆಗಿದ್ದೇವೆ. ಈ ವರ್ಷ ೫ ESCOM ಗಳ ಮೂಲಕ ೩೭೨ ದಶಲಕ್ಷ ಯೂನಿಟ್‌ಗಳನ್ನು target ಇಟ್ಟುಕೊಂಡಿದ್ದು, ಅದರಲ್ಲಿ ಖಾಸಗಿ ಮನೆಗಳು ಹಾಗೂ ಸರ್ಕಾರಿ ಕಛೇರಿಗಳ ಮೇಲೂ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅದ್ದರ ಆಧಾರದಲ್ಲಿ ಪ್ರಾಯೋಗಿಕವಾಗಿ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಹೊರ ರಾಜ್ಯಗಳಿಂದ ಸೌರಶಕ್ತಿಯನ್ನು ಖರೀದಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಖಂಡಿತ ಇಲ್ಲ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದು, ಅದನ್ನು ಮುಂದುವರೆಸುವ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರುಃ-** ಮಾನ್ಯ ಭೋಜೇಗೌಡರು ಪ್ರಶ್ನೆ ಕೇಳಿ.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಮುಗಿದಿಲ್ಲ.

**ಸಭಾಪತಿಯವರುಃ-** ತಮಗೆ ೨ ಸಾರಿ ಅವಕಾಶ ಕೊಟ್ಟಿದ್ದೇನೆ, ಪ್ರಶ್ನೆ ಕೇಳಬೇಕು, ಭಾಷಣ ಮಾಡಿದರೆ ಹೇಗೆ? ತಾವು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿದ್ದು ಇದರ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕು. ಇದು ಪ್ರಶ್ನೋತ್ತರ ಅವಧಿ.

**ಶ್ರೀ ಎಂ. ನಾರಾಯಣಸ್ವಾಮಿಃ-** ನಾವು ಉಪ ಪ್ರಶ್ನೆಗಳನ್ನು ಕೇಳಬೇಕಲ್ಲವೇ?

**ಸಭಾಪತಿಯವರುಃ-** ಎಷ್ಟು ಸಮಯ ಕೇಳುತ್ತೀರಿ? ಬೇಗ ಕೇಳಿ.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು target reach ಆಗಲು ಸರ್ಕಾರಿ ಕಛೇರಿಗಳ ಮೇಲೆ ಸ್ಥಾಪಿಸಲು ಅವಕಾಶ ಕೊಡುವ ಬಗ್ಗೆ ಹೇಳಿದರು. ಆದರೆ ಪತ್ರಿಕೆಗಳಲ್ಲಿ ಗ್ರಾಮ ಪಂಚಾಯಿತಿ ಕಛೇರಿಗಳ rooftop ನಲ್ಲಿ ಸೌರಶಕ್ತಿ ಉತ್ಪಾದಿಸಲು ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಅವಕಾಶ ಕೊಡುತ್ತಿಲ್ಲ ಎಂದು ವರದಿಯಾಗಿದೆ. ಅವರವರ ಗ್ರಾಮ ಪಂಚಾಯಿತಿ ಕಛೇರಿಗಳ rooftop ನಲ್ಲಿ ಅವಕಾಶ ಕೊಡುತ್ತಿಲ್ಲ ಎಂದು ಪತ್ರಿಕೆಗಳಲ್ಲಿ ಬಂದಿದೆ. ಇವರು ಒಂದು ಕಡೆ ಸರ್ಕಾರದ ಎಲ್ಲಾ ಕಛೇರಿಗಳ ಮೇಲೂ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಇಷ್ಟು ಸಮಯ ತೆಗೆದುಕೊಂಡರೆ ಹೇಗೆ? ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಹೇಳಲಿ. ಮಾನ್ಯ ಮಂತ್ರಿಗಳು ಸುಳ್ಳು ಹೇಳುತ್ತಿದ್ದಾರೆ ಎಂದು ಹೇಳಿದರೆ ಹೇಗೆ?

**ಸಭಾಪತಿಯವರುಃ-** ನಾನು ಹೇಳುತ್ತೇನೆ, ಬಿಡಿ.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ವಿಧಾನ ಸೌಧ ಮತ್ತು ವಿಕಾಸ ಸೌಧದ ಕಛೇರಿಗಳ ಮೇಲೆ ಸ್ಥಾಪಿಸಲು ಏನಾದರೂ ಪ್ಲಾನ್ ಮಾಡಿದ್ದೀರಾ ಎಂಬ ಪ್ರಶ್ನೆಗೆ ೧೦೦ ಕಿ.ವ್ಯಾಟ್ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲಾಗಿದೆ ಎಂದು ಹೇಳಿದ್ದಾರೆ. ವಿಧಾನ ಸೌಧ ಹಾಗೂ ಎಂ.ಎಸ್. ಬಿಲ್ಡಿಂಗ್ ಮೇಲ್ಛಾವಣಿಯ ಮೇಲೆ ಸೌರಶಕ್ತಿ ಘಟಕ ಅಳವಡಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿರುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ಎಷ್ಟು ವರ್ಷ ಬೇಕು? ಇದಕ್ಕೆ ದೊಡ್ಡ ಕೆಲಸ ಮಾಡಬೇಕಾಗಿದೆಯೇ? ಕಟ್ಟಡ ಇದೆ, ಸವಲತ್ತು ಇದೆ, ಕೆಲಸ ಮಾಡಬೇಕು.

**ಶ್ರೀ ವಿ. ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, Rooftop Programme ಈ ವರ್ಷ ತೆಗೆದುಕೊಂಡಿರುವ ಹೊಸ ಕಾರ್ಯಕ್ರಮವಾಗಿದೆ. ಇದು ಬಹಳ ಹಿಂದಿನಿಂದ ಬಂದಿಲ್ಲ. ನಾವು ಯೋಚನೆ ಮಾಡಿರುವಂತೆ ಮನೆ ಹಾಗೂ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಮಾಡಬೇಕೆಂದು ಹೊಸ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಒಂದು ತಿಂಗಳು ಅಥವಾ ಒಂದೇ ವರ್ಷದಲ್ಲಿ ಎಲ್ಲಾ ಸಾಧನೆಯನ್ನು ಮಾಡಲು ಆಗುವುದಿಲ್ಲ. ಈಗ ಎಂ.ಎಸ್. ಬಿಲ್ಡಿಂಗ್ ಹಾಗೂ ವಿಕಾಸ ಸೌಧದಲ್ಲಿಯೂ ಮಾಡಿದ್ದೇವೆ. ಎಲ್ಲಾ ಸರ್ಕಾರಿ ಕಟ್ಟಡಗಳ ಮೇಲೆ ಸ್ಥಾಪಿಸಲು ಯೋಚನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಗ್ರಾಮ ಪಂಚಾಯಿತಿಯ ಕಟ್ಟಡದ ಮೇಲೆ ಅವಕಾಶ ಇಲ್ಲ ಎಂಬ ಪತ್ರಿಕಾ ಹೇಳಿಕೆಯನ್ನು ಪ್ರಸ್ತಾಪಿಸಿದ್ದು, ಅದರ ಬಗ್ಗೆ ನನ್ನ ಗಮನಕ್ಕೆ ತಂದರೆ ಎಲ್ಲೆಲ್ಲಿ ಅವಕಾಶ ಇದೆಯೋ, ಅಲ್ಲಿ ಖಂಡಿತ ಮಾಡಲು ನಮ್ಮ ಸರ್ಕಾರ ಸಿದ್ಧವಿದೆ ಹಾಗೂ ಇಲಾಖೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ನಾನು ಈಗಾಗಲೇ ಹೇಳಿದಂತೆ ೩೭೨ ದಶಲಕ್ಷ ಯೂನಿಟ್ ಉತ್ಪಾದಿಸಲು ಯೋಚನೆ ಮಾಡಿದ್ದೇವೆ. ಅದನ್ನು ಉತ್ಪಾದನೆ ಮಾಡುವ ಪ್ರಯತ್ನವನ್ನೂ ಮಾಡುತ್ತೇವೆ.

**ಡಾ|| ತೇಜಸ್ವಿನಿಗೌಡಃ-** Cost ಕಡಿಮೆ ಮಾಡುವ ಬಗ್ಗೆ ಸ್ವಲ್ಪ ಹೇಳಬೇಕು. Solar Energy installation ಗೆ cost ಕಡಿಮೆ ಮಾಡುವ ಬಗ್ಗೆ ಹೇಳಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರುಃ-** ಮಾನ್ಯ ಭೋಜೇಗೌಡರ ಪ್ರಶ್ನೆಗೆ ಮಾನ್ಯ ಸಚಿವರು ೧೫ ದಿನಗಳ ಕಾಲಾವಕಾಶವನ್ನು ಕೇಳಿದ್ದು, ೧೫ ದಿವಸ ಆಗುವುದಿಲ್ಲ. ಮುಂದಿನ ವಾರ ತಮ್ಮ ಇಲಾಖೆ ಪ್ರಶ್ನೆ ಬಂದಾಗ ಉತ್ತರವನ್ನು ಕೊಡಬೇಕು.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರುಃ-** ನಾನು ಹೇಳಿದ್ದೇನೆ, ಬಿಡಿ.

**ಶ್ರೀ ಎಸ್.ಎಲ್. ಭೋಜೇಗೌಡಃ-** ದಯಮಾಡಿ ಒಂದು ನಿಮಿಷ ಕೇಳಬೇಕು.

**ಸಭಾಪತಿಯವರುಃ-** ನಾನು ಸರಿಯಾದ ರೀತಿ ಹೇಳಿದ್ದೇನೆ, ತಾವು ಮತ್ತೆ ಕೇಳಬಾರದು.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮಾನ್ಯ ಸಭಾಪತಿಯವರ ಆದೇಶವನ್ನು ಶಿರಸಾವಹಿಸಿ ಪಾಲಿಸುತ್ತೇನೆ. ದಯಮಾಡಿ ತಾವು ಕೇಳಬೇಕು.

**ಸಭಾಪತಿಯವರುಃ-** ಮಾನ್ಯ ಸದಸ್ಯರೇ ಒಂದು ನಿಮಿಷ. ಮಾನ್ಯ ಸಚಿವರೇ, ತಾವು ಈಗ ಅವರು ಮಾತನಾಡುವ ವಿಷಯಕ್ಕೆ ಉತ್ತರ ಹೇಳುತ್ತೀರಾ?

**ಶ್ರೀ ಬಿ.ಸಿ. ನಾಗೇಶ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಹೇಳುವುದಿಲ್ಲ.

**ಸಭಾಪತಿಯವರುಃ-** ಮುಂದಿನ ವಾರ ತೆಗೆದುಕೊಳ್ಳೋಣ.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮುಂದಿನವಾರ ದಯಮಾಡಿ ಉತ್ತರವನ್ನು ಕೊಡಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 138**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ನಾನು ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅಳಿವಿನ ಅಂಚಿನಲ್ಲಿರುವ ವನ್ಯಜೀವಿಗಳ ಸಂರಕ್ಷಣೆಗೆ ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ಎಂದು ಕೇಳಿದ್ದೇನೆ. ಉತ್ತರದಲ್ಲಿ ಹೇಳಿರುವಂತೆ ರಾಜ್ಯದಲ್ಲಿ ಆನೆ ಮತ್ತು ಹುಲಿ ಮಾತ್ರ ವನ್ಯಜೀವಿಗಳೇ? ಕರ್ನಾಟಕ ರಾಜ್ಯದಲ್ಲಿ ಆನೆ, ಹುಲಿ, ಚಿರತೆ ಮುಂತಾದ ಪ್ರಾಣಿಗಳ ಸಂಖ್ಯೆ ಹೆಚ್ಚಳವಾಗಿದೆ. ೨೦೧೭ರ ಗಣತಿ ಬಗ್ಗೆ ಪ್ರಸ್ತಾಪಿಸಿದ್ದು, ಎಷ್ಟು ವರ್ಷಗಳಿಗೆ ಒಂದು ಸಾರಿ ಪ್ರಾಣಿಗಳ ಗಣತಿ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ೨೦೧೭ರ ಆನೆ ಗಣತಿಯಂತೆ ೬೦೪೯ ಆನೆಗಳು ಹಾಗೂ ೨೦೧೮ರ ಹುಲಿ ಗಣತಿಯಂತೆ ೫೨೪ ಹುಲಿಗಳಿವೆ ಎಂದು ಹೇಳಿದ್ದಾರೆ. ನಾನು ನಶಿಸಿ ಹೋಗುತ್ತಿರುವ ಪ್ರಾಣಿಗಳ ಬಗ್ಗೆ ಕೇಳಿದ್ದೇನೆ. ಬಂಡೀಪುರ, ನಾಗರಹೊಳೆ, ಭದ್ರಾ ಅಭಯಾರಣ್ಯ, ಕುದುರೆಮುಖ, ಬನ್ನೇರುಘಟ್ಟಗಳಿಗೆ ನಾವುಗಳೆಲ್ಲರೂ ಹೋಗುತ್ತೇವೆ. ಆನೆಗಳನ್ನು ಮೊನ್ನೆ ತುಮಕೂರು ಮತ್ತು ಬನ್ನೇರುಘಟ್ಟದಲ್ಲಿ ಬಂದಿರುವ ಬಗ್ಗೆ ಕೇಳಿದ್ದೇವೆ. ಆನೆಗಳು ಸಾಕಷ್ಟು ದಾಳಿ ಮಾಡುತ್ತಿದ್ದು, ರೈತರ ಬೆಳೆ ಹಾಳಾಗುತ್ತಿದೆ. ಅದಕ್ಕೆ ಯಾವರೀತಿ ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಕೂಲಂಕಶವಾಗಿ ಹೇಳಬೇಕು.

**ಶ್ರೀ ಉಮೇಶ್ ವಿ. ಕತ್ತಿಃ-** ಮಾನ್ಯ ಸಭಾಪತಿಯವರೇ, ವನ್ಯಜೀವಿಗಳ ಸಂಖ್ಯೆಯ ಬಗ್ಗೆ ಸವಿಸ್ತಾರವಾದ ಮಾಹಿತಿ ಕೊಟ್ಟಿದ್ದೇನೆ. ನಾಲ್ಕು ವರ್ಷಗಳಿಗೊಮ್ಮೆ ಪ್ರಾಣಿಗಳ ಗಣತಿ ನಡೆಯುತ್ತದೆ. ಅದರಂತೆ ಅಂಕಿ ಅಂಶಗಳನ್ನು ಉಳಿಸಲಾಗಿದೆ. ನಾಶವಾಗಿರುವ ಬೆಳೆಗಳಿಗೆ ರೈತರಿಗೆ ಪರಿಹಾರ ಕೊಡಲಾಗಿದೆ. ಯಾವುದಾದರೂ ತೊಂದರೆಯಾಗಿರುವ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಸರಿ ಮಾಡುವ ಕೆಲಸ ಮಾಡುತ್ತೇನೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಉತ್ತರ ಸಮರ್ಪಕವಾಗಿಲ್ಲ. ಅವರು ಕೊಟ್ಟಿರುವ ಉತ್ತರವನ್ನು ತಾವೂ ನೋಡಬೇಕು. ನಾನು ಕೇಳಿರುವ ಪ್ರಶ್ನೆ ಒಂದಾದರೆ ಅವರು ಕೊಟ್ಟಿರುವ ಉತ್ತರ ಇನ್ನೊಂದಾಗಿದೆ. ನಾನು ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆಯೇ? ಕೇವಲ ಆನೆ ಮತ್ತು ಹುಲಿ ಬಗ್ಗೆ ಮಾತ್ರ ಹೇಳಿದ್ದಾರೆ. (ಮು)

(641)/ 13.09.2021/ 1.30/ ಹೆಚ್‌ವಿ:ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ**:- ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಹೊರತುಪಡಿಸಿದರೆ, ಉಳಿದ ಪ್ರಶ್ನೆಗಳಿಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಸರಿಯಾದಂತಹ ಉತ್ತರವನ್ನು ಕೊಟ್ಟಿಲ್ಲ.

**ಶ್ರೀ ಉಮೇಶ್ ಕತ್ತಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವನ್ಯ ಜೀವಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ದಿನೇದಿನೇ ವನ್ಯ ಜೀವಿಗಳ ಸಂಖ್ಯೆ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗಿಲ್ಲ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಂಗದ ಒಂದು ವಿಶೇಷ ತಳಿಯಾಗಿರುವ ಮುಸಿಯಾ(Musiya) ಎನ್ನುವುದರ ಸಂಖ್ಯೆ ದಿನೇದಿನೇ ಕಡಿಮೆಯಾಗುತ್ತಿದೆಯೇ ಹೊರತು ಹೆಚ್ಚಾಗಿಲ್ಲ. ಇದು ಅರಣ್ಯ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ, ಇಲ್ಲವೇ? ಮಾನ್ಯ ಸಚಿವರು ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಸಮರ್ಥಿಸಿಕೊಳ್ಳಬಾರದು. ಸರ್ಕಾರ ಕೊಟ್ಟಿರುವಂತಹ ಉತ್ತರ ಸರಿಯಾಗಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಅಧಿಕಾರಿಗಳಿಗೆ ಚಾಟಿ ಬೀಸಬೇಕಾಗಿದೆ. ಅದನ್ನು ಬಿಟ್ಟು ಅಧಿಕಾರಿಗಳನ್ನು ಸಮರ್ಥಿಸಿಕೊಳ್ಳುವ ಮೂಲಕ ಸದನವನ್ನು ತಪ್ಪು ದಾರಿಗೆಳೆಯುವಂತಹ ಕೆಲಸವನ್ನು ಮಾಡಬಾರದು.

**ಶ್ರೀ ಉಮೇಶ್ ಕತ್ತಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಅರಣ್ಯ ಮಂತ್ರಿಯಾಗಿ ಉತ್ತರವನ್ನು ಕೊಡುತ್ತಿದ್ದೇನೆಯೇ ಹೊರತು, ಅಧಿಕಾರಿಗಳು ಕೊಟ್ಟಂಥ ಉತ್ತರವನ್ನು ಕೊಡುತ್ತಿಲ್ಲ. ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಉತ್ತರವನ್ನು ಕೊಡುತ್ತಿದ್ದೇನೆ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವನ್ಯಜೀವಿಗಳ ಗಣತಿ ಆಗುತ್ತದೆ. ನಾನು ಲಿಖಿತರೂಪದ ಉತ್ತರದಲ್ಲಿ ಕೊಟ್ಟಿರುವಂತಹ ಅಂಕಿಸಂಖ್ಯೆಗಳು ಸರಿಯಾಗಿವೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಇಲಾಖೆಯವರು ಈಗಾಗಲೇ ಕೇಂದ್ರ ಸರ್ಕಾರದಿಂದ ನೂರಾರು ಕೋಟಿ ರೂಪಾಯಿಗಳಷ್ಟು ಅನುದಾನವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿವಿಧ ಯೋಜನೆಗಳಡಿಯಲ್ಲಿ ಪಡೆದುಕೊಳ್ಳಲಾಗುತ್ತಿದೆ. ಆದರೆ, ಯಾವುದಾದರೊಂದು ಕಾಡಿನಲ್ಲಿ ಪಕ್ಷಿಗಳಿಗಾಗಿ ಒಂದೇ ಒಂದು ಹಣ್ಣಿನ ಮರವನ್ನು ಇವರು ಬೆಳೆಸಿಲ್ಲ. ಬಂಡಿಪುರ ಅಥವಾ ನಾಗರಹೊಳೆಯಲ್ಲಿ ಎಲ್ಲಿಯೂ ಒಂದೇಒಂದು ಹಣ್ಣಿನ ಮರವನ್ನು ಇವರು ಬೆಳೆಸಿಲ್ಲ. ಪಕ್ಷಿ ಸಂಕುಲ ನಶಿಸಿ ಹೋಗುತ್ತಿದೆ. ಅವುಗಳ ರಕ್ಷಣೆಗಾಗಿ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗಿದೆ.

**ಶ್ರೀ ಉಮೇಶ್ ಕತ್ತಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಂಡೀಪುರ ಮತ್ತು ನಾಗರಹೊಳೆಗಳನ್ನು ಮಾತ್ರ ನೋಡಿದ್ದಾರೆ. ನಮ್ಮ ಕಡೆ ಬಂದರೆ, ಎಷ್ಟು ಹಣ್ಣಿನ ಮರಗಳನ್ನು ಬೆಳೆಯಿಸಲಾಗಿದೆ ಎನ್ನುವುದನ್ನು ನಾನು ತೋರಿಸುತ್ತೇನೆ. ನೇರಳೆ ಮರ, ಪೇರಳೆ ಮರ ಇತ್ಯಾದಿಗಳನ್ನು ಬೆಳೆಸಲಾಗಿದೆ. ಬೇರೆ ಏನಾದರು ಸಮಸ್ಯೆಗಳಿದ್ದರೆ ಅವರು ಅದನ್ನು ಹೇಳಲಿ ನಾನು ಅದಕ್ಕೆ ಸ್ಪಂದಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:214**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಲ್ಲಂ ವೀರಭದ್ರಪ್ಪ**:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೇನೆ.

**ಸಭಾಪತಿಯವರು**:- ತಾವು ತಡವಾಗಿ ಸದನಕ್ಕೆ ಬಂದಿದ್ದೀರಿ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈಗ ಸದನದಲ್ಲಿ ಉಪಸ್ಥಿತರಿಲ್ಲ. ತಮ್ಮ ಪ್ರಶ್ನೆಯ ವಿಚಾರವನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ.

ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಮಾನ್ಯ ಸಭಾ ನಾಯಕರು ಉತ್ತರವನ್ನು ಮಂಡನೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ. ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):- ಮಾನ್ಯ ಸಭಾಪತಿಯರೇ, ದಿನಾಂಕ 13ನೇ ಸೆಪ್ಟೆಂಬರ್ 2021ರ ಸಮೂಹ-1 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 151 ಪ್ರಶ್ನೆಗಳ ಪೈಕಿ 90 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯಃ ರಾಜ್ಯದ ಸರ್ಕಾರಿ ಐ.ಟಿ.ಐ. ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಳೆದ 4 ತಿಂಗಳಿಂದ ವೇತನ ಬಿಡುಗಡೆ ಆಗದಿರುವ ಕುರಿತು.**

----

**ಶ್ರೀ ಎಸ್.ವಿ.ಸಂಕನೂರ(ಪದವೀಧರರ ಕ್ಷೇತ್ರ)**:- ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಸುಮಾರು 300 ಸರ್ಕಾರಿ ಐ.ಟಿ.ಐ. ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಸುಮಾರು 1000 ಸಿಬ್ಬಂದಿಗಳಿಗೆ 2021ರ ಮಾರ್ಚ್, ಏಪ್ರಿಲ್, ಜುಲೈ ಹಾಗೂ ಆಗಸ್ಟ್ ಒಟ್ಟು 4 ತಿಂಗಳ ವೇತನ ಬಿಡುಗಡೆ ಆಗಿರುವುದಿಲ್ಲ. ಇದರಿಂದ ಸಿಬ್ಬಂದಿಗಳಿಗೆ ಸಾಕಷ್ಟು ಆರ್ಥಿಕ ತೊಂದರೆ ಆಗಿದೆ. ಅದರಲ್ಲಿಯೂ ಕೋವಿಡ್-19 ಸಂಕಷ್ಟ ಕಾಲದಲ್ಲಿ ಜೀವನ ಸಾಗಿಸುವುದು ದುಸ್ತರವಾಗಿರುವುದನ್ನು ಕುರಿತು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಮತ್ತು ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವ ಪ್ರಯೋಜನವಾಗಿಲ್ಲ. ಆದ್ದರಿಂದ ಕೂಡಲೇ ವೇತನ ಬಿಡುಗಡೆಗಾಗಿ ಉನ್ನತ ಶಿಕ್ಷಣ ಸಚಿವರು ಸಂಬಂಧಪಟ್ಟ ನಿರ್ದೇಶಕರು ಹಾಗೂ ಆಯುಕ್ತರಿಗೆ ವೇತನ ಬಿಡುಗಡೆ ಮಾಡಲು ನಿರ್ದೇಶನ ನೀಡುವಂತೆ ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಇದಲ್ಲದೇ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕೋವಿಡ್-19 ಅವಧಿಗೆ ವೇತನ ಬಿಡುಗಡೆ ಮಾಡಿದಂತೆ ಸರ್ಕಾರಿ ಐ.ಟಿ.ಐ. ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೂ ಮೇ ಮತ್ತು ಜೂನ್ ತಿಂಗಳ ವೇತನ ಬಿಡುಗಡೆ ಮಾಡಲು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)**:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವಿ.ಸಂಕನೂರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯಃ ಬೆಂಗಳೂರು ನಗರ ಬಸವನಗುಡಿಯಲ್ಲಿರುವ ಕೆಂಪೇಗೌಡ ಜಿಂಕೆ ಪಾರ್ಕ್ ಸಮರ್ಪಕವಾಗಿ ನಿರ್ವಹಣೆ ಇಲ್ಲದೇ ಪುಂಡುಪೋಕರಿಗಳ ಆವಾಸಸ್ಥಾನವಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ.**

----

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಸ್ಮಾರ್ಟ್ ಸಿಟಿ, ಸಿಲಿಕಾನ್ ಸಿಟಿ, ಐ.ಟಿ/ಬಿ.ಟಿ. ಸಿಟಿ, ಕೂಲ್ ಸಿಟಿ ಎಂದು ಹೆಸರುವಾಸಿಯಾಗಿರುವುದರ ಜೊತೆಗೆ ಗಾರ್ಡನ್ ಸಿಟಿ (ಗ್ರೀನ್ ಸಿಟಿ) ಎಂದೂ ಪ್ರಸಿದ್ಧವಾಗಿದೆ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ಬೆಂಗಳೂರಿನ ಮಧ್ಯಭಾಗದಲ್ಲಿರುವ ಬಸವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆಂಪೇಗೌಡ ನಗರದ 'ಜಿಂಕೆ ಪಾರ್ಕ್' ಎಲ್ಲರ ಗಮನ ಸೆಳೆಯುತ್ತಿದೆ. ಕಾರಣವೇನೆಂದರೆ, ಸುಮಾರು 17 ಎಕರೆ ವಿಸ್ತಾರ ಪ್ರದೇಶದಲ್ಲಿರುವ ಈ ಉದ್ಯಾನವನವು ಒಂದು ಕಾಲದಲ್ಲಿ ಹಚ್ಚ ಹಸಿರಿನಿಂದ ಕಂಗೊಳಿಸುತ್ತಾ, ಜಿಂಕೆಗಳು, ಪಕ್ಷಿಗಳಿಗೆ ಆಶ್ರಯತಾಣವಾಗಿ, ಪುಟ್ಟ ಕಂದಮ್ಮಗಳಿಗೆ, ಮಕ್ಕಳಿಗೆ, ವಯಸ್ಸಾದ ಹಿರಿಯ ನಾಗರಿಕರಿಗೆ ಮುದ ನೀಡುತ್ತಿತ್ತು. ಆದರೆ, ನಿರ್ವಹಣೆ ಕೊರತೆಯಿಂದಾಗಿ ಪಾರ್ಕ್ ಒಳಗಡೆ ಕಾಲಿಡುವುದಕ್ಕೂ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಇದು ಯಾವ ಮಟ್ಟಕ್ಕೆ ಬಂದು ನಿಂತಿದೆಯೆಂದರೆ, ವಿದ್ಯುತ್ ದೀಪಗಳಿಲ್ಲದೆ ಪುಂಡುಪೋಕರಿಗಳ ಆವಾಸಸ್ಥಾನವಾಗಿ ಬಿಟ್ಟಿದೆ. ಮಕ್ಕಳ ಆಟಿಕೆಗಾಗಿ ಸುಮಾರು 1.25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರೈಲು ಖರೀದಿಸಿ ಸಾರ್ವಜನಿಕರಿಗೆ ಮುಕ್ತಗೊಳಿಸಿದ್ದರೂ ಮುಂಜಾಗ್ರತೆ ವಹಿಸದ ಕಾರಣ 40ಕ್ಕೂ ಹೆಚ್ಚು ಮಕ್ಕಳು ಗಾಯಗೊಂಡವು. ತದನಂತರದಲ್ಲಿ ರೈಲು ಬಳಕೆಯನ್ನು ನಿರ್ವಹಿಸದ ಕಾರಣ ರೈಲು ಮತ್ತು ರೈಲು ಹಳಿ ತುಕ್ಕು ಹಿಡಿದು ಗುಜರಿಯವರೂ ಸಹ ಖರೀದಿ ಮಾಡಲು ಬಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇ ರೀತಿ ಬಿ.ಬಿ.ಎಂ.ಪಿ. ವತಿಯಿಂದ ನಿರ್ಮಿಸಲಾದ ಗಾಜಿನ ಮನೆ ಇರಬಹುದು, ಸಸ್ಯ ಸಂಕಲುಗಳು ಇರಬಹುದು, ಲೈಟ್ ಶೋ ಇರಬಹುದು, ಲೇಸರ್ ಶೋ ಇರಬಹುದು ಎಲ್ಲವೂ ತುಕ್ಕು ಹಿಡಿದು ಹಾಳಾಗಿದೆ.

ದಯಮಾಡಿ ಈ ವಿಚಾರದಲ್ಲಿ ಸರ್ಕಾರ ಕೂಡಲೇ ಗಮನಹರಿಸಿ 'ಜಿಂಕೆ ಪಾರ್ಕ್' ಅನ್ನು ಮೊದಲಿನಂತೆ ಹಚ್ಚ ಹರಿಸಿನ ಉದ್ಯಾನವಾಗಿ ಕಂಗೊಳಿಸುವಂತೆ ಮಾಡಿ ಮಕ್ಕಳು ಮತ್ತು ಎಲ್ಲಾ ವಯೋಮಾನದವರಿಗೂ ಅನುಕೂಲವಾಗುವಂಥ ವಾತಾವರಣವನ್ನು ನಿರ್ಮಾಣ ಮಾಡಿ, ಆ ಭಾಗದ ಜನತೆಗೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಾರ್ಡನ್ ಸಿಟಿ ಹೋಗಿ ವರ್ಸ್ಟ್ ಸಿಟಿ ಆಗುವುದಕ್ಕೆ ಸರ್ಕಾರವೇ ಕಾರಣವಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ನವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಇ) ವಿಷಯಃ ಅರಣ್ಯ ಜಮೀನು ಸಾಗುವಳಿದಾರರಿಗೆ ಪಹಣಿ ನೀಡುವ ಕುರಿತು 1972ರ ಆದೇಶ ತಡೆಯಾಗಿರುವ ಬಗ್ಗೆ.**

----

**ಶ್ರೀ ಘೋಟ್ನೆಕರ ಶ್ರೀಕಾಂತ್ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಂಜೂರಾತಿ ಹಕ್ಕು ಪಡೆದು ಸಾಗುವಳಿ ಮಾಡುತ್ತಿರುವ ರೈತರ ಜಮೀನು ಅರಣ್ಯ ಇಲಾಖೆಯ ಜಮೀನಾಗಿದ್ದು ಸರ್ಕಾರದ ಆದೇಶ ನಂಬರ್ ಎಎಫ್‌ಡಿ:24:ಎಫ್ ಜಿಎಲ್:69 ಬೆಂಗಳೂರು ದಿನಾಂಕ:16-04-1969 ರನ್ವಯ 50 ವರ್ಷಗಳ ಹಿಂದೆಯೇ ಕಂದಾಯ ಇಲಾಖೆಗೆ ಹಸ್ತಾಂತರಗೊಂಡ(ಡಿಸ್-ಫಾರೆಸ್ಟ್) ಜಿಲ್ಲೆಯ 50,708 ಎಕರೆ ಅರಣ್ಯ ಜಮೀನಿನ ಭಾಗವಾಗಿದೆ. ಆದರೆ, ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಜಮೀನು ಡಿನೋಟಿಫಿಕೇಶನ್ ಆಗದೆ ಈಗಲೂ ಮೇಲಿನ ಜಮೀನು ಅರಣ್ಯ ಇಲಾಖೆಯಲ್ಲಿಯೇ ಇದೆ. ಆದರೆ, ಸರ್ಕಾರ ಮಾತ್ರ ಈ 50 ವರ್ಷಗಳ ಅವಧಿಯಲ್ಲಿ ಹಂಗಾಮಿ ಲಾಗಣಿ, ಸ್ಕೀಮ್ ಲ್ಯಾಂಡ್, ಗೌಳಿ ಮತ್ತು ಗೌಳಿಯೇತರ ಸಮುದಾಯದ ಪುರ್ನವಸತಿ ಯೋಜನೆ 1978ರ ಪೂರ್ವ ಅರಣ್ಯ ಅತಿಕ್ರಮಣ ಸಕ್ರಮೀಕರಣ ಇತ್ಯಾದಿ ಮೂಲಕ ಸಾಗುವಳಿಗಾರರಿಗೆ ಹಕ್ಕುಪತ್ರ ನೀಡುತ್ತಾ ಬಂದಿರುತ್ತದೆ.

ಸಾಗುವಳಿ ಚೀಟಿ ಪಡೆದ ರೈತರು, ಸರ್ಕಾರ ತಮಗೆ ಜಮೀನು ಮಂಜೂರು ಮಾಡದೆ ಇನ್ನೂ ನಾವೇ ಈ ಜಮೀನಿನ ಮಾಲೀಕರು ಎಂದು ತಿಳಿದುಕೊಂಡಿದ್ದಾರೆ. ಆದರೆ, ಅದು ತಪ್ಪು ಮಂಜೂರಾದ ಜಮೀನಿನ ಸಂಪೂರ್ಣ ಸ್ವಾಮಿತ್ವ ಪಡೆಯಲು ಪಹಣಿಯ ಕಾಲಂ ನಂಬರ್ 9ರ ಅಡಿ ಫಲಾನುಭವಿ ರೈತರ ಹೆಸರು ದಾಖಲಾದರೇ ಮಾತ್ರ ಮಂಜೂರಾದ ಜಮೀನಿನ ಸಂಪೂರ್ಣ ಹಕ್ಕು ದೊರಕಲಿದೆ. ಜೊತೆಗೆ ಸರಕಾರದ ವಿವಿಧ ಸೌಲಭ್ಯ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪಡೆದುಕೊಳ್ಳಬಹುದಾಗಿದೆ. ಹಕ್ಕುಪತ್ರ ಪಡೆದ ಬಹುತೇಕ ಫಲಾನುಭವಿಗಳ ಹೆಸರು ಇಂದಿಗೂ ಪಹಣಿಯಲ್ಲಿ ದಾಖಲಾಗಿಲ್ಲ. ಕೆಲವು ಫಲಾನುಭವಿ ರೈತರ ಹೆಸರು ಪಹಣಿಯ ಕಾಲಂ 11ರಲ್ಲಿ ಇತರೆ ಋಣಗಳು ಮತ್ತು ಹಕ್ಕುಗಳ ಅಡಿ ಜಂಟಿಯಾಗಿ ಅರಣ್ಯ ಇಲಾಖೆಯ ಜೊತೆಗೆ ದಾಖಲಾಗಿದೆ. ಮಂಜೂರಾದ ಜಮೀನಿನ ಸಂಪೂರ್ಣ ಹಕ್ಕು ಅಥವಾ ಪಹಣಿಯ ಕಾಲಂ ನಂಬರ್ 9ರ ಅಡಿ ಫಲಾನುಭವಿಯ ಹೆಸರು ದಾಖಲಾಗಲು ಅರಣ್ಯ ಇಲಾಖೆಯ ಜಮೀನು ಕಂದಾಯ ಇಲಾಖೆಗೆ ನಿರ್ವಹಣೆಕರಣ (ಡಿನೋಟಿಫಿಕೇಶನ್) ಗೊಳ್ಳಬೇಕಾಗಿದೆ. ಕಳೆದ 50 ವರ್ಷಗಳಿಂದಲೂ ನಿರ್ವಣೆಕರಣ ಆಗಿಲ್ಲ. ಈಗ ಈ ಪ್ರಕ್ರಿಯೆಗೆ ಸರಕಾರದ 1972ರ ಆದೇಶ ತಡೆಯಾಗಿದೆ. ಈ ಆದೇಶ ರಾಜ್ಯ ಸರ್ಕಾರ ಹಿಂಪಡೆದಲ್ಲಿ ಅಥವಾ ರದ್ದುಗೊಳಿಸಿದ್ದಲ್ಲಿ ಮಾತ್ರ ನಿರ್ವಣೆಕರಣ ಪ್ರಕ್ರಿಯೆ ಮುಂದುವರೆಯಲಿದೆ. ಇದನ್ನು ಮಾನ್ಯ ಕಂದಾಯ ಸಚಿವರು ಆದಷ್ಟು ಬೇಗನೆ ಪರಿಶೀಲಿಸಿ ಸರಿಪಡಿಸುವುದಕ್ಕೆ ಸಂಬಂಧಪಟ್ಟ ವಿಚಾರವನ್ನು ತಮ್ಮ ಮುಖಾಂತರ ಶೂನ್ಯ ವೇಳೆಯಲ್ಲಿ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೆಕರ ಶ್ರೀಕಾಂತ್ ಲಕ್ಷ್ಮಣನವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) ವಿಷಯ: ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ರೈತರು ಬೆಳೆದಿರುವ ಈರುಳ್ಳಿ ಬೆಳೆಗೆ ಕೊಳೆ ರೋಗ ಬಂದು ಬೆಳೆ ನಷ್ಟವಾಗಿರುವುದಕ್ಕೆ ಪರಿಹಾರ ಕೋರಿರುವ ಬಗ್ಗೆ.**

----

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ರೈತರು ವಾಣಿಜ್ಯ ಬೆಳೆಯಾದ ಈರುಳ್ಳಿ ಬೆಳೆಯನ್ನು ಅತಿ ಹೆಚ್ಚು ಬೆಳೆಯುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ಬಿದ್ದಂಥ ಅತಿ ಹೆಚ್ಚು ಮಳೆಯಿಂದಾಗಿ ಬೆಳೆದಂಥ ಈರುಳ್ಳಿ ಬೆಳೆ ಕೊಳೆರೋಗ ಬಂದು ನಾಶವಾಗುತ್ತಿದೆ. ಪ್ರಸ್ತುತ ವರ್ಷವೂ ಮಳೆಯಿಂದಾಗಿ ಈರುಳ್ಳಿ ಬೆಳೆ ನಾಶವಾಗಿದೆ. ರೈತರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಹೆಕ್ಟೇರ್ ಬೆಳೆಗೆ ಸುಮಾರು 80-90 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಒಂದು ಎಕರೆಗೆ ಒಂದು ಕೆ.ಜಿ.ಯಷ್ಟು ಈರುಳ್ಳಿ ಬರುತ್ತಿಲ್ಲ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಂಥ ಸಂದರ್ಭದಲ್ಲಿ ಸರ್ಕಾರ ಒಂದು ಎಕರೆಗೆ ಕೇವಲ ಐದು ಸಾವಿರ ರೂಪಾಯಿಗಳ ಬೆಳೆ ಪರಿಹಾರವನ್ನಷ್ಟೇ ನೀಡಿದೆ. ಬ್ಯಾಂಕಿನಿಂದ ಸೂಕ್ತ ವಿಮೆ ಪರಿಹಾರವೂ ದೊರೆಯುತ್ತಿಲ್ಲ. ಕಳೆದ ಬಾರಿ ಹಡಗಲಿ ತಾಲ್ಲೂಕಿಗೆ 2 ಕೋಟಿ 20 ಲಕ್ಷ ಪರಿಹಾರ ಬಂದಿರುವುದರಲ್ಲಿ ಬಹಳಷ್ಟು ಜನರಿಗೆ ಇನ್ನೂ ಪರಿಹಾರ ದೊರೆತಿಲ್ಲ. ಈ ಪರಿಸ್ಥಿತಿ ತಾಲ್ಲೂಕಿನ ಉತ್ತಂಗಿ, ಇಟ್ಟಗಿ, ಕಲ್ಲಹಳ್ಳಿ, ಮಹಾಜನದಹಳ್ಳಿ, ನಂದಿ ಭಾಗದಲ್ಲಿನ ನೂರಾರು ಎಕರೆಯಲ್ಲಿ ಈರುಳ್ಳಿ ಬೆಳೆದಂಥ ರೈತರಲ್ಲೂ ಇದೆ. ಈರುಳ್ಳಿ ಬೆಳೆಗೆ ಪರಿಹಾರ ನೀಡುವಂತೆ ಆಗ್ರಹಿಸಿ ಈರುಳ್ಳಿ ಬೆಳೆಗಾರರ ಸಂಘವು ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುವುದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ.

ಕೂಡ್ಲಿಗಿ ತಾಲ್ಲೂಕಿನ  ರೈತರೊಬ್ಬರು ಎರಡು ಎಕರೆಯಲ್ಲಿ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈರುಳ್ಳಿ ಬೆಳೆ ಬೆಳೆದು ಕಟಾವು ಮಾಡಿದಂಥ 250 ಚೀಲಗಳಲ್ಲಿ ಗ್ರೇಡ್ ಮಾಡಿ ಮಾರುಕಟ್ಟೆಗೆ ಕಳುಹಿಸಿದಂಥ 40 ಚೀಲ ಈರುಳ್ಳಿಗೆ ದೊರೆತಿದ್ದು ಕೇವಲ ಹತ್ತು ಸಾವಿರ ರೂಪಾಯಿಗಳು ಮಾತ್ರ. ಉಳಿದೆಲ್ಲ ಈರುಳ್ಳಿ ಕೊಳೆರೋಗದಿಂದ ಕೊಳೆತು ಹೋಗಿದೆ. ಇದು ಈ ಭಾಗದ ಎಲ್ಲಾ ಈರುಳ್ಳಿ ಬೆಳೆಗಾರರ ಸಮಸ್ಯೆಯಾಗಿದೆ. ಎಕರೆಗೆ 50-60 ಸಾವಿರ ರೂಪಾಯಿಗಳನ್ನು ಸಾಲ ಮಾಡಿ ಖರ್ಚು ಮಾಡಿದ ರೈತರು ಕಂಗಾಲಾಗಿದ್ದಾರೆ.

ಸರ್ಕಾರ ಕೂಡಲೇ ಈರುಳ್ಳಿ ಬೆಳೆಗಾರರ ನೆರವಿಗೆ ಧಾವಿಸಿ, ಅವರಿಗೆ ಆಗಿರುವ ನಷ್ಟ ಪರಿಹಾರವನ್ನು ಅಂದಾಜಿಸಿ ತತಕ್ಷಣವೇ ಪರಿಹಾರವನ್ನು ಮಂಜೂರು ಮಾಡಬೇಕೆಂದು ಮಾನ್ಯ ತೋಟಗಾರಿಕಾ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ತೋಟಗಾರಿಕಾ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(642) 13.9.2021 1.40 ಪಿಕೆ:ವಿಕೆ

## 6. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ :-** ಮಾನ್ಯ ಸಭಾಪತಿಗಳೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಋಣ ಪರಿಹಾರ ವಿಧೇಯಕ, 2018
2. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
3. ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕ, 2018
4. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2021
5. ಕರ್ನಾಟಕ ಧನವಿನಿಯೋಗ ವಿಧೇಯಕ, 2021
6. ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021
7. ಕರ್ನಾಟಕ ಧನವಿನಿಯೋಗ (ಸಂಖ್ಯೆ-೨) ವಿಧೇಯಕ, 2021
8. ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2021
9. ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರಿ (ನಿರಸನಗೊಳಿಸುವ) ವಿಧೇಯಕ, 2021
10. ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ವಿಧೇಯಕ, 2021
11. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2021
12. ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021
13. ಸ್ಯೆಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ವಿಧೇಯಕ, 2021
14. ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020
15. ವಿದ್ಯಾಶಿಲ್ಪ ವಿಶ್ವವಿದ್ಯಾಲಯ ವಿಧೇಯಕ, 2020
16. ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020

**ಸಭಾಪತಿಯವರು:-** ಮಂಡಿಸಲಾಯಿತು. ಈಗ ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 1 ಗಂಟೆ 41 ನಿಮಿಷದಿಂದ ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಯಿತು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(643) 13.09.2021 03.20 ಎಸ್‌ವಿ-ಬಿಎನ್‌ಎಸ್**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 41 ನಿಮಿಷಗಳಿಗೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 03 ಗಂಟೆ 20 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಉಪ ಸಭಾಪತಿಯವರು:-** Floor leaders ಸಭಾಪತಿಯವರ ಕೊಠಡಿಗೆ ಬಂದರೆ ಮಾತನಾಡಿ 10 ನಿಮಿಷಗಳ ನಂತರ ಪುನಃ ಪ್ರಾರಂಭ ಮಾಡೋಣ. ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗುತ್ತಿದೆ.

**(ಸದನವು ಮಧ್ಯಾಹ್ನ 03 ಗಂಟೆ 21 ನಿಮಿಷಗಳಿಗೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು.)**

**(644)13.9.2021/4.30/ಎಂ.ಎಂ-ಜಿಆರ್(ವಿ.ಕೆ)**

**(ಸಭಾಪತಿಯವರ ಉಪಸ್ಥಿತಿ)**

**(ಮಧ್ಯಾಹ್ನ 03 ಗಂಟೆ 21 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಸಾಯಂಕಾಲ 04 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)**

**<u>7. ಸಂತಾಪ ಸೂಚನೆಗಳು</u>**

**ಮಾಜಿ ಕೇಂದ್ರ ಸಚಿವರು, ಮಾಜಿ ಲೋಕಸಭೆಯ ಸದಸ್ಯರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರಾಗಿದ್ದ ಸನ್ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಮತ್ತು ರಾಷ್ಟ್ರ ಚಲನಚಿತ್ರ ಪ್ರಶಸ್ತಿ ವಿಜೇತರಾದ ನಟ ಶ್ರೀಯುತ ವಿಜಯ್ (ಸಂಚಾರಿ ವಿಜಯ್)ರವರುಗಳು ನಿಧನದ ಬಗ್ಗೆ.**

.......

**ಸಭಾಪತಿಯವರು:-** ಮಾಜಿ ಕೇಂದ್ರ ಸಚಿವರು, ಮಾಜಿ ಲೋಕಸಭೆಯ ಸದಸ್ಯರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರಾಗಿದ್ದ ಸನ್ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಷ್ಟ್ರ ಚಲನಚಿತ್ರ ಪ್ರಶಸ್ತಿ ವಿಜೇತರಾದ ನಟ ಶ್ರೀಯುತ ವಿಜಯ್ (ಸಂಚಾರಿ ವಿಜಯ್)ರವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಮಾಜಿ ಕೇಂದ್ರ ಸಚಿವರು, ಮಾಜಿ ಲೋಕಸಭೆಯ ಸದಸ್ಯರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರಾಗಿದ್ದ ಆಸ್ಕರ್ ಫರ್ನಾಂಡೀಸ್ ಅವರು ಈ ದಿನ ನಿಧನ ಹೊಂದಿರುತ್ತಾರೆ.

1941ರ ಮಾರ್ಚ್, 27ರಂದು ಉಡುಪಿ ಜಿಲ್ಲೆಯ ಉದ್ಯಾವರದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಕಾರ್ಯಕರ್ತರಾಗಿದ್ದರು. ಉಡುಪಿಯ ಮುನ್ಸಿಪಲ್ ಕೌನ್ಸಿಲ್ ಸದಸ್ಯರಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ ಶ್ರೀಯುತರು 7, 8, 9, 10 ಮತ್ತು 11ನೇ ಲೋಕಸಭೆಯ ಸದಸ್ಯರಾಗಿ, ನಾಲ್ಕು ಬಾರಿ ರಾಜ್ಯಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಸರಳ ಸಜ್ಜನಿ ವ್ಯಕ್ತಿತ್ವದ ಧೀಮಂತ ನಾಯಕರಾಗಿದ್ದ ಶ್ರೀಯುತರು ರಾಷ್ಟ್ರಮಟ್ಟದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದರು. ಕೇಂದ್ರದಲ್ಲಿ ಸಾಂಖ್ಯಿಕ ಮತ್ತು ಕಾರ್ಯಕ್ರಮ ಇಲಾಖೆಯ ರಾಜ್ಯ ಸಚಿವರಾಗಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಸಚಿವರಾಗಿ, ವಿದೇಶಾಂಗ ಇಲಾಖೆಯ ರಾಜ್ಯ ಸಚಿವರಾಗಿ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ರಾಜ್ಯ ಸಚಿವರಾಗಿ ಹಾಗೂ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಾಗಿ ಅಪಾರ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿದನದಿಂದಾಗಿ ರಾಜ್ಯ ಹಾಗೂ ರಾಷ್ಟ್ರವು ಹಿರಿಯ ಸರಳ ಸಜ್ಜನ ವ್ಯಕ್ತಿತ್ವದ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ.

ಚಲನಚಿತ್ರ ನಟ ವಿಜಯ್ ಅವರು ದಿನಾಂಕ 14.06.2021ರಂದು ನಿಧನ ಹೊಂದಿರುತ್ತಾರೆ. 1983ರ ಜುಲೈ, 18ರಂದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಇ., ಪದವೀಧರರಾಗಿದ್ದರು. 20ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಶ್ರೀಯುತರು ಚಿತ್ರರಂಗಕ್ಕೆ ಬರುವ ಪೂರ್ವದಲ್ಲಿ ಸಂಚಾರಿ ಥಿಯೇಟರ್‌ನ ಸಮೂಹದ ಸದಸ್ಯರಾಗಿದ್ದರು. 'ನಾನು ಅವನಲ್ಲ ಅವಳು' ಚಿತ್ರದ ಅಮೋಘ ಅಭಿನಯಕ್ಕೆ ರಾಷ್ಟ್ರ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದರು. ಅಪಾರ ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಇವರು ಸಮಾಜದ ದೃಷ್ಟಿಯಲ್ಲಿ ಕಡೆಗಣಿಸಲ್ಪಟ್ಟ ಸಮುದಾಯದ ಏಳಿಗೆಗಾಗಿ ಸ್ವಯಂ ಸಂಘಟನೆಯನ್ನು ಸ್ನೇಹಿತರೊಡಗೂಡಿ ರೂಪಿಸಿ ಹಗಲಿರುಳು ಶ್ರಮಿಸುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರ ಅಕಾಲಿಕ ನಿಧನದಿಂದಾಗಿ ಕಲಾರಂಗವು ಯುವ ಉದಯೋನ್ಮುಖ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಿಂದೆ ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಸದಸ್ಯರಾಗಿದ್ದು, ಕೇಂದ್ರ ಸಚಿವರಾಗಿದ್ದು ತಮ್ಮ ಸುದೀರ್ಘ ಬದುಕನ್ನು ಸಾರ್ವಜನಿಕ ಜೀವನಕ್ಕೆ ಮುಡಿಪಾಗಿಟ್ಟಂತಹ ಹಿರಿಯರಾದ ಸನ್ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರು ನಮ್ಮ ಜಿಲ್ಲೆಯ ಹೆಮ್ಮೆಯ ಪುತ್ರರು. ಮತ್ತು ರಾಷ್ಟ್ರ ಚಲನಚಿತ್ರ ಪ್ರಶಸ್ತಿ ವಿಜೇತರಾದ ನಟ ವಿಜಯ್ (ಸಂಚಾರಿ ವಿಜಯ್)ರವರು ನಿಧನರಾದ ಬಗ್ಗೆ ಸಂತಾಪ ಸೂಚನೆಯನ್ನು ಸದನದಲ್ಲಿ ಮಂಡಿಸಿದ್ದೀರಿ. ಇದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾ, ಅತ್ಯಂತ ನೋವಿನ ಸಂಗತಿಯೇನೆಂದರೆ, ಹಿರಿಯ ರಾಜಕೀಯ ಧುರೀಣ, ಆಸ್ಕರ್ ಫರ್ನಾಂಡೀಸ್‌ರವರು ವಿಧಿವಶರಾದರು. ಈ ದಿನ ಮಧ್ಯಾಹ್ನ ಸುಮಾರು 01 ಗಂಟೆ 53 ನಿಮಿಷಕ್ಕೆ ಅವರು ಮೃತರಾದರು ಎಂದು ಘೋಷಣೆ ಮಾಡಲಾಯಿತು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಕೆಲ ದಿನಗಳ ಹಿಂದೆ ಅವರು ಮನೆಯಲ್ಲಿ ಆಯತಪ್ಪಿ ಜಾರಿ ಬಿದ್ದು ಆಸ್ಪತ್ರೆ ಸೇರಿದ್ದರು. ನಾನು ಅವರನ್ನು ನೋಡುವುದಕ್ಕೆ ಹೋಗಿದ್ದೆ. ಅವರನ್ನು ನೋಡಿ ಬಂದು ಅವರ ಕುಟುಂಬದವರ ಜೊತೆ ಮಾತನಾಡಿದಾಗ, ಮಾಧ್ಯಮದವರು ಕೇಳಿದಂತಹ ಕೆಲವು ಪ್ರಶ್ನೆಗೆ ಉತ್ತರ ಕೊಡುವಾಗ ನನಗೆ ಅವರ ಬದುಕಿನ ಏರಿಳಿತಗಳನ್ನು ಮೆಲುಕು ಹಾಕುವುದಕ್ಕೆ ಅವಕಾಶವಾಗಿತ್ತು. ಸಜ್ಜನ ರಾಜಕಾರಣಕ್ಕೆ ಮತ್ತೊಂದು ಹೆಸರು ಆಸ್ಕರ್ ಫರ್ನಾಂಡೀಸ್ ಎನ್ನುವಂತಹ ಭಾವನೆ ನಮ್ಮ ಜಿಲ್ಲೆಯಲ್ಲಿತ್ತು. ಡಾ|| ವಿ.ಎಸ್. ಆಚಾರ್ಯರ ಸಮಕಾಲೀನ ರಾಜಕಾರಣಿಯಾಗಿ ಅವರು ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶ್ರೀ ಜನಾರ್ಧನ ಪೂಜಾರಿಯವರ ಒಡನಾಡಿಯಾಗಿ ಪಕ್ಷವನ್ನು ಕಟ್ಟಿದ್ದರು. ಅವರಲ್ಲಿರುವಂತಹ ವಿಶೇಷತೆ ಏನೆಂದರೆ, ಚುನಾವಣೆ ಮುಗಿದ ನಂತರ ಮತ್ತೆಂದೂ ಅವರು ಸಾರ್ವಜನಿಕ ಜೀವನದಲ್ಲಿ ರಾಜಕಾರಣದ ಬಗ್ಗೆ ಯೋಚನೆ ಮಾಡಲಿಲ್ಲ. ಅಭಿವೃದ್ಧಿ ಬಗ್ಗೆ, ಆತ್ಮೀಯತೆ ಬಗ್ಗೆ, ಸ್ನೇಹದ ಬಗ್ಗೆ, ಶಾಂತಿ ಸುವ್ಯವಸ್ಥೆ ಬಗ್ಗೆ ಬಹಳ ಗಟ್ಟಿಯಾಗಿ ನಿರ್ಧಾರವನ್ನು ತೆಗೆದುಕೊಳ್ಳುವಂತಹ ಶಕ್ತಿ ಶ್ರೀ ಆಸ್ಕರ್ ಫರ್ನಾಂಡೀಸ್‌ರವರಿಗೆ ಇರುವುದನ್ನು ನಾನು ಕಂಡಿದ್ದೆ. ಅನೇಕ ಸಲ ನಾನು ಅವರನ್ನು ಭೇಟಿಯಾದಾಗಲೆಲ್ಲಾ ನಮ್ಮ ಜಿಲ್ಲೆ ಬಗ್ಗೆ ಮುಂದೇನಾಗಬೇಕು ಎಂದು ಯೋಚನೆ ಮಾಡುತ್ತಿದ್ದರು. ರಾಜ್ಯದ ಜನರ ಜೀವನ ಯಾವ ಮಾರ್ಗದಲ್ಲಿ ಹೋಗಬೇಕು ಎನ್ನುವುದರ ಬಗ್ಗೆ ಅವರು ಸಲಹೆಗಳನ್ನು ಕೊಡುತ್ತಿದ್ದರು. ಅವರ ಅನಾರೋಗ್ಯದಲ್ಲಿಯೂ ಕೂಡ ನಾನು ಅವರನ್ನು ಹಲವಾರು ಸಲ ಭೇಟಿ ಮಾಡಿದ್ದೆ. ಅವರು ಬೇರೆ ಬೇರೆ ಕಾರ್ಯಕ್ರಮಕ್ಕೆ ಸಭೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾರಂಭಗಳಿಗೆ ಬಂದಾಗ ಎಲ್ಲರೊಡನೆ ಬೆರೆಯುವಂತಹ ರೀತಿ ಮತ್ತು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವಂತಹ ಕೆಲಸಗಳು, ಯಾರಾದರೂ ಕೋಪಗೊಂಡರೆ ಅಥವಾ ಯಾವುದಾದರೂ ಉದ್ದೇಶವಿಲ್ಲದೇ ಕೋಪ ಬಂದರೆ ಅವರನ್ನು ಸಮಾಧಾನ ಪಡಿಸುವಂತಹ ವ್ಯವಸ್ಥೆ, ಇದೆಲ್ಲವನ್ನೂ ನೋಡಿದಾಗ ನಮಗೆ ಆಸ್ಕರ್ ಫರ್ನಾಂಡೀಸ್‌ರಂತಹ ಒಬ್ಬ ಹಿರಿಯ ವ್ಯಕ್ತಿಯನ್ನು ಕಳೆದುಕೊಂಡಿದ್ದು ಸಹಜವಾಗಿ ಎಲ್ಲಾ ಪಕ್ಷದವರಿಗೂ ನೋವೆನಿಸಿದೆ ಎಂದು ನನಗನ್ನಿಸಿದೆ. ರಾಜಕಾರಣದಲ್ಲಿ ಅನೇಕ ಮಜಲುಗಳನ್ನು ದಾಟಿ ಅವರು ಮೇಲೆದ್ದು ಬಂದರು. ಸಜ್ಜನ ರಾಜಕಾರಣಕ್ಕೆ ಅವರು ಹೊಸ ಭಾಷ್ಯವನ್ನು ಬರೆದಿದ್ದರು. ಅವರು ಪ್ರಥಮಬಾರಿಗೆ ಲೋಕಸಭಾ ಸದಸ್ಯರಾಗಿದ್ದಾಗ ಬಹು ದೊಡ್ಡ ಅಂತರದಲ್ಲಿ ಅವರು ಗೆದ್ದಿದ್ದನ್ನು ನಾನು ಕಂಡಿದ್ದೆ. ಅನಂತರ ಅವರು ರಾಜ್ಯಸಭೆಗೆ ನಾಲ್ಕು ಬಾರಿ ಆಯ್ಕೆಯಾದುದನ್ನು ನಾನು ಗಮನಿಸಿದ್ದೆ. ಒಟ್ಟಾರೆ ಕರ್ನಾಟಕ ರಾಜಕಾರಣದಲ್ಲಿ ಅತ್ಯಂತ ಗೌರವದಿಂದ ನಾವೆಲ್ಲರೂ ಸ್ಮರಿಸಬೇಕಾದ ಹೆಸರುಗಳಲ್ಲಿ ಆಸ್ಕರ್ ಫರ್ನಾಂಡೀಸ್‌ರವರೂ ಒಬ್ಬರು ಎಂದು ನನಗನ್ನಿಸುತ್ತದೆ. ಅಂತಹ ಹಿರಿಯರೊಬ್ಬರನ್ನು ನಾವು ಕಳೆದುಕೊಂಡು ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ, ಇಡೀ ನಮ್ಮ ಕರ್ನಾಟಕಕ್ಕೆ ಬಹಳ ದೊಡ್ಡ ನಷ್ಟವಾಗಿದೆ ಎಂದು ಅನಿಸುತ್ತದೆ. ಅವರ ಸಲಹೆ ಸೂಚನೆ, ಅವರ ಮಾರ್ಗದರ್ಶನ ನಮ್ಮ ಸಮಾಜಕ್ಕೆ, ನಮ್ಮ ರಾಜ್ಯಕ್ಕೆ ಅಗತ್ಯವಿತ್ತುಎಂದು ಅನ್ನಿಸಿತ್ತು. ಕಾಂಗ್ರೆಸ್ಸಿನ ಬಹಳ ಉಚ್ಛ್ರಾಯ ಕಾಲದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಎನ್ನುವ ಮಟ್ಟಿಗೆ ಕೂಡ ಅವರನ್ನು ಬಿಂಬಿಸಲಾಗಿತ್ತು. ಅನಂತರ ಅವರು ಕೇಂದ್ರದ ಸಂಪರ್ಕ ಹೊಂದಿದರು. ನಮ್ಮ ಜಿಲ್ಲೆಗೆ ಅನೇಕ ಯೋಜನೆಗಳನ್ನು ತಂದಿದ್ದರು. ಹಲವಾರು ಯೋಜನೆಗಳಲ್ಲಿ ನನಗೆ ನೆನಪಿರುವ ಮಟ್ಟಿಗೆ ಎಂ.ಆರ್.ಪಿ.ಎಲ್., ಎಂಬ ಬಹು ದೊಡ್ಡ ಸಂಸ್ಥೆಯನ್ನು ತರುವಲ್ಲಿ ಅವರು ಯಶಸ್ವಿಯಾಗಿದ್ದರು. ಅವರು ಒಂದು ವ್ಯವಸ್ಥೆಯನ್ನು ತಂದರೆ, ಯೋಜನೆಯನ್ನು ತಂದರೆ ಅದರ ಫಲಿತಾಂಶ ಆಗುವವರೆಗೂ ಕೂಡ ಅದರ ಬೆನ್ನತ್ತಿ, ಅದು ಜನಸಾಮಾನ್ಯರಿಗೆ ತಲುಪುವವರೆಗೂ ಕೂಡ ನೋಡಿಕೊಳ್ಳುತ್ತಿದ್ದರು. ಅನೇಕ ಸಲ ಡಾ: ಆಚಾರ್ಯರಂತಹ ಹಿರಿಯರು ಮತ್ತು ಆಸ್ಕರ್ ಫರ್ನಾಂಡೀಸ್‌ರವರು ಇಬ್ಬರೇ ಕುಳಿತು ಮಾತನಾಡಿ ನಮ್ಮ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಗಹನವಾದ ಚರ್ಚೆ ಮಾಡುವುದನ್ನು ನಾನು ಗಮನಿಸಿದ್ದೆ. ಅಂತಹ ಹಿರಿಯರೊಬ್ಬರ ನಿಧನ ಕೇವಲ ಅವರ ಪಕ್ಷಕ್ಕೆ ಮಾತ್ರವಲ್ಲ ಸಾರ್ವಜನಿಕ ಜೀವನದಲ್ಲಿ ಸಜ್ಜನ ರಾಜಕಾರಣಕ್ಕೆ ಬಹು ದೊಡ್ಡ ನಷ್ಟ. ಅದರಲ್ಲೂ ನಮ್ಮ ರಾಜ್ಯಕ್ಕೆ ಅವರ ಮಾರ್ಗದರ್ಶನ ತುಂಬಾ ಅಗತ್ಯವಾಗಿತ್ತು ಎಂದು ನನಗನಿಸಿತ್ತು. ಅವರು ಬೇರೆ ಬೇರೆ ಖಾತೆಗಳ ಸಚಿವರಾಗಿ ಭೂಸಾರಿಗೆ ಮತ್ತು ಹೆದ್ದಾರಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರಾಗಿ ಮಾಡಿರುವಂತಹ ಕೆಲಸಗಳು, ಕಾರ್ಮಿಕ ಖಾತೆ ಸಚಿವರಾಗಿ ಮಾಡಿರುವಂತಹ ಕೆಲಸಗಳು, ಬೇರೆ ಬೇರೆ ಕೆಲಸಗಳನ್ನೆಲ್ಲಾ ಗಮನಿಸಿದಾಗ ಅಂತಹ ಹಿರಿಯರೊಬ್ಬರನ್ನು ಕಳೆದುಕೊಂಡು ಈ ರಾಜ್ಯ ರಾಜಕಾರಣದಲ್ಲಿ ಒಬ್ಬ ಒಳ್ಳೆಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಿದೆ ಎಂಬ ನೋವು ಇಡೀ ರಾಜ್ಯಕ್ಕೆ ವ್ಯಾಪಿಸಿದೆ ಎಂದು ಅನಿಸುತ್ತದೆ. ಆ ಕಾರಣಕ್ಕೋಸ್ಕರ ಅವರ ಸಂತಾಪ ಸೂಚನೆ ವಿಷಯವನ್ನು ಏನು ಮಂಡನೆ ಮಾಡಿದ್ದೀರಿ ಅದಕ್ಕೆ ನನ್ನ ಸಹಮತವನ್ನು ಅತ್ಯಂತ ಭಾವುಕತೆಯಿಂದ ತಿಳಿಸಲಿಚ್ಛಿಸುತ್ತೇನೆ.

ಎರಡನೆಯದಾಗಿ, ಚಲನಚಿತ್ರ ನಟರಾದ ವಿಜಯ್ (ಸಂಚಾರಿ ವಿಜಯ್)ರವರು ನಿಧನ ಹೊಂದಿದ್ದಾರೆ. 'ನಾನು ಅವನಲ್ಲ ಅವಳು' ಎಂಬ ಚಲನಚಿತ್ರದ ಅಮೋಘ ಅಭಿನಯಕ್ಕೆ ಅವರಿಗೆ ರಾಷ್ಟ್ರ ಪ್ರಶಸ್ತಿ ಸಿಕ್ಕಿದ್ದು, ಅವರು ಸಮಾಜದ ಕಟ್ಟ ಕಡೆಯ ಮನುಷ್ಯರ ಸೇವೆ ಮಾಡುವುದಕ್ಕೆ ತನ್ನನ್ನು ತಾನು ಮಾನಸಿಕವಾಗಿ ತೊಡಗಿಸಿಕೊಂಡಿದ್ದು, ಇವೆಲ್ಲವೂ ಕೂಡ ಉದಯೋನ್ಮುಖ ಕಲಾವಿದನಲ್ಲಿ ಇರಬಹುದಾದಂತಹ ಅಪರೂಪದ ಗುಣಗಳಲ್ಲಿ ಒಂದು. ಅಂತಹ ಶ್ರೇಷ್ಠ ಚಲನಚಿತ್ರ ನಟರಾದ ವಿಜಯ್ (ಸಂಚಾರಿ ವಿಜಯ್)ರವರನ್ನು ಕಳೆದುಕೊಂಡು ಕನ್ನಡ ಚಲನಚಿತ್ರ ರಂಗ ಮಾತ್ರವಲ್ಲ, ಎಲ್ಲಾ ಕಲಾಪ್ರೇಮಿಗಳಿಗೂ ದುಗುಡವಾಗಿದೆ, ನೋವಾಗಿದೆ, ಸಂಕಟವಾಗಿದೆ ಎನ್ನುವಂತಹ ಮಾತುಗಳನ್ನು ಉಲ್ಲೇಖ ಮಾಡುತ್ತಾ ತಾವು ಮಂಡಿಸಿರುವಂತಹ ಈ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆ ನೋವನ್ನು ಸಹಿಸುವಂತಹ ಶಕ್ತಿಯನ್ನು ಪರಮಾತ್ಮ ಅವರ ಕುಟುಂಬಕ್ಕೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಧನ್ಯವಾದಗಳು.

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ತಂದಂತಹ ಸಂತಾಪ ಸೂಚಕ ಗೊತ್ತುವಳಿಯನ್ನು ಬೆಂಬಲಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಶ್ರೀಮಾನ್ ಆಸ್ಕರ್ ಫರ್ನಾಂಡೀಸ್ ಅವರು ಮಾನವೀಯ ಮೌಲ್ಯಗಳನ್ನು ಹೊಂದಿದಂತಹ, ನಯ, ವಿನಯ, ಸೌಜನ್ಯತೆಯ ಸಾಕಾರ ಮೂರ್ತಿ ಎಂದು ನಾಡಿನ ಮತ್ತು ರಾಷ್ಟ್ರದ ಉದ್ದಗಲಕ್ಕೂ ಖ್ಯಾತಿಯನ್ನು ಪಡೆದಿದ್ದರು. ಪ್ರಾಮಾಣಿಕತೆ, ನಿಷ್ಠೆ ಮತ್ತು ದಕ್ಷತೆಗೆ ಇನ್ನೊಂದು ಹೆಸರೆಂದರೆ ಆಸ್ಕರ್ ಫರ್ನಾಂಡೀಸ್ ರವರು ಎನ್ನುವಷ್ಟರ ಮಟ್ಟಿಗೆ ಅವರು ನಿಷ್ಠಾವಂತರಾಗಿ, ಪ್ರಾಮಾಣಿಕವಾಗಿ ದಕ್ಷತೆಯಿಂದ ಕೆಲಸ ಮಾಡುವುದನ್ನು ನಾವು ನೋಡಿದ್ದೇವು. ನಿಜವಾಗಿಯೂ ಆಸ್ಕರ್ ಫರ್ನಾಂಡೀಸ್‌ರವರು ನಮ್ಮ ಸಭಾನಾಯಕರು ಹೇಳಿದ ಹಾಗೆ ಚುನಾವಣೆ ಮುಗಿದ ನಂತರ ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ಧರ್ಮಾತೀತವಾಗಿ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂತಹ ವ್ಯಕ್ತಿಯಾಗಿದ್ದರೇ ಹೊರತು ಪಕ್ಷ ರಾಜಕಾರಣ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹವರಾಗಿರಲಿಲ್ಲ. ಆ ಭಾಗದ ಜನರ ಅಭಿವೃದ್ಧಿ ಬಗ್ಗೆ ಅವರು ಯಾವಾಗಲೂ ಚಿಂತನೆ ಮಾಡುತ್ತಿದ್ದರು. ಐದು ಸಲ ಲೋಕಸಭಾ ಸದಸ್ಯರಾಗಿ, ನಾಲ್ಕು ಬಾರಿ ರಾಜ್ಯಸಭಾ ಸದಸ್ಯರಾಗಿ ಅತ್ಯುತ್ತಮವಾದಂತಹ ಸೇವೆ ಮಾಡುವುದರ ಜೊತೆಗೆ ಕೇಂದ್ರದಲ್ಲಿ ಅನೇಕ ಖಾತೆಗಳನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ್ದನ್ನು ನಾವೆಲ್ಲರೂ ಕಂಡಿದ್ದೇವು.

(ಮುಂದು)

**(645) 13-09-2021/ 04-40/ ಕೆಹೆಚ್-ಜಿಆರ್(ವಿಕೆ)**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಧ್ಯೆ ಸೇತುವೆಯಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಸದಾ ಚಿಂತನೆ ಮಾಡುವಂತಹ ಅತ್ಯಂತ ಅಪರೂಪದ ರಾಜಕಾರಣಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಪಕ್ಷದಲ್ಲಿ ಬಹಳ ಎತ್ತರವಾದ ರಾಷ್ಟ್ರ ನಾಯಕತ್ವವನ್ನು ಹೊಂದಿರುವಂತಹವರು. ನಮ್ಮ ದೇಶದ ಹಿಂದಿನ ನೆಚ್ಚಿನ ಪ್ರಧಾನ ಮಂತ್ರಿಯಾದಂತಹ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ನಮ್ಮ ಹಿಂದಿನ ಯುವ ಪ್ರಧಾನ ಮಂತ್ರಿಯಾಗಿದಂತಹ ಶ್ರೀಯುತ ರಾಜೀವ್ ಗಾಂಧಿಯವರು ಹಾಗೂ ನಮ್ಮ ಪಕ್ಷದ ಪರಮೋಚ್ಚ ನಾಯಕಿಯಾದ ಶ್ರೀಮತಿ ಸೋನಿಯಾ ಗಾಂಧಿಯವರ ಜೊತೆ ಸಾಕಷ್ಟು ಕೆಲಸ-ಕಾರ್ಯಗಳನ್ನು ಮಾಡಿರುವಂತಹದ್ದು ಇದೆ. ಶ್ರೀ ಆಸ್ಕರ್ ಫರ್ನಾಂಡೀಸ್‌ರವರನ್ನು ಭೇಟಿ ಮಾಡಲು ಮಾನ್ಯ ಸಭಾನಾಯಕರು ಹೋದ ಹಾಗೆ ನಾನು ಕೂಡ ಹೋಗಿದ್ದೆ. ಅವರು ಅನಾರೋಗ್ಯದಿಂದ ಬಳಲುವಂತಹ ಸಂದರ್ಭದಲ್ಲಿ ಯೆನಪೋಯ ಆಸ್ಪತ್ರೆಗೆ ಅವರನ್ನು ನೋಡಿ ಮಾತನಾಡಿಸುವುದಕ್ಕೆ ಹೋಗಿದ್ದೆ. ಆದರೆ, ಅವರಿಗೆ ಪ್ರಜ್ಞೆ ಇರಲಿಲ್ಲ. ಗ್ಲಾಸ್‌ನಲ್ಲಿ ದೂರದಿಂದ ನೋಡಿಕೊಂಡು, ಅವರ ಕುಟುಂಬದವರ ಜೊತೆಗೆ ವಿಚಾರಗಳನ್ನು ಹಂಚಿಕೊಂಡು ಬಂದಿದ್ದೇನೆ. ಆಗಲೇ ಸ್ವಲ್ಪ ಕಷ್ಟ ಇತ್ತು. ಆದರೆ, ಇತ್ತೀಚೆಗೆ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ಅಪಾಯದಿಂದ ಪಾರಾಗಿದ್ದಾರೆ ಎನ್ನುವಂತಹ ಮಾಹಿತಿ ನನಗೂ ಕೂಡ ಬಂದಿತ್ತು. ಆದರೆ, ಇವತ್ತು ಅವರು ದುರ್ದೈವದಿಂದ ನಮ್ಮನ್ನು ಅಗಲಿದ್ದಾರೆ. ಮಾನ್ಯ ಸಭಾನಾಯಕರು ಹೇಳಿದ ಹಾಗೆ ಇವರು ಬಹಳಷ್ಟು ಪ್ರಾಜೆಕ್ಟ್‌ಗಳನ್ನು ಮಾಡಿದ್ದು, ಶಿರಾಡಿಘಾಟ್ ಪ್ರಾಜೆಕ್ಟ್‌ಗೆ ಕಾರಣೀಭೂತರು ಎಂದರೆ ತಪ್ಪಾಗುವುದಿಲ್ಲ. ಈ ರೀತಿಯಾದಂತಹ ಒಬ್ಬ ಶ್ರೇಷ್ಠ ರಾಜಕಾರಣಿಯಾಗಿದ್ದಾರೆ. ಅದರಲ್ಲೂ ವಿಶೇಷವಾಗಿ ನಮ್ಮ ಪಕ್ಷಕ್ಕೆ ದೊಡ್ಡ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾನಿಯಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಕೀಲ್ ಕಮಿಟಿಯ ಸದಸ್ಯರಾಗಿಯೂ ಕೂಡ ಕೆಲಸ ಮಾಡಿದ್ದರು. ನಮ್ಮ ಪಕ್ಷದಲ್ಲಿ ಅತ್ಯುನ್ನತ ಸ್ಥಾನದಲ್ಲಿ ಸದಾ ಕಾಲ ಇರುತ್ತಿದ್ದರು. ರಾಜ್ಯದ ಎಲ್ಲಾ ಕಾಂಗ್ರೆಸ್ ನಾಯಕರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಹಗಲು-ರಾತ್ರಿ ನಿರಂತರವಾಗಿ ಕೆಲಸ ಕಾರ್ಯಗಳನ್ನು ಮಾಡಿ ರಾಜ್ಯದ ಅಭಿವೃದ್ಧಿಗೆ ನಮ್ಮ ಪಕ್ಷದ ಒಳಿತಿಗಾಗಿ ಮತ್ತು ಉನ್ನತಿಗಾಗಿ ಸಾಕಷ್ಟು ಕೆಲಸ ಮಾಡಿದಂತಹ ಶ್ರೀಮಾನ್ ಆಸ್ಕರ್ ಫರ್ನಾಂಡೀಸ್‌ರವರು ಪಕ್ಷಾತೀತ ವ್ಯಕ್ತಿಗಳಾಗಿದ್ದರು. ಅವರ ಅಗಲುವಿಕೆ ಕೇವಲ ನಮ್ಮ ಪಕ್ಷಕ್ಕೆ ಮತ್ತು ನಮ್ಮ ರಾಜ್ಯಕ್ಕೆ ಮಾತ್ರ ಹಾನಿ ಅಲ್ಲ. ಈ ರಾಷ್ಟ್ರಕ್ಕೆ ಹಾನಿಯಾಗಿದೆ. ಇವರು ಒಂದು ಮಾನವೀಯ ಮೌಲ್ಯಗಳನ್ನು ಹೊಂದಿದಂತಹ ಮತ್ತು ಸನ್ನಡತೆ ಹೊಂದಿದಂತಹ ಹಾಗೂ ಅತ್ಯುತ್ತಮ ಗುಣಗಳನ್ನು ಹೊಂದಿದಂತಹ ಒಬ್ಬ ರಾಜಕಾರಣಿಯ ಅಗಲುವಿಕೆ ನಿಜವಾಗಿಯೂ ಇಡೀ ಸಾರ್ವಜನಿಕ ಬದುಕಿಗೆ ಒಂದು ದೊಡ್ಡ ಹಾನಿ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಇನ್ನಷ್ಟು ದಿವಸ ಅವರು ಬದುಕಿರಬೇಕಾಗಿತ್ತು ಎನ್ನುವಂತಹ ಅಪೇಕ್ಷೆ ನಮ್ಮಲ್ಲಿ ಇತ್ತು. ನಿಶ್ಚಿತವಾಗಿಯೂ ಅವರು ಆ ಒಂದು ಶಸ್ತ್ರ ಚಿಕಿತ್ಸೆಯಿಂದ ಗುಣಮುಖರಾಗುತ್ತಾರೆಂದು ನಾವೆಲ್ಲರೂ ಭಾವಿಸಿದ್ದೇವು. ದುರ್ದೈವ ನಾವೆಲ್ಲರೂ ಅವರನ್ನು ಕಳೆದುಕೊಂಡಿದ್ದೇವೆ.

ಅದೇ ರೀತಿ ಖ್ಯಾತ ಚಲನಚಿತ್ರ ನಟ ಸಂಚಾರಿ ವಿಜಯ್‌ರವರು ಅಪಾರವಾಗಿ ಸಾಮಾಜಿಕ ಕಾಳಜಿಯನ್ನು ಹೊಂದಿದಂತಹವರು ಮತ್ತು "ನಾನು ಅವನಲ್ಲ ಅವಳು" ಎನ್ನುವಂತಹ ಚಿತ್ರದಲ್ಲಿ ಅವರು ಮಾಡಿದಂತಹ ಅಭಿನಯಕ್ಕೆ 'ರಾಷ್ಟ್ರ ಪ್ರಶಸ್ತಿ'ಯನ್ನು ಪಡೆದಂತಹವರು. ಚಲನಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡುವುದರ ಜೊತೆಗೆ ಸಾಮಾಜಿಕ ಚಿಂತನೆ ಕಳಕಳಿಯನ್ನು ಹೊಂದಿದ್ದಂತಹ ಖ್ಯಾತ ಚಲನಚಿತ್ರ ನಟ ಸಂಚಾರಿ ವಿಜಯ್‌ರವರ ಅಕಾಲಿಕ ನಿಧನ ನಿಶ್ಚಿತವಾಗಿಯೂ ಚಲನಚಿತ್ರ ರಂಗ ಒಬ್ಬ ಶ್ರೇಷ್ಠ ಕಲಾವಿದನನ್ನು ಕಳೆದುಕೊಂಡಾಂತಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ, ಇವರಿಬ್ಬರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ದಯಪಾಲಿಸಲಿ ಮತ್ತು ಅವರ ಕುಟುಂಬ ವರ್ಗದವರಿಗೆ, ಸ್ನೇಹಿತರಿಗೆ, ಹಿತೈಸಿಗಳಿಗೆ, ಅಭಿಮಾನಿಗಳಿಗೆ ಹಾಗೂ ಬಂಧು-ಬಾಂಧವರಿಗೆ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಆ ಭಗವಂತನು ಕರುಣಿಸಲೆಂದು ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ದಿವಂಗತರುಗಳಾದ ಶ್ರೀ ಆಸ್ಕರ್ ಫರ್ನಾಂಡೀಸ್ ಮತ್ತು ಶ್ರೀ ಸಂಚಾರಿ ವಿಜಯ್ ರವರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಇವತ್ತಿನ ಸಭೆಯನ್ನು ನಾಳೆ ಬೆಳಿಗ್ಗೆ 10-30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:14ನೇ ಸೆಪ್ಟೆಂಬರ್ ಮಾಹೆ 2021ರ ಮಂಗಳವಾರದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"